ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 38

ಸೆಪ್ಟೆಂಬರ್ 21, 2008

ಕನ್ನಡ ವಾರಪತ್ರಿಕೆ

ರೂ. 5/-


www.janashakthi.org





ಬಜರಂಗದಳ ಮತ್ತು ಭಯೋತ್ಪಾದನೆ

ಬಿಜೆಪಿ ಕಾರ್ಯಕಾರಿಣಿ ಕುರ್ಚಿ ಕಾಳಜಿಯ ಪ್ರಹಸನ



ಮಹಾಸ್ಫೋಟದ ಪುನರ್‌ಸೃಷ್ಟಿ



ಒಲಂಪಿಕ್ಸ್‌ನಲ್ಲಿ ಚೀನಾ ಚಿನ್ನದ ಸೂರೆ ನೈಜ ಪ್ರಜಾಪ್ರಭುತ್ವದ ಅಗಾಧ ಸಾಧನೆ



ದಾವಣಗೆರೆ : ಬಾಡಾ ಚರ್ಚ್ ಮೇಲೆ ಧಾಳಿ



ಸಾಮ್ರಾಜ್ಯ ವಿಸ್ತರಿಸುವತ್ತ ರಾಮಚಂದ್ರಪುರ ಮಠ

ಬಿಎಂಟಿಸಿ ಖಾಸಗೀಕರಣದತ್ತ

ಜನಶಕ್ತಿ ಕನ್ನಡ ವಾರಪತ್ರಿಕೆ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಅತೀಂದ್ರಿಯ ಭ್ರಮಾಲೋಕ ಮತ್ತು ಕೋವೂರ್

ಡಾ. ಕೋವೂರ್ ಈ ಮಾನವ ನಿರ್ಮಿತ ಮೂಢನಂಬಿಕೆಗಳನ್ನು ತಮ್ಮ ಯೌವನಾವಸ್ಥೆಯಲ್ಲಿಯೇ ಅರ್ಥೈಸಿ ಕೊಂಡಿದ್ದರೂ ಅದಕ್ಕೆಂದೇ ಅವರು ಎರಡು ವರ್ಷಗಳ ಕಾಲ ಜ್ಯೋತಿಷ್ಯ, ಹಸ್ತಸಾಮುದ್ರಿಕೆ ಮುಂತಾದವುಗಳನ್ನೆಲ್ಲಾ ಆಮೂಲಾಗ್ರವಾಗಿ ಕಲಿತರು. ಅವರೇ ಎನ್ನುವಂತೆ ಅದರಿಂದಾದ ಲಾಭವೆಂದರೆ ಅವುಗಳು ಕೇವಲ 'ನಿರರ್ಥಕ' - ಎಂಬ ತಿಳಿವು ಬಂದುದು.

ಭಾಗ 3

ಕೋವೂರ್ ಅವರು 1970 ರಲ್ಲಿ ಕೆಂಡದ ಮೇಲೆ ನಡೆಯುವ ಕಟರಗಾಮ ಭಕ್ತರ ಸಂಘದ ಅಧ್ಯಕ್ಷರಿಗೆ ಉತ್ತರವಾಗಿ - ಬೆಂಕಿಯ ಮೇಲೆ 30 ಸೆಕೆಂಡ್‌ಗಳ ಕಾಲ ತಮ್ಮ ಪಾದಗಳಲ್ಲಿ ಗುಳ್ಳೆ ಬರದೇ ನಿಂತಲ್ಲಿ ತಾನು ಒಂದು ಲಕ್ಷ ರೂ. ಕೊಡುವುದಾಗಿ ಸಾರಿದರು. ಆದರೆ, ಆ ಮನುಷ್ಯನು ಪಂಥಾಹ್ವಾನವನ್ನು ಎದುರಿಸಲು ಮುಂದೆ ಬರಲಿಲ್ಲ.

ಒಮ್ಮೆ ಮಿ. ನೆವಿಲ್ಲೆ ಡಿ'ಸಿಲ್ವಾ ಸಿಲೋನ್ ಟೈಮ್ಸ್‌ನಲ್ಲಿ ತನಗೆ ಟೆಲಿಪತಿ ಶಕ್ತಿ ಇರುವುದಾಗಿಯೂ ಅದನ್ನು ತಾನು ಸಾಧಿಸಿ ತೋರಿಸುವುದಾಗಿಯೂ ಪ್ರಕಟಪಡಿಸಿದ. 5ನೆಯ ಅಗಸ್ಟ್ 1967 ರಲ್ಲಿ ಸಿಲೋನ್ ಟೈಮ್ಸ್‌ನ ಕಚೇರಿಯಲ್ಲಿ ಆ ಪತ್ರಿಕೆಯ ಸಂಪಾದಕರ ಸಮ್ಮುಖದಲ್ಲಿ 'ಪ್ರಯೋಗ' ನಡೆಯಿತು. ಆದರೆ ವಿಲ್ಲೆ ಡಿ' ಸಿಲ್ವಾ ಕೊಟ್ಟ ಯಾವ ಉತ್ತರವೂ ಸರಿಯಿರಲಿಲ್ಲ. ತನ್ನ ಗಿರಾಕಿಗಳಲ್ಲಿ, ಮುಖ್ಯಮಂತ್ರಿಗಳು, ಎಮ್.ಪಿ.ಗಳು ಇದ್ದಾರೆನ್ನುವ ಇನ್ನೋರ್ವ ಭವಿಷ್ಯ ವಕ್ತಾರ- 'ದವಸಾ' ಪತ್ರಿಕೆಯ ಸಂಪಾದಕ ಸ್ವಯಂ ಸುರಕ್ಷಿತ ಕೋಣೆಯಲ್ಲಿ ಇಟ್ಟಂತಹ ಸೀಲು ಮಾಡಿದ ಕವರಿನೊಳಗಿನ ಕರೆನ್ಸಿನೋಟಿನ ನಂಬರನ್ನು ಓದುವುದಾಗಿ ಮುಂದೆ ಬಂದ. ಇದಕ್ಕೆ ಯೋಗ್ಯ ದಿನದಲ್ಲಿ ದಿವ್ಯದೃಷ್ಟಿ ಬರಲು ಪೂಜೆ ಮಾಡಲು ಅಪೇಕ್ಷೆ ವ್ಯಕ್ತಪಡಿಸಿದ. ಅವುಗಳೆಲ್ಲಾ ನಡೆದು ಕೊನೆಗೆ ಆತ ಹೇಳಿದ ನಂಬರಿಗೂ ಕವರಿನಲ್ಲಿಟ್ಟ ಕರೆನ್ಸಿಯ ನಂಬರಿಗೂ ಹೋಲಿಕೆ ಇರಲಿಲ್ಲ.

ಓರ್ವ ಬೌದ್ಧ ಸನ್ಯಾಸಿ ರೆ. ಲಾಲಗೆಡರಾ ಇಂದುಸುವನ ಸಿಂಹಳದ ವೃತ್ತಪತ್ರಿಕೆಯಲ್ಲಿ ಕೋವೂರರ ಛಾಲೇಂಜಿನಂತೆ ಛಾಯಾಚಿತ್ರ ತೆಗೆಯಲು ಸಾಧ್ಯವಾಗುವ ಹಾಗೆ ಭೂತವನ್ನು ತೋರಿಸುವುದಾಗಿ ಪ್ರಕಟಿಸಿದ. ಅದೇ ಪತ್ರಿಕೆಯಲ್ಲಿ ಕೋವೂರರ ಅಂಗೀಕಾರ ಪ್ರಕಟವಾದ ಮೇಲೆ ಆತನು ತೆಪ್ಪಗೆ ಕುಳಿತ.

ನಂದಿರಿಸ್ ಡಿ' ಸಿಲ್ವಾ ಎಂಬ ಪಾನ್‌ಡೂರಾದ ಮಾಂತ್ರಿಕರೊಬ್ಬರು ಸಲುಮಿನಾದಲ್ಲಿ - ತಾವು ಹಸ್ತದಲ್ಲಿ ದೆವ್ವವನ್ನು ನಿಲ್ಲಿಸುವುದಾಗಿಯೂ, ಕನ್ನಡಿಯಲ್ಲಿ ತೋರಿಸುವುದಾಗಿಯೂ, ತಾವು ಕುಳಿತ ಕುರ್ಚಿಗೆ ಬಡಿಯುವಂತೆ ಮಾಡುವುದಾಗಿಯೂ ಹಾಗೂ ದೆವ್ವಗಳ ಮೂಲಕ ಮನೆಯ ಪೀಠೋಪಕರಣಗಳನ್ನು ನಾಶ ಮಾಡುವದಾಗಿಯೂ ಬರೆದರು. ಸಲುಮಿನಾದ ಸಂಪಾದಕ ಮತ್ತು ಕೋವೂರರಿಂದ ಇದಕ್ಕಾಗಿ ಹಲವಾರು ದಿನಗಳು ನಿಶ್ಚಯಿಸಲ್ಪಟ್ಟವು. ಆದರೆ ಸದ್ರಿ ಅಸಾಮಿ ಮಾತ್ರ ಬರಲೇ ಇಲ್ಲ.

1969ರಲ್ಲಿ ಡಾ. ಎಮ್.ಎಚ್.ಎಮ್. ನಜೀಮ್ (ವಾಟ್‌ವಾಲ್) ತಮ್ಮನ್ನು ಅತೀಂದ್ರಿಯ ಸಾಧಕರೆಂದು ಸಾರಿಕೊಳ್ಳುತ್ತಾ ಕೆಳಗಿನ ಪತ್ರ ಬರೆದರು-

'ಭೂತಗಳ ಆಧಾರದ ಬಗೆಗೆ - ಪೋಯಾ ದಿನಗಳ ಸೂರ್ಯಾಸ್ತ ಸಮಯಗಳನ್ನು ಬಿಟ್ಟು ಬೇರೆ ಯಾವುದೇ ದಿನ ನಾನು ಭೂತವನ್ನು ತೋರಿಸಲು ತಯಾರಿದ್ದೇನೆ. ಈ ಪಣ - ಆಹ್ವಾನವು ಕೇವಲ ವಿಚಾರವಾದಿಗಳ ಸಂಘದ ಸದಸ್ಯರುಗಳಿಗೆ ಮಾತ್ರ. ಸಾರ್ವಜನಿಕರಿಗಲ್ಲ. ನಿಮ್ಮಲ್ಲಿ ಯಾರೇ ಒಬ್ಬರು ಎಣ್ಣೆದೀಪ ಯಾ ಮೇಣದ ಬತ್ತಿಯನ್ನು ಕೋಣೆಯಲ್ಲಿ ಹಚ್ಚಿ ಬೇರೆ ದೀಪಗಳನ್ನು ಆರಿಸಿ ಬಾಗಿಲಿಗೆ ಬೀಗ ಹಾಕಿ 'ಕೀ' ಸಹಿತವಾಗಿ ಹೊರಬರಬೇಕು. ನಾನೂ ಸೇರಿ ಎಲ್ಲರೂ ಕೋಣೆಯಿಂದ ಹೊರಗಿರುವೆವು. ಐದು ನಿಮಿಷಗಳಲ್ಲಿ ಮುಚ್ಚಲ್ಪಟ್ಟ ಕೋಣೆ ತನ್ನಂತೆಯೇ ತೆರೆದುಕೊಳ್ಳುವುದು, ಅದೇ ಗಳಿಗೆಯಲ್ಲಿ ದೀಪಗಳು ನಂದುತ್ತವೆ. ಹತ್ತು ನಿಮಿಷಗಳ ನಂತರ ದೀಪಗಳು ತನ್ನಂತೆಯೇ ಹೊತ್ತಿಕೊಳ್ಳುತ್ತವೆ. ನೀವು ಆಸಕ್ತರಿದ್ದಲ್ಲಿ ಮೂರು ವಾರಗಳಿಗೆ ಮುಂಚಿತವಾಗಿ ನನಗೆ ತಿಳಿಸಿರಿ.?

ಡಾ. ನಜೀಮರನ್ನು ರಿಜಿಸ್ಟ್ರಿ ಪತ್ರದ ಮೂಲಕ 'ತಮ್ಮ ಮನೆಗೆ 22 ನವೆಂಬರ್ 1969 ಕ್ಕೆ ಬಂದು ತಮ್ಮ ಅತೀಂದ್ರಿಯ ಶಕ್ತಿಯನ್ನು ಪತ್ರಿಕೋದ್ಯಮಿಗಳು, ನ್ಯಾಯಾಧೀಶರುಗಳ ಮುಂದೆ ತೋರಿಸಬಹುದೆಂತಲೂ ಕೋವೂರ್ ಬರೆದರು, ಕೋವೂರರ ಆಹ್ವಾನವನ್ನು ನಜೀಮ್ ಒಪ್ಪಿಕೊಂಡರು.


ಆದರೆ ನಿಗದಿಪಡಿಸಿದ ದಿನ ಭೂತಸಾಧಕ ನಜೀಮ್ ಬರಲೇ ಇಲ್ಲ 'ಟೈಮ್ಸ್ ಆಫ್ ಸಿಲೋನ್' ಬರೆಯಿತು - ' ಆ ವ್ಯಕ್ತಿ ಬರಲೇ ಇಲ್ಲ, ಪಂಥಹ್ವಾನವನ್ನು ಎದುರಿಸುವಲ್ಲಿ ಅವರು ವಿಫಲರಾಗಿ ಪಲಾಯನಗೈದರು?.

ಇದೇ ರೀತಿ ಜ್ಯೋತಿಷ್ಯವನ್ನು ಸಾಬೀತುಗೊಳಿಸುವುದಾಗಿ ಒಪ್ಪಿದ ಕೆಗೆಲೆಯ ಕೆಂಪತಿಯಾ, ಬೋರಲಸ್ಗಾಮುವಾ ಮತ್ತು ಎಸ್. ಪಿ. ವಂಕೈಲಂ ಬರ್ಗ್ ಮೊದಲಾದ ಕುಖ್ಯಾತರು ನಿಗದಿಪಡಿಸಿದ ಸಮಯಕ್ಕೆ ಬಾರದೆ ತಪ್ಪಿಸಿಕೊಂಡರು.

ಸಿಲೋನ್ ವಿಚಾರವಾದಿಗಳ ವಿಶೇಷ ಸಭೆಯೊಂದು 11 ಜುಲೈ 1970 ರಂದು ನಡೆದಿತ್ತು. ಈ ವಿಶೇಷ ಸಭೆಗೆ ಕಾರಣ: ಸಂಘದ ಸದಸ್ಯರಾದ ಥಿರು ನವಕ್ಕರು (ಇಲೆಕ್ಟ್ರಿಕಲ್ ಎಂಜನಿಯರ್) - ಬಂಡಾರವೇಲಾದ ಸಾಯೀಬಾಬಾನ ಭಕ್ತನೊಬ್ಬ ತನ್ನ ಸಿದ್ಧಿಗಳಿಂದ ಮಹಾ ಪವಾಡಗಳನ್ನು ಮಾಡುವುದಾಗಿಯೂ ಸಾಯಿಬಾಬಾರೊಂದಿಗೆ ಕೋಲಂಬೊಕ್ಕೆ ಭೆಟ್ಟಿ ಕೊಡುವುದಾಗಿ ಹೇಳಿದ್ದುದರಿಂದಾಗಿಯಾಗಿತ್ತು. ಆದರೆ ಆ ಭಕ್ತ ಕೊನೆಗೆ ಓರ್ವ ಭಕ್ತಿಣಿಯೊಂದಿಗೆ ಮಾಯವಾದುದಾಗಿ ತಿಳಿಯಿತು.

ತಮಿಳು ನಾಡಿನ ದಿನಪತ್ರಿಕೆಯೊಂದು (ದಿನಕರನ್‌ವರಮಂಜರಿ) ಯಲ್ಲಿ ತಮಿಳುನಾಡಿನ ನೀಲಕಂಠ ತಾತಾಜಿಯವರ ಬಗ್ಗೆ ಲೇಖನ ಪ್ರಕಟವಾಗಿತ್ತು. ಆ ಲೇಖನದಲ್ಲಿ ಆತ 'ಭಗವಾನ್' ಸಾಯಿಬಾಬಾರಂತೆ ಪವಾಡಗಳನ್ನು ಮಾಡಬಲ್ಲರು; ಮಾತ್ರವಲ್ಲದೆ ದೇವರ ಅವತಾರವೆಂದೂ ವರ್ಣಿಸಲಾಗಿತ್ತು. ಅವರ ಆಶೀರ್ವಾದವನ್ನು ಪಡೆಯಲು ಬಂದ ಭಕ್ತಾಧಿಗಳಲ್ಲಿ ಪ್ರಧಾನಮಂತ್ರಿ ಇಂದಿರಾಗಾಂಧಿ, ಮಾಜಿ ಅಧ್ಯಕ್ಷ ಡಾ. ರಾಧಾಕೃಷ್ಣನ್ ಮತ್ತು ಮೈಸೂರಿನ ಮಹಾರಾಜರು ಕೂಡ ಇದ್ದರು ಎಂದು ಉಲ್ಲೇಖಿಸಲಾಗಿತ್ತು. ಸದ್ರಿ ವ್ಯಕ್ತಿಗಳಿಗೆ ಸ್ವಾಮೀಜಿಯವರು ಶೂನ್ಯದಿಂದ ಲಿಂಗಗಳನ್ನು ತೆಗೆದು ಕೊಟ್ಟುದಾಗಿಯೂ ವಿವರಿಸಲಾಗಿತ್ತು. (ಆತನ ಕೀರ್ತಿ ಇಂದಿಗೂ ಇದೆ!)

ಈ ಸಂಗತಿಯ ಬಗ್ಗೆ ಕೋವೂರ್ ಅವರು ಭಾರತದ ಪ್ರಧಾನಮಂತ್ರಿಗೆ ಪತ್ರ ಬರೆದಾಗ -



ಇಂದಿರಾಗಾಂಧಿಯವರು 'ತಾನಲ್ಲಿಗೆ ಹೋದದ್ದೂ ಇಲ್ಲ, ಲಿಂಗವನ್ನು ಆತ ಶೂನ್ಯದಿಂದ ಕೊಟ್ಟಿದ್ದೂ ಇಲ್ಲ? ಎಂಬುದಾಗಿ ಅವರ ಪ್ರೈವೇಟ್ ಕಾರ್ಯದರ್ಶಿಯವರಿಂದ ಕೋವೂರರವರಿಗೆ ಪತ್ರ ಬಂತು.

ಇಂತಹ ಸುಳ್ಳು ಕತೆಗಳೇ ಸನ್ಯಾಸಿಗಳು, ಸ್ವಾಮಿಗಳು, ಋಷಿಗಳು, ಯೋಗಿಗಳೆಂದು ತಮ್ಮನ್ನು ಕರೆದುಕೊಳ್ಳುವ ಧೂರ್ತರನ್ನು ಮುಗ್ಧ ಜನ ನಂಬುವಂತೆ ಮಾಡುತ್ತದೆ.

ಇಂತಹ ಕತೆಗಳು ಒಂದಲ್ಲ, ಎರಡಲ್ಲ, ಸಾವಿರಾರು. ಡಾ.ಕೋವೂರ್ ಅವರು ಭಾರತಕ್ಕೆ ಹಲವಾರು ಬಾರಿ ಬಂದಿದ್ದರು. ಡಾ. ಎಚ್. ನರಸಿಂಹಯ್ಯನವರ ಸಹಕಾರದಿಂದ ಸಾಯಿಬಾಬಾನನ್ನು ಭೆಟ್ಟಿಯಾಗಲು ಬಹಳಷ್ಟು ಪ್ರಯತ್ನಿಸಿದರು. ಆದರೆ ಯಾವ ಸೋ ಕಾಲ್ಡ್ ಪವಾಡಪುರುಷನೂ ಕೋವೂರರೆದುರು ನಿಲ್ಲುವ ಸಾಹಸ ಮಾಡಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದ ಡಾ. ಎಚ್. ಎನ್. ನೇತೃತ್ವದ ಸಮಿತಿಯು ಪಾಂಡವಪುರದ 'ಮರಿ ಸಾಯಿಬಾಬಾ'ನ ಗುಟ್ಟನ್ನು ರಟ್ಟು ಮಾಡುವುದರಲ್ಲಿ ಸಫಲವಾಯಿತು. ಕೋವೂರ್ ಅವರು ಮಂಗಳೂರಿಗೂ ಬಂದಿದ್ದರು. ಆ ಮಹಾನ್ ಚೇತನ ಈಗಿಲ್ಲ. ಆದರೆ ಅವರ ಸಾಧನೆಗಳು ಜೀವನಾನುಭವಗಳು ವೈಜ್ಞಾನಿಕ ಮನೋಧರ್ಮದ ಮುನ್ನಡೆಗೆ ಅತ್ಯಂತ ಸಹಕಾರಿ.

ಅವರು ಒಂದೆಡೆಯಲ್ಲಿ ಬರೆಯುತ್ತಾರೆ -

'ಈ ಹತ್ತು ಹಲವು ವರ್ಷಗಳಲ್ಲಿ ಯಾರೊಬ್ಬರೂ ನನ್ನ ಪಂಥಾಹ್ವಾನವನ್ನು ಎದುರಿಸದಿದ್ದುದರಿಂದ ಒಂದು ದೃಷ್ಟಿಯಲ್ಲಿ ನಾನು ಸಂತುಷ್ಟ. ಏಕೆಂದರೆ ನಾನು ಸಾಯುವ ತನಕ ತೆರೆದಿಡಲ್ಪಟ್ಟ ಈ ಪಣಗಳು ಎಷ್ಟೋ ಬುದ್ಧಿವಂತ ವ್ಯಕ್ತಿಗಳಿಗೆ ಜಗತ್ತಿನಲ್ಲಿ ಯಾವುದೇ ಪವಾಡವಿಲ್ಲವೆನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಪ್ರಕೃತಿಯಲ್ಲಿ ಆಗುವಂತಹದೆಲ್ಲವೂ ಅತ್ಯಂತ ಸಹಜವಾದುದು. ಇಲ್ಲಿ ಯಾವುದೇ ಪವಾಡ ಇಲ್ಲ. ಇಲ್ಲಿರುವುದು ಕೇವಲ ಪ್ರಕೃತಿ ರಹಸ್ಯ ಮಾತ್ರ. ನಮ್ಮ ಹಿಂದಿನ ಎಷ್ಟೋ ರಹಸ್ಯಗಳು ಇಂದು ಬಿಡಿಸಲ್ಪಟ್ಟಿವೆ. ಇಂದಿನ ರಹಸ್ಯಗಳು ನಾಳಿನ ವಿಜ್ಞಾನಿಗಳಿಂದ ಬಿಡಿಸಲ್ಪಡಬಹುದು. ಆ ಸಮಯದ ತನಕ ಬಿಡಿಸಲ್ಪಡದ ರಹಸ್ಯಗಳಿಗೆ ಅಲೌಕಿಕ ಅರ್ಥ ಹಚ್ಚುವುದು ಹುಚ್ಚುತನ.'

ಡಾ. ಕೋವೂರರು ಸುಮಾರು ಎರಡು ದಶಕಗಳ ಕಾಲ ಇಡೀ ವಿಶ್ವವನ್ನೇ ಜಾಲಾಡಿದ್ದಾರೆ. ಆದರೆ ಯಾರೂ ಅತೀಂದ್ರಿಯ ಶಕ್ತಿಯನ್ನು ಪ್ರದರ್ಶಿಸದಾದರು. ಇಂದು ಅವರಿಲ್ಲ. ಆದರೆ ಅವರ ಕಣ್ಣುಗಳನ್ನು ಮದ್ರಾಸಿನ ಓರ್ವ ಪಡೆದಿದ್ದಾನೆ. ಅವರ ಅಸ್ಥಿಪಂಜರವು ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಅವರು ಅಧ್ಯಾಪಕರಾಗಿದ್ದ ಸಿಲೋನಿನ ಥರ್ಸ್ಟನ್ ಕಾಲೇಜಿನಲ್ಲಿದೆ.

ಆದರೆ, ಇಂದು ನಮ್ಮಲ್ಲೆ ಬೆಂಗಳೂರು ವಿಚಾರವಾದಿ ವೇದಿಕೆಯ ಎ. ಎಸ್. ನಟರಾಜ್ ಇದ್ದಾರೆ. ವಿಚಾರವಾದಿಗಳ ಸಂಘದ ನರೇಂದ್ರ ನಾಯಕ್‌ರವರಿದ್ದಾರೆ. ಸಿಲೋನಿನ ಏರಿಸ್ ಕೋವೂರ್ ಇದ್ದಾರೆ. ಪೋದನೂರಿನ ಪ್ರೇಮಾನಂದ್ ಇದ್ದಾರೆ. ಕ್ಯಾಲಿಫೋರ್ನಿಯಾದ ಜೇಮ್ಸ್ ರ್‍ಯಾಂಡಿ ಇದ್ದಾರೆ. ರ್‍ಯಾಶನಲಿಸ್ಟ್ ಎಸೋಸಿಯೆಶನ್ ಇದೆ. ನಮ್ಮ ದುರಂತವೆಂದರೆ ಸತ್ಯವೆಂಬುದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. ಆದರೆ ಅತೀಂದ್ರಿಯತೆ ಸೋಗು ಹಾಕುವ ದಗಲ್‌ಬಾಜಿಗಳು ಎಲ್ಲೆಲ್ಲೂ ವಿಜೃಂಭಿಸುತ್ತಾ ಇದ್ದಾರೆ. ಅವರನ್ನು ರಕ್ಷಿಸಲು ನಾಚಿಕೆಗೇಡು, ನಿರ್ಲಜ್ಜ, ಭಾಜಪಗಳಂತಹ ಸರಕಾರಗಳಿವೆ. ಹಿರೇ ಬಂಡವಾಳಿಗರಿದ್ದಾರೆ. ಭೂ ಮಾಫಿಯಾ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಯಿದೆ.

ಕೊನೆಯ ಮಾತು: ಭೌತಿಕವಾದ ಅದರಷ್ಟಕ್ಕೇ ಅದು ಯಾಂತ್ರಿಕವೇ ಇರಲಿ; ಆದರೆ ಅದರ ಮೆಟ್ಟಿಲನ್ನೇರದೇ ದ್ವಂದ್ವಮಾನ ಭೌತಿಕವಾದದೆಡೆಗೆ ಸಾಗುವುದಾದರೂ ಹೇಗೆ?

○

ಸಂಪಾದಕೀಯ

ಆತ್ಮಾವಲೋಕನದ ಬದಲು ಒಣ ವಿಜೃಂಭಣೆ !

ಯಾವುದೇ ಸರ್ಕಾರದ ನೂರು ದಿನಗಳ ಆಡಳಿತ ಆ ಸರ್ಕಾರದ ಸಾಧನೆಗಳನ್ನು ಸಂಪೂರ್ಣ ಅಳೆಯಲು ಮಾನದಂಡವೇನೂ ಅಲ್ಲವೆಂದರೂ ಆ ಸರ್ಕಾರ ಅನುಸರಿಸುತ್ತಿರುವ ನೀತಿ, ಸಾಗುತ್ತಿರುವ ಜಾಡನ್ನು ಖಂಡಿತವಾಗಿ ಗುರುತಿಸಬಹುದಾದ ಸಂದರ್ಭ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ನೂರು ದಿನ ಪೂರೈಸಿದ್ದನ್ನೇ ಒಂದು ಮಹಾ ಸಾಧನೆ ಎಂದು ಬಿಂಬಿಸಿಕೊಂಡು ಸಂಭ್ರಮಿಸಲು ತೊಡಗಿದ್ದು, ಮಾಡಿದ ಅಬ್ಬರ ಜಾಹೀರಾತು ಸಮರ ನಿಜಕ್ಕೂ ಅದು ಅನುಭವದಿಂದ ಪಾಠ ಕಲಿಯಲು ಸಿದ್ಧವೇ ಇಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ನೀಡಿದ ಭರವಸೆಗಳಲ್ಲಿ 90 ರಷ್ಟು ಪೂರೈಸಿಯಾಗಿದೆ ಎಂದು ಮುಖ್ಯಮಂತ್ರಿ ಹೇಳಿರುವುದಂತೂ ಸ್ವತಃ ಸರ್ಕಾರದಲ್ಲಿರುವವರಿಗೂ ವಿಶ್ವಾಸ ಹುಟ್ಟಿಸಿಲ್ಲ.

ಆಡಳಿತದ ಘೋರ ವಾಸ್ತವ ಮರೆಯಾಗುವಂತೆ ಅದೆಷ್ಟೇ ಬಣ್ಣ ಹಚ್ಚಿ ಪ್ರಚುರ ಪಡಿಸಿದರೂ ಸತ್ಯದೆದುರು ಅವೆಲ್ಲಾ ಅಭಾಸವಾಗಿಯೇ ಕಾಣುತ್ತವೆ. ಯಡಿಯೂರಪ್ಪನವರ ಸಂಭ್ರಮ ಈ ಸ್ಥಿತಿಯದ್ದಾಗಿದೆ.

ಹಾಗೆ ನೋಡಿದರೆ ಜನರ ನಿರೀಕ್ಷೆಗಳಿಗೆ ತಕ್ಕದಾದ ಆಡಳಿತ ನೀಡಬೇಕು ಎಂಬ ಕನಿಷ್ಠ ಕಾಳಜಿ ಇರುವವರು ಅಥವಾ ಜನಾದೇಶದ ಅಲ್ಪಗ್ರಹಿಕೆ ಇದ್ದರೂ ಈ ನೂರು ದಿನಗಳಲ್ಲಿ ತಾವು ನೀಡಿದ ಆಡಳಿತದ ಬಗ್ಗೆ ಆರ್ಥಿಕ, ರಾಜಕೀಯ, ಸಾಮಾಜಿಕ ನಡೆಗಳ ಬಗ್ಗೆ ಒಂದು ತೀವ್ರ, ಸ್ವವಿಮರ್ಶೆ ಆತ್ಮಾವಲೋಕನ ನಡೆಸಬೇಕಿತ್ತು.

ಆದರೆ ಸೌಜನ್ಯಕ್ಕಾದರೂ ತಾವಿನ್ನೂ ಮಾಡಬೇಕಾದದ್ದು ಇನ್ನೂ ಬಹಳ ಇದೆ ಎಂಬ ಕನಿಷ್ಠ ವಿನಯವೂ ವ್ಯಕ್ತವಾಗದೇ ಇರುವುದು ಟೀಕೆ ವಿಮರ್ಶೆ, ಬೇರೆಯವರ ಅಭಿಪ್ರಾಯಗಳನ್ನು ಸ್ವೀಕರಿಸದ ಅಸಹಿಷ್ಣುತೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ವಿರುದ್ಧವಾದ ನಿರ್ಧಾರವನ್ನೇ ತೋರಿಸುತ್ತದೆ.

ಈ ನೂರು ದಿನಗಳಲ್ಲಿ ಹೇಳಿಕೊಳ್ಳುವಂತಹದ್ದೇನೂ ಅಗಾಧ ಸಾಧನೆಗಳೇನಿಲ್ಲ. ರಾಜ್ಯದ ಜನತೆ ಎದುರಿಸುತ್ತಿರುವ ಅಪಾರ ಸಂಕಷ್ಟ ಸಂಕಟಗಳಲ್ಲಿ ಕೆಲವನ್ನಾದರೂ ಬಗೆಹರಿಸಲು ಸರ್ಕಾರದ ಕಾಳಜಿಯೇ ಕಾಣಲಿಲ್ಲ. ಹಸಿರು ಟವಲ್ ಹೆಗಲೇರಿಸಿ 'ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿಗಳೇ ಬೀಜಗೊಬ್ಬರಕ್ಕಾಗಿ ಬೀದಿಗಿಳಿದ ರೈತರ ಮೇಲೆ ಗುಂಡು ಹೊಡೆದು ಬಲಿ ತೆಗೆದುಕೊಂಡದ್ದನ್ನು ಸಮರ್ಥಿಸಿಕೊಂಡರು. ಜನಗಳ ಚಳುವಳಿ ಕಂಡರೇ ಕೆಂಡಮಂಡಲವಾದರು. ಲಾಠಿ ಚಾರ್ಜ್ ಗಳು ಶಾಂತ ರೀತಿ ಚಳುವಳಿಗಿಳಿದವರ ಮೇಲೂ ಪ್ರಯೋಗಿಸಿದರು.


ಕೃಷಿ ಸಾಲಬಾಧೆ ತಾಳದೇ ದಿನ ದಿನವೂ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇರುವ ದುರಂತಗಳ ಸರಮಾಲೆ ನಡೆದೇ ಇರುವುದನ್ನು ತಡೆಯಲು, ಕನಿಷ್ಟ ಸಾಂತ್ವನ ಹೇಳಿ ವಿಶ್ವಾಸ ಸೃಷ್ಟಿಸಲು ಏನಾದರೂ ಕ್ರಮ ಕೈಗೊಳ್ಳಲಾಯಿತೇ? ಕನಿಷ್ಠ ರೇಷನ್ ನೀಡಿಕೆ, ಕಾರ್ಡ್ ಹಂಚಿಕೆ ಯಾದರೂ ಮಾಡಲಾಯಿತೇ? ಸ್ಥಳೀಯ ಚುನಾಯಿತ ಸಂಸ್ಥೆಗಳಿಗೆ ಹೆಚ್ಚಿನ ಆರ್ಥಿಕ ನೆರವು, ಅಧಿಕಾರ ನೀಡಿ ಬಲಪಡಿಸಲಾಯಿತೇ? ಸದಾ ಅಭಿವೃದ್ಧಿಯ ಬಗ್ಗೆ ಹೇಳುತ್ತಲೇ ಈ ಸರ್ಕಾರದ ಅಮೂಲ್ಯ ಆಸ್ತಿಗಳನ್ನು ಖಾಸಗಿಯವರಿಗೆ ಪರಭಾರೆ ಮಾಡಲು ಮುಂದಾಗಿದೆ. ಸಕ್ಕರೆ ಕಾರ್ಖಾನೆಗಳ ಖಾಸಗೀಕರಣ, ವಿಮಾನ ನಿಲ್ದಾಣಗಳ ಖಾಸಗೀಕರಣ ಮತ್ತು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಹೂಡಿಕೆ ಹಿಂತೆಗೆತ, ಖಾಸಗೀಕರಣಕ್ಕೆ ಜ್ವಲಂತ ನಿದರ್ಶನಗಳು. ಹೋಗಲಿ ಗಣಿ ಭೂ ಮಾಫಿಯಾಗಳ ಅಗಾಧ ಅನಾಹುತಗಳ ಬಗ್ಗೆ ಎಷ್ಟೆಲ್ಲಾ ಚರ್ಚೆ ಟೀಕೆ ಬಂದರೂ ಅದನ್ನಾದರೂ ಸರಿಪಡಿಸಲಾಯಿತೇ? ಲೋಕಾಯುಕ್ತರ ಧಾಳಿಗಳು ಆಡಳಿತದಲ್ಲಿರುವ ತಿಮಿಂಗಲಗಳ ಭ್ರಷ್ಟತೆಯನ್ನು ಹೊರಗೆಳೆಯಿತಲ್ಲದೇ ಅಂತಹ ಭ್ರಷ್ಟರನ್ನು ಸರ್ಕಾರ ಬಲಿ ಹಾಕಲಿಲ್ಲ, ವರ್ಗಾವಣೆಯಂತಹ ದಂಧೆಯನ್ನು ಹಿಂದೆಂದೂ ಇರದಷ್ಟು ವ್ಯಾಪಕವಾಗಿ ಮಾಡಿದ್ದು ಯಾರ ಹಿತದಲ್ಲಿ ಸರ್ಕಾರವನ್ನುಳಿಸಿಕೊಳ್ಳಲು, ನಂತರ ಬೇರೆ ಪಕ್ಷಗಳ ಶಾಸಕರ ಖರೀದಿ, ಆಮಿಷಗಳಂತಹ ಅನೈತಿಕ ಮಾರ್ಗಕ್ಕೆ ವಿವರಣೆ ಏನು? ಹಂತ ಹಂತವಾಗಿಯೂ ಸೌಹಾರ್ದತೆಯ ಕರ್ನಾಟಕವನ್ನು ಕೋಮುದ್ವೇಷದ ರಾಜ್ಯವನ್ನಾಗಿಸಲು ನಿತ್ಯವೂ ಅಲ್ಪಸಂಖ್ಯಾತರ ಮೇಲೆ ಪ್ರಚೋದನಾತ್ಮಕ ಧಾಳಿಯನ್ನು ಸಂಘ ಪರಿವಾರ ನಡೆಸುತ್ತಿರುವುದರ ಬಗ್ಗೆ ಒಂದು ಕಿಂಚಿತ್ತೂ ವಿರೋಧ ವ್ಯಕ್ತಪಡಿಸದ ಮುಖ್ಯಮಂತ್ರಿ ವರ್ತನೆ ಎಂತಹದ್ದು, ಬದಲಾಗಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ವಹಿಸಿ ಸೇಡು ತೀರಿಸಿಕೊಳ್ಳುವ ಅಪಾಯಕಾರಿ ಸನ್ನಿವೇಶ ಸೃಷ್ಟಿಸಲಾಗುತ್ತಿರುವುದು ನಿಜವಲ್ಲವೇ? ಇದು ರಾಜ್ಯದಲ್ಲಿ ಭಯೋತ್ಪಾದನೆಯನ್ನು ಬೆಳೆಸುವುದಿಲ್ಲವೇ? ಬಿಜೆಪಿ ಆಡಳಿತದಲ್ಲಿ ಕರ್ನಾಟಕ ಸುರಕ್ಷತವಲ್ಲ ಎಂಬುದು ದಿಟವಾಗುತ್ತಿದೆ. ಹೀಗೆ ಪಟ್ಟಿ ಮಾಡುತ್ತಾ ಹೋದರೆ ನೂರು ದಿನಗಳಲ್ಲಿ ಸಾವಿರ ವೈಫಲ್ಯ ಹಾಗೂ ಜನಾದೇಶಕ್ಕೆ ವಿರುದ್ಧವಾದ ಕ್ರಮಗಳನ್ನು ಗುರುತಿಸಬಹುದು.

ಸಂಘ ಪರಿವಾರಕ್ಕೆ ಕರ್ನಾಟಕವನ್ನು ತ್ವರಿತವಾಗಿ ಗುಜರಾತ್‌ನ ಮಾದರಿ ಮಾಡುವ ತನಕ ಹಿಂದುತ್ವದ ಪ್ರಯೋಗ ಶಾಲೆಯನ್ನಾಗಿಯೂ ಪರಿವರ್ತಿಸುವ ಕಾತುರ, ರಕ್ತದಾಹ; ಆದರೆ ಈಗಿನ ಜನಾದೇಶ ಹಿಂದುತ್ವಕ್ಕೆ ಅಲ್ಲ ಬದಲಾಗಿ ಕಾಂಗ್ರೆಸ್‌ನ ಜನವಿರೋಧಿ ನೀತಿಗಳು, ಜೆಡಿ(ಎಸ್)ನ ಸಂದರ್ಭಸಾಧಕತೆಯ ರಾಜಕಾರಣಕ್ಕೆ ನೀಡಿದ ಪ್ರತಿಕ್ರಿಯೆ. ಇದನ್ನು ಸರಿಯಾಗಿ ಗ್ರಹಿಸಿ ಜನರ ನಿರೀಕ್ಷೆ ತಕ್ಕಂತೆ ನಡೆಯದಿದ್ದಲ್ಲಿ ಜನತೆ ತಮ್ಮದೇ ಮಾನ-ದಂಡ ಅನುಸರಿಸುತ್ತಾರೆ. ಆದರೆ ಎಲ್ಲವನ್ನು ಧಿಕ್ಕರಿಸಿ ಈ ಸರ್ಕಾರ ತನ್ನದೇ ಧೋರಣೆಯಲ್ಲೇ ನಡೆಯುವುದು ಅತ್ಯಂತ ಅಪಾಯಕಾರಿ.

ಆದ್ದರಿಂದಲೇ ನೂರು ದಿನಗಳ ನಕಾರಾತ್ಮಕ ಸಾಧನೆಗಳನ್ನೇ ಸಂಭ್ರಮಿಸುತ್ತಿರುವ ಸರ್ಕಾರದ ಎದುರಲ್ಲಿ, ಸಕಾರಾತ್ಮಕ ಪರಿವರ್ತನೆ, ಸಾಧನೆಗಾಗಿ ಹೋರಾಡುವುದು ಜನತೆಯ ಮುಂದಿರುವ ಸವಾಲು.

ಬಿಜೆಪಿ ಕಾರ್ಯಕಾರಿಣಿ : ಕುರ್ಚಿ ಕಾಳಜಿಯ ಪ್ರಹಸನ

ಹಿಂದುತ್ವದ ದೊಣ್ಣೆ ಹಿಡಿದಿರುವ ಬಿಜೆಪಿಗೆ ಜನ ಕಾಳಜಿ ಎಲ್ಲಿ ?



■ ಎಸ್.ವೈ.ಗುರುಶಾಂತ್

'ನೂರು ದಿನಗಳ ಮಹಾಸಾಧನೆ'ಯ ಜಾಗಟೆ ಹೊಡೆದಿರುವ ಬೆನ್ನಲ್ಲೇ ಬಿಜೆಪಿಯು ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಬೆಂಗಳೂರಿನಲ್ಲಿ ನಡೆಸಿ ಪಾರ್ಲಿಮೆಂಟ್ ಚುನಾವಣೆಯ ತಾಲೀಮು ಆರಂಭಿಸಿದೆ. ಒಂದೂವರೆ ದಿನದಲ್ಲಿ ನಡೆದ ಕಾರ್ಯಕಾರಿಯ ಸಭೆಯಲ್ಲಿ ಮುಂದಿನ ಚುನಾವಣೆಯಲ್ಲಿ ಅನುಸರಿಸಬೇಕಾದ ರಣನೀತಿ ರೂಪಿಸಿ ರಣಕಹಳೆ ಊದುವುದು ಇದರ ಉದ್ದೇಶ ಎಂದು ಸಾರಿದ್ದರೂ ಅದು ಉಸಿರಿರುವ ಧ್ವನಿ ಹೊಸದೇನಲ್ಲ. ಈ ಹಿಂದೆಯೆಲ್ಲಾ ಹೇಳಿಕೊಂಡು ಬಂದದ್ದನ್ನೇ ಮಾಧ್ಯಮಗಳೆದುರು ಒಟ್ಟುಗೂಡಿಸಿ 'ಮಹಾನಾಯಕ' ರಿಂದ ಮತ್ತೇ ಹೇಳಿಸಿದಂತಿದೆ. ವ್ಯತ್ಯಾಸ ಎಂದರೆ ದೇಶದ ವಿವಿಧ ರಾಜ್ಯಗಳಿಂದ ಬಂದ ಪ್ರತಿನಿಧಿಗಳು ಸನ್ನಿವೇಶಕ್ಕೆ ಮೆರಗು ತಂದಿರುವುದು. 'ಹಿಂದುತ್ವ'ದಂತಹ ಒಂದು ಫ್ಯಾಸಿಸ್ಟ್ ಮಾದರಿಯನ್ನು ಅಪ್ಪಿಕೊಂಡಿರುವ ಬಿಜೆಪಿಯಂತಹ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ - ಚರ್ಚೆ - ತೀರ್ಮಾನಗಳು ಬಹುತೇಕ ಔಪಚಾರಿಕ ಸ್ವರೂಪವನ್ನೇ ಹೊಂದಿರುತ್ತವೆ. ಅದೇನಿದ್ದರೂ ಮೂಲ ಅಜೆಂಡಾ, ತಂತ್ರ ನಿಗದಿಯಾಗುವುದು ಜನತೆಗೆ ಯಾವುದೇ ಬಾಧ್ಯತೆ ಇಲ್ಲದ ಆರ್.ಎಸ್.ಎಸ್. ನ ನಾಗಪುರದ ಕಛೇರಿಯಲ್ಲಿಯೇ ಅವುಗಳ ಜಾರಿಗೆ ಬೇಕಾದ ವಿನ್ಯಾಸ, ರಂಗು ನೀಡುವುದು ಅದರ ಸ್ವಯಂ ಸೇವಕರ ಕೆಲಸ.



ಅಡ್ವಾಣಿ ಪಟ್ಟಕ್ಕೇರಿದರೆ ಜನ ಚಟ್ಟಕ್ಕೆ

ಹೀಗಿರುವಾಗಲೂ ಈ ಕಾರ್ಯಕಾರಣಿಯಲ್ಲಿ.. ಅದರಲ್ಲೂ ಮುಂಬರುವ ಸಂಸತ್ ಚುನಾವಣೆ ಹಾಗೂ ರಾಜ್ಯ ಉಪ ಚುನಾವಣೆಗಳಲ್ಲಿ ಸರ್ಕಾರಗಳನ್ನು ಹಿಡಿಯುವ ದಿಕ್ಕಿನಲ್ಲೇ ಗಮನ ಕೇಂದ್ರೀಕರಿಸಿರುವ ಈಸಭೆಯ ಅಂತಿಮ ಘೋಷಕ್ಕೆ ಮಹತ್ವವೂ ಇದೆ. ಕಾರ್ಯಕಾರಿಣಿಯನ್ನು ಉದ್ದೇಶಿಸಿ ದಿಕ್ಸೂಚಿ ಭಾಷಣ ಮಾಡಿದ ಅಧ್ಯಕ್ಷ ರಾಜನಾಥ ಸಿಂಗ್‌ರವರು ಪ್ರಸ್ತಾಪಿಸಿದ ವಿಷಯಗಳು 'ಹಿಂದುತ್ವ'ದ ಅಜೆಂಡಾ ಹಿಡಿದೇ ಅಧಿಕಾರಕ್ಕೆ ಬರುವ ಖಚಿತ ಸಂಗತಿಯನ್ನೇ ಪ್ರತಿಧ್ವನಿಸಿದೆ. ಭಯೋತ್ಪಾದನೆಯ ನಿಗ್ರಹ, ಆಂತರಿಕ ರಕ್ಷಣೆ, ಅಮರನಾಥಕ್ಕೆ - ಅಲ್ಲಿ ಹೋಗುವ ರಸ್ತೆ ರಾಷ್ಟ್ರೀಕರಣ, ಅಲ್ಪಸಂಖ್ಯಾತರನ್ನು ಓಲೈಸುವ ಕಾಂಗ್ರೆಸ್ ಇತರೆ ಪಕ್ಷಗಳು ನೀತಿಗಳು 'ರಾಷ್ಟ್ರೀಯತೆ(?)ಗೆ ಒತ್ತು, ರಾಮಸೇತು (ಸೇತುಸಮುದ್ರಂ) ರಾಷ್ಟ್ರೀಯ ಸ್ಮಾರಕವಾಗಿರುವುದು, 370ನೇ ವಿಧಿ ರದ್ದತಿ, ಭಯೋತ್ಪಾದನೆ-ಕಾನೂನು - ಇದಕ್ಕೆ ಹೊಂದಿಕೊಂಡು ಯುಪಿಎ ಸರ್ಕಾರದ ವೈಫಲ್ಯ.... ಇವು ಪ್ರಧಾನ ಪ್ರಸ್ತಾಪಿತ ವಿಷಯಗಳು. ಇಲ್ಲಿ 'ಅಭಿವೃದ್ಧಿ' ಎಂಬ ಮೂಗಿಗೆ ಸವರುವ ತುಪ್ಪವೂ ಕಾಣೆಯಾಗಿದೆ. ಈ ಎಲ್ಲಾ ಅಂಶಗಳೂ ಅಂತಿಮವಾಗಿ ಅಡ್ವಾಣಿಯನ್ನು ಪ್ರಧಾನಿ ಪಟ್ಟಕ್ಕೇರಿಸುವುದು. ಅಂದರೆ ಕಡು ಕೋಮುದ್ವೇಷ ಬಿತ್ತುವ, ವಿಭಜಕ ರಾಜಕಾರಣವೇ ವಿಜೃಂಭಿಸುವ ಅದರ ಅಜೆಂಡಾದ ಜಾರಿಗೆ ದೇಶದ ಜನತೆಯ ಅಂಗೀಕಾರವನ್ನು ಕೇಳಲಾಗುತ್ತಿದೆ ಎಂಬುದು ಅರಿಯಬೇಕು.

ಈ ಕಾರ್ಯಕಾರಿಣಿಯಲ್ಲಿ - ಮುಂದಿನ ಚುನಾವಣಾ ವಿಷಯಗಳಲ್ಲಿ ಜನತೆ ಎದುರಿಸುತ್ತಿರುವ ಬೆಲೆ ಏರಿಕೆ, ಕೃಷಿ ಬಿಕ್ಕಟ್ಟು, ರೈತರ ಆತ್ಮಹತ್ಯೆ, ಕೂಲಿಕಾರರ ದಿವಾಳಿ, ಕಾರ್ಮಿಕರ ಬವಣೆ, ನಿರುದ್ಯೋಗ, ಅನಕ್ಷರತೆ, ಅಸಮಾನತೆ, ಬಡತನದಂತಹ ಪ್ರಶ್ನೆಗಳಿಗೆ, ಆರ್ಥಿಕನೀತಿಗಳಿಗೆ ಜಾಗವೇ ಇಲ್ಲ. ಅವರು ಕಾರ್ಯಕಾರಿಣಿ ನಡೆಸುತ್ತಿರುವ ಕರ್ನಾಟಕದ ಸಂದರ್ಭದಲ್ಲಿ ಕೃಷಿಕರ, ಸಾಮಾನ್ಯ ಜನ ಜೀವನದ ಪ್ರಶ್ನೆಗಳತ್ತ ಕಿರುನೋಟವೂ ಇಲ್ಲ. 100 ದಿನಗಳಾದರೂ ಜನರ ಮೇಲೆ ಧಾಳಿ, ದಬ್ಬಾಳಿಕೆ ನಡೆಸಿದ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ನೀಡಿದ ಸಾಧನೆಗಳ ವರ್ಣರಂಜಿತ ವಿವರಗಳನ್ನೇ ಹೊಗಳಿ ಎದ್ದು ಹೋಗುವ ಕ್ರಮ ಜನಪರವೇನಲ್ಲ. ಅದು ಜನವಿರೋಧಿಯೇ. ಭಾರತ-ಅಮೆರಿಕಾ ಅಣು ಒಪ್ಪಂದದಂತಹ ಮಾರಕ ನಿರ್ಧಾರದಲ್ಲೂ ಸರಿಯಾಗಿ ಸಹಿಹಾಕಬೇಕಿತ್ತು ಎಂಬ ಮಾತಿಗಾದರೂ ಇರಲಿ ಎಂದು ವಿದೇಶಾಂಗ ನೀತಿಯನ್ನು ಟೀಕಿಸುವ ಶಾಸ್ತ್ರ ಮಾಡಿದೆ. ಬಹುಶಃ ಇದಿಷ್ಟೇ ಮಾತನಾಡಲು 'ಅಮೆರಿಕಾ ಅಣ್ಣ'ನ ಅನುಮತಿ ಇರಬಹುದು. ಸಾಮ್ರಾಜ್ಯಶಾಹಿ ಧಾಳಿಗಳಿಗೆದುರಾಗಿ ಸಮರ ನಡೆಯುತ್ತಿರುವ ಸಂದರ್ಭದಲ್ಲಿ ಬಿಜೆಪಿ ನಿಲುವು ಸ್ವಯಂ ಬಹಿರಂಗ.

ತುತ್ತೂರಿ ಮಾಧ್ಯಮಗಳು

ಹಾಗಾದರೆ ದೇಶದ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲು ಹಾತೊರೆಯುತ್ತಿರುವ ಬಿಜೆಪಿ, ಕೇವಲ ಕಾಂಗ್ರೆಸ್‌ನ ವೈಫಲ್ಯಗಳನ್ನು, ಜನರಲ್ಲಿ ಬೆಳೆಯುತ್ತಿರುವ ಅತೃಪ್ತಿಯನ್ನು ತನ್ನ ಅಧಿಕಾರದ ಮೆಟ್ಟಿಲೇರಲು ಬಂಡವಾಳವನ್ನಾಗಿಸಿಕೊಳ್ಳುತ್ತಿದೆ. ಜನ

ಪುಟ 4 ಕ್ಕೆ

ಕವನ

ಗೋಕರ್ಣದ ಮಹಾಬಲನಿಗೆ

ಅಂಬುಧಿಯ ಒಡಲಿಂದ ಹುಟ್ಟಿಬಂದ
ಸೂರ್ಯ
ಪಶ್ಚಿಮದ ಗೂಡು ಸೇರುವ ಮುನ್ನ
ನಮಸ್ಕರಿಸಿದ್ದು ನಿನಗೇ ಎಂದು ಗೊತ್ತು
ಅಲೆಗಳ ಸಪ್ಪಳವನಾಲಿಸುತ ಕುಳಿತ
ಅರ್ಧನಿಮೀಲಿತ ಫಾಲನೇತ್ರನೇ...!

ನಿನ್ನೆದುರಿಗಿನ ತೇರು ಬೀದಿಯನ್ನೊಮ್ಮೆ
ಕಣ್ತೆರೆದು ನೋಡು
ರಾತ್ರಿಯ ನೀರವ ಮೌನ ಹೆಪ್ಪುಗಟ್ಟಿ
ಅಲೆ ಅಲೆಗಳ ಹೆಜ್ಜೆ ಸಪ್ಪಳಗಳನೊಂದೊಂದಾಗಿ
ಸೇರಿಸಿ
ಸುಕ್ಕುಗಟ್ಟಿದ ಕೈಗಳು ಪೋಣಿಸಿದ ಹೂ
ಮಾಲೆಗಳು
ಬೀದಿಯಲ್ಲಿ ಕಾದು ನಿಂತಿವೆ,
ನಿನ್ನ ಕೊರಳು ಸೇರಲು,
ಕಾಯಿ ಕರ್ಪೂರದಂಗಡಿಯ ಮುದುಕ
ಹೂ ಮಾರುವ ಮುದುಕಿ
ಕಾದು ಕುಳಿತಿರುವುದು ನಿನಗಷ್ಟೆ ಅಲ್ಲ...!

ನೀನು ಕೊರಳ ಮಾಲೆ ಧರಿಸದಿರೆ,
ಕರ್ಪೂರ ಹಚ್ಚಿ ಉರಿಸದಿರೆ
ಹತ್ತಿ ಉರಿಯಬಹುದು
ಅವರ ಮನೆಯ ಹಸಿವು..!

ನಿನ್ನ ನಾಮದ ಬಲದ ಮೇಲೆ
ನಿಂತ ನೂಪುರ, ಗೋಪುರಗಳ ಕೆಳಗೆ
ನಿನ್ನದೇ ನೆರಳಿದೆ....
ಸಾಲಿಗೆ ಹೋಗಲೊಲ್ಲದೆ ಹಠ ಹಿಡಿದವಗೆ
'ಮಠ' ಕ್ಕೆ ಸೇರಿಸಿಬಿಡುವೆ ಎಂದು
ಹೆದರಿಸಿದ ಅವ್ವನ ನೆನಪಾಯ್ತು ಮಹಾಬಲ,
ಗೋಕರ್ಣದ ಬೀದಿಯ ತುಂಬಾ ಪ್ರತಿಧ್ವನಿಸಿದೆ
'ಮಹಾಬಲ ಮಠದ ಪಾಲಾದನಂತೆ'..!

ಬೇಲಿ ಬೀಳಬಹುದದಿನ್ನು
ನಿನ್ನ ಜಾತಿ ಮೀರಿದ ಪ್ರೀತಿಗೆ!
ನಿನ್ನ ಮುಟ್ಟಿ
ತಲೆಗೆರಡು ಕೊಟ್ಟು ಬರುವ
ಭಕುತರ ಕೈಗಳಿಗಿನ್ನು



ಬೀಳಬಹುದು ಬೇಡಿ!
ಬೀದಿ ಬದಿಯ ಅಜ್ಜ ಅಜ್ಜಿಯರ ಬದಲಿಗೇ
ಟೈ ಬೂಟು ಸೂಟುಗಳ ದಂಡು ಬರಬಹುದು
ಮಹಾಬಲ!!
ನಿನ್ನ ಹೆಸರಿನ ರಸೀದಿಗಳು
ಹಾರಾಡಬಹುದು ಗಾಳಿಪಟಗಳಂತೆ!!

ನಿನ್ನ ನೂಪುರ ನೋಡಿ ಬಂದವರಲ್ಲ
ನಿನ್ನ ಗೋಪುರ ನೋಡಿ ಬಂದವರಲ್ಲ
ನಿನ್ನೊಳಗಿನ ಪರಾಕ್ರಮಕ್ಕೆ ಸೋತವರಲ್ಲ ನಿನ್ನೆದುರಿನ
'ಹುಂಡಿ' ಯಾಸೆಗೆ ಬಂದವರು!!

ಯಾವುದಕ್ಕೂ ಬೇಸರಿಸದಿರು ಮಹಾಬಲ
ಅರಬ್ಬಿ ಕಡಲಿನ ಮುಂದೆ ಹಾಗೆ ರೋಧಿಸದಿರು
ಉಕ್ಕಿ ಹರಿದೀತು ಕಡಲು!
ಬರಿದಾದೀತು ಬೀದಿಜನರ ಒಡಲು!!

ಬ.ಶ್ರೀನಿವಾಸ, ಹಾವೇರಿ

ಬಿಜೆಪಿ ಕುರ್ಚಿ ಕಾಳಜಿಯ ಪ್ರಹಸನ

ಪುಟ 3 ರಿಂದ


ಕಾಳಜಿಯೇ ಇಲ್ಲದೇ ಕುರ್ಚಿ ಕಾಳಜಿಯಲ್ಲೇ ಒಂದು 'ಪ್ರಹಸನ' ನಡೆಸುವುದಕ್ಕೆ ಮಾಧ್ಯಮಗಳಂತೂ ಪೂರ್ಣ ಪ್ರಮಾಣದಲ್ಲಿ ಪ್ರಚಾರಕ್ಕೆ ಇಳಿದು ತಮ್ಮನ್ನು ಸೇವೆಗೆ ಅರ್ಪಿಸಿಕೊಂಡಿವೆ. ಇದೇ ಸಂದರ್ಭಕ್ಕೆ ರಾಜ್ಯ ಸರ್ಕಾರವೂ ಕೋಟ್ಯಾಂತರ ಹಣಖರ್ಚು ಮಾಡಿ ಆಂಗ್ಲ ಮಾಧ್ಯಮಗಳನ್ನು ಒಳಗೊಂಡು (ಬಂದವರಿಗೆ ಅರ್ಥವಾಗಲಿ ಎಂದು) ಭರ್ಜರಿ ಜಾಹಿರಾತು, ವಿಶೇಷ ಪುರವಣಿಗಳನ್ನು ಹೊರಡಿಸಿದೆ. ಅಂದರೆ ಕಾರ್ಪೊರೇಟ್ ಕಂಪನಿಗಳ ಮಾಧ್ಯಮಗಳು ಯಾವ ದಿಕ್ಕಿಗೆ ತೊಡಗಲು ಸಿದ್ಧವಾಗಿವೆ ಎಂಬುದನ್ನು, ಅವುಗಳನ್ನು ಸಂತೃಪ್ತಿಗೊಳಿಸಲಾಗುತ್ತಿದೆ ಎಂಬುದನ್ನು ಇದು ತೋರಿಸುತ್ತದೆ.

ಸಂದರ್ಭ - ವಿದ್ಯಮಾನಗಳು ಹೀಗಿರುವಾಗ ಕಾಂಗ್ರೆಸ್ ಇನ್ನೂ ಹಾಸಿ - ಹೊದ್ದು ಮಲಗಿರುವಾಗ ಮತ್ತು ಏಳಲೂ ಆಗದಂತಹ ನೀತಿ-ಕೃತ್ಯಗಳ ಭಾರ ಹೆಗಲೇರಿರುವಾಗ ಇಂದು ನಿಜವಾದ ಜನಪರವಾದ ಎಡ ಜಾತ್ಯಾತೀತ-ಪ್ರಜಾಪ್ರಭುತ್ವದ ಪರ್ಯಾಯ ಇಂದಿನ ಅವಶ್ಯಕತೆಯಾಗಿದೆ. ಅಂದರೆ ಬಿಜೆಪಿಯ ಅಬ್ಬರಕ್ಕೆ, ಕೋಮುವಾದಿ ನಡೆಗೆ ತಡೆಯೊಡ್ಡುವುದು ಇಂದು ಅತ್ಯಂತ ಅವಶ್ಯಕ ಭಾಗವಾಗಿದೆ. ○

ನೂರಾರು ಕರಾಳ ರಾತ್ರಿಗಳು

ಬಿ.ಜೆ.ಪಿ ಯ ನೂರು ದಿನಗಳ ಬಗ್ಗೆ ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹಿರಾತುಗಳನ್ನು ನೋಡಿ, ಬೀದಿ ಬೀದಿಗಳಲ್ಲಿ ಊರ ತುಂಬ ಬ್ಯಾನರು, ಬಂಟಿಂಗುಗಳನ್ನು, ಟೀ.ವಿ ಸುದ್ದಿ, ಜಾಹೀರಾತುಗಳನ್ನು ನೋಡಿ ನೋಡೀ, ವಾಕರಿಕೆ ಬಂದಿತ್ತು. (ಅವರಿಗೆ ಮೂರು ತಿಂಗಳು ತುಂಬಿದ್ದಕ್ಕೆ ನಮಗೆ ವಾಕರಿಕೆ!) ಅಂಥ ಸಮಯದಲ್ಲಿ ಸಂಪಾದಕರು ನೂರು ದಿನಗಳ ಬಗ್ಗೆ ವಿವಿಧ ಕ್ಷೇತ್ರದ ಜನರ ಸಂದರ್ಶನ ಮಾಡಿ ತಿಳಿಸಿ ಅಂತ ಹೇಳಿದರು. ಅನಿವಾರ್ಯವಾಗಿ ಜನಗಳ ಭೇಟಿಗೆ ಹೊರಟೆ.

ಹೊರಟ ತಕ್ಷಣ ಎದುರಿಗೆ ಸಿಕ್ಕವರೇ ನಮ್ಮ ರೈತರು. ಏನ್ರಪಾ, ಬಿ ಜೆ ಪಿಯ ನೂರು ದಿನಗಳ ಸಂಭ್ರಮದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂದು ಕೇಳಿದೆ. " ಅಲ್ಲ ಕಣಲಾ ಅಧಿಕಾರಕ್ಕೆ ಬಂದ ತಕ್ಷಣ ರೈತ್ರು ಮೇಲೆ ಗುಂಡ್ ಹಾಕವ್ರೆ. ಸಾವ್ರಾರು ರೈತ್ರುಗೆ ಲಾಠೀಲಿ ಬಡಿದವರೆ. ನೂರಾರು ರೈತ್ರು ಪೋಲಿಟೇಸನ್ನು ಕೋಲ್ಬು ಅಂತ ಅಲೆಯೋ ಅಂಗೆ ಕೇಸಾಕವ್ರೆ. ಇಂಥ ದುರುಳರ ಸಂಭ್ರಮದ ಬಗ್ಗೆ ನಮ್ಮನ್ನ ಕೇಳೋಕೆ ಬಂದಿದ್ಯಲ್ಲ ನಿನ್ನಾ ಏನ್ ಮಾಡ್ಬೇಕೂಂತಿಯಾ...., " ಅಂತ ನನ್ನನ್ನೇ ಕೇಳಿದರು. "ಅಲ್ರಪಾ ನಿಮ್ಗೆಲ್ಲ ಉಚಿತ ಕರೆಂಟ್ ಕೊಡತಾರಂತೆ ಅಂಥೋರನ್ನ ಹೀಗೆ ನಿಂದಿಸಬಹುದಾ?" ಎಂದೆ. ಆ ಕೊಡತಾರೆ.., ಕೊಡ್ತಾರ್'.., ಮುಗಸಟ್ಟೆ ಕರೆಂಟಲ್ಲ ಶಾಕು! ನಡಿಲಾ ಸುಮ್ಮೆ ರೈತ್ರೇನು ಬಿಟ್ಟಿ ಸಿಗತ್ಯತೆ ಅಂತ ಜೊಲ್ಲು ಸುರಿಸಿಕೊಂಡು ಕುಂತಿಲ್ಲ. ಇವ್ರ ಕುತಂತ್ರ ಏನೂ ನಮ್ಗೆ ಗೊತ್ತಾಗಕಿಲ್ಲ ಅಂದ್ಕೊಂಡ್ಯಾ? " ಅಂತ ರಾಂಗಾದರು. ಯಾಕೋ ಆರಂಭ ಸರಿಯಿಲ್ಲ ಅಂತ ಬೇರೆಯವರನ್ನು ಹುಡುಕಿಕೊಂಡು ಹೊರಟೆ.



ಎದುರಿಗೆ ಸಿಕ್ಕವರು ಸರ್ಕಾರೀ ನೌಕರರು· ಏನ್ಸಾರ್ ನಿಮ್ಮದೇ ಸರ್ಕಾರ ಇದರ ನೂರು ದಿನದ ಸಂಭ್ರಮದ ಬಗ್ಗೆ ನಿಮ್ಮ ಅಭಿಪ್ರಾಯ ಏನು? ಎಂದು ಕೇಳಿದೆ. "ಏ ತಗೀರಿ ಏನ್ ಸಂಭ್ರಮವೋ ಏನೋ" ಅಂದ್ರು. ಯಾಕ್ರೀ ಹೀಗಂತೀರಾ? ಎಂದೆ. ಮತ್ತಿನ್ನೇನು? ನೂರು ದಿನದಲ್ಲಿ ಎಷ್ಟು ಟ್ರಾನ್ಸಫರ್ ಗಳಾಗಿವೆ ನೋಡಿ. ಗಿನ್ನಿಸ್ ದಾಖಲೆ ಅಂತೆ. ಹಂಡ್ರೆಡ್ ಡೇಸ್‌ನಲ್ಲಿ ಹಾಲಿವುಡ್‌ನ ಯಾವ ಸೂಪರ್ ಹಿಟ್ ಸಿನಿಮಾಕ್ಕೂ ಆಗದಿರುವಷ್ಟು ಕಲೆಕ್ಷನ್ನು ಬರೀ ಟ್ರಾನ್ಸಫರ್ ದಂಧೇಲಿ ಆಗಿದ್ಯಂತೆ. ಎಂದರು. ಸರಿ ಬಿಡಿ ಎಂದು ಹೊರಟಾಗ ಎದುರಾಗಿದ್ದು ಸರಕಾರೀ ಬಸ್ಸು.

ಏನಪ್ಪ ಬಸ್ಸಣ್ಣ, ಹೇಗಿದ್ದೀಯ? ಅಂತ ಕೇಳಿದೆ. "ಏನೇಳ್ಲಿ ನನ್ ಕತೆ? ಎಲ್ಲೋದ್ರು ಬರೀ ಗುಂಡಿ ಗೋಟರು. ರಸ್ತೆ ಅಂಬೋದೇ ಇಲ್ಲ. ಜತೆಗೆ ಭಯ ಬೇರೆ!" ಅಂದಿತು ಬಸ್ಸು. ಭಯ ಯಾಕಪಾ ಬಸ್ಸಣ್ಣಾ ?" ಅಂತ ಕೇಳಿದೆ. "ಅಯ್ಯೋ, ಯಾರಿಗೋ ಮಂತ್ರಿಗಿರಿ ಸಿಗಲಿಲ್ಲ ಅಂತ, ಇನ್ಯಾರಿಗೋ ಕೊಡಬೇಕು ಅಂತ, ಮತ್ಯಾರಿಗೋ ಸಿಕ್ಕಿದ್ದು ತಪ್ಪಿ ಹೋಗುತ್ತೇ ಅಂತ ಸರ್ಕಾರದ ಹಿಂಬಾಲಕರೇ ನಮ್ಗೆ ಕಲ್ಲು ತೂರೋದು, ಬೆಂಕಿ ಹಚ್ಚೋದು . ಭಯ ಆಗದೇ ಇನ್ನೇನು?" ಅಂದಿತು ಬಸ್ಸು. ಇದೂ ಯಾಕೋ ಅಪಸ್ವರವೇ ಆಯ್ತಲ್ಲ . ಒಂದಾದ್ರೂ ಒಳ್ಳೇ ಅಭಿಪ್ರಾಯ ಇರದಿದ್ರೆ ಲೇಖನ ಸರಿಹೋಗುತ್ತಾ ಅಂತ ಯೋಚನೇಲಿ ಹೊರಟಾಗ ಎದುರಾದ್ದು ನಮ್ಮ ಎಣ್ಣೆ ತಮ್ಮಣ್ಣ.

"ಏನಪ್ಪ, ಎಣ್ಣೆ ತಮ್ಮಣ್ಣ? ಹೇಗಿದೆ ನೂರು ದಿನದ ಸಂಭ್ರಮ ಅಂತ" ಕೇಳಿದೆ. "ಬಹಳ ವೈನಾಗಿದೆ" ಎಂದ . ಸ್ವಲ್ಪ ಸಮಾಧಾನವಾಯಿತು.

"ಅದೇನು ವೈನಾಗಿದೆ ಸ್ವಲ್ಪ ಬಿಡಿಸಿ ಹೇಳಪ್ಪಾ ಎಣ್ಣೆ ತಮ್ಮಣ್ಣ"ಅಂತ ಕೇಳಿದೆ. "ನೋಡಿ ನಮ್ಮ ಮುಖ್ಯ ಮಂತ್ರಿಗಳಿಂದ ನಮ್ಮ ಸ್ಟಾಂಡರ್ಡ್ ಇಂಪ್ರೂ ಆಯ್ತು. ಸಾರಾಯಿ ಕುಡುಕೊಂಡಿದ್ದ ನಾವು ಸಾರಾಯಿ ನಿಷೇಧ ಆದ ಮೇಲೆ ಬ್ರಾಂಡಿ , ವಿಸ್ಕಿ, ಕುಡೀತಿದೀವಿ. ಈಗ ಅದನ್ನು ಬಿಡಿ ವೈನ್ ಕುಡೀರಿ ಅಂತ ಏಳ್ತಾವ್ರೆ. ಅದಿಕ್ಕೆ ಏಳಿದ್ದು 'ವೈನಾಗಿದೆ' ಅಂದ ಎಣ್ಣೆ ತಮ್ಮಣ್ಣ. "ಹೋಗ್ಲಿ ಬಿಡಣ್ಣ ನೀನಾದ್ರೂ ಖುಷಿಯಾಗಿದಿಯಲ್ಲ ಬಿಡು" ಎಂದೆ. ಏ ಕುಸಿಯೇನು ಫುಲ್ ಕುಸ್, ಮುಂಚೆ ಎಲೆಕ್ಷನ್ ಪಾಲ್ಟೀನಾ, ಆಮೇಲೆ ಮಂತ್ರಿಗಿರಿ ಸಿಕ್ಕವರ ಸಣ್ಮಾನದ ಪಾಲ್ಟಿಗುಳಾ , ಜತೆಗೆ ಮಂತ್ರಿಗಿರಿ ಸಿಕ್ಕದವರ ಗಲಾಟೆ ಪಾಲ್ಟಿಗಳಾ ಈಗ ಹಂಡ್ರೆಡ್ ಡೇಸ್ ಪಾಲ್ಟಿನಾ ...., ಎಂದು ಇನ್ನೂ ಹೇಳುತ್ತಲೇ ಇದ್ದ. ಸರಿಯಣ್ಣ ಎಂದು ಹೇಳಿ ಅಲ್ಲಿಂದ ಹೊರಟೆ .

ನಂತರ ಎದುರಾದವರು ಒಬ್ಬ ಕವಿ ಪುಂಗವರು. ಸುಮ್ನೆ ಇದ್ದಿದ್ದರೆ ಆಗುತ್ತಿತ್ತೇನೋ, ಅವರನ್ನೂ ಕೇಳಿದೆ "ಕವಿಗಳೇ ನೂರು ದಿನಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು. "ಇವು ನೂರು ದಿನಗಳಲ್ಲ ನೂರು ರಾತ್ರಿಗಳು. ನೂರಾರು ಕರಾಳ ರಾತ್ರಿಗಳು.....," ಎಂದರು. "ಏ... ನಿಮ್ಮ ಕವನ ಹೇಳಬೇಡ್ರೀ, ಅಭಿಪ್ರಾಯ ಹೇಳ್ರೀ" ಎಂದೆ. "ಈ ಸರಕಾರ ಬಂದಾಗಲೇ ಕೋಮುವಾದದ, ಧರ್ಮಾಂಧತೆಯ ಕರಾಳ ಛಾಯೆ ಆವರಿಸಿತು. ಎಲ್ಲೆಲ್ಲೂ ಕತ್ತಲು. ಬೆಳಕೇ ಇಲ್ಲ. ಬೆಳಕಿಲ್ಲದ ಮೇಲೆ ಅದು ದಿನ ಹೇಗಾದೀತು? ಅವು ದಿನಗಳಲ್ಲ, ರಾತ್ರಿಗಳು, ಕರಾಳ ರಾತ್ರಿಗಳು. " ಎಂದು ಹೇಳುತ್ತಲೇ ಇದ್ದರು. 'ಏ... ಮತ್ತೆ ಕವನ ಹೇಳ್ತಿದೀರಲ್ರೀ...., ನಮಗೆ ಅರ್ಥ ಆಗೋ ಹಾಗೆ ಅಭಿಪ್ರಾಯ ಹೇಳ್ರೀ' ಎಂದೆ. ಅಯ್ಯೋ ದಡ್ಡ, ಆಗಿರುವುದೆಲ್ಲ ಅನರ್ಥವೇ ಆಗಿರುವಾಗ ಅದನ್ನು ಅರ್ಥವಾಗುವ ಹಾಗೆ ಹೇಳೆಂದರೆ ನಾ ಹೇಗೆ ಹೇಳಲಯ್ಯಾ....,? ಎಂದರು. ಸರಿ ಸ್ವಾಮಿ ಎಂದು ಅಲ್ಲಿಂದ ಹೊರಟೆ. ▲

ಬಾಡಾ : ಕ್ರಿಶ್ಚಿಯನ್ನರ ಮೇಲೆ ಅಮಾನವೀಯ ಧಾಳಿ

ಮಂಗಳೂರಿನ 'ಕ್ರಾಸ್‌ಹಿಲ್' ಬೆಂಗಳೂರಿನ ಹಲಸೂರು, ತುಮಕೂರಿನ ಯಲ್ಲಾಪುರ ಗ್ರಾಮವೂ ಸೇರಿದಂತೆ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ರಾಜ್ಯದಲ್ಲಿ ಅವ್ಯಾಹತ ದಾಳಿ ನಡೆಯುತ್ತಿವೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವ್ಯವಸ್ಥಿತವಾಗಿ ಕ್ರಿಶ್ಚಿಯನ್ ಸಮುದಾಯದ ವಿರುದ್ಧ ಒಂದಲ್ಲ ಒಂದು ಕಾರಣ ನೀಡಿ ಅಪಪ್ರಚಾರವನ್ನು ಭಜರಂಗದಳ, ವಿಹೆಚ್‌ಪಿ ಹಾಗೂ ಇತರೆ ಹಿಂದೂ ಕೋಮುವಾದಿ ಸಂಘಟನೆಗಳು ನಡೆಸುತ್ತಿವೆ. ಅದರ ಭಾಗವಾಗಿ ದಾವಣಗೆರೆ ಜಿಲ್ಲೆಯಲ್ಲಿ ಹಲವು ಚರ್ಚ್‌ಗಳ ಮೇಲೆ ದಾಳಿಗಳು ನಡೆದಿವೆ.

ದಾವಣಗೆರೆ ತಾಲ್ಲೂಕಿನ ಬಾಡ ಗ್ರಾಮದಲ್ಲಿ ಭಜರಂಗದಳದ ಕಾರ್ಯಕರ್ತರು ಸೆಪ್ಟೆಂಬರ್ 4 ರಂದು ಉದ್ದೇಶಪೂರ್ವಕವಾಗಿ ಚರ್ಚ್‌ನ್ನು ಧ್ವಂಸಗೊಳಿಸಿ ಸಾಮಗ್ರಿಗಳನ್ನು ಒಂದೆಡೆ ಸೇರಿಸಿ ಬೆಂಕಿ ಹಚ್ಚಿರುತ್ತಾರೆ. ಚರ್ಚ್‌ನ ಧರ್ಮಗುರುಗಳ ಕುಟುಂಬದ ಸದಸ್ಯರಿಗೆ ಜೀವಭಯ ಹುಟ್ಟಿಸಿದ್ದಾರೆ. ಇದರಿಂದಾಗಿ ಬಾಡ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕ್ರೈಸ್ತ ಸಮುದಾಯಕ್ಕೆ ಸೇರಿದ ಜನರು ಭಯಭೀತರಾಗಿದ್ದಾರೆ.

ದಾವಣಗೆರೆ ನಗರದಲ್ಲಿ ಡಿ.ಹೆಚ್.ಎಂ. ಪ್ರಾರ್ಥನಾ ಮಂದಿರ, ನಿತ್ಯ ಜೀವ ದೇವಾಲಯ ಹಾಗೂ ಯೇಸುಕ್ರೈಸ್ತ ದೇವಾಲಯ ಚರ್ಚ್‌ಗಳಿಗೆ ಪೊಲೀಸರು ಬೀಗಮುದ್ರೆ ಹಾಕಿದ್ದು, ಅಲ್ಲಿ ಪ್ರಾರ್ಥನೆಗೆ ಯಾವುದೇ ಅವಕಾಶ ಇಲ್ಲ. ಇದೂ ಸಾಲದೆಂಬಂತೆ ಚರ್ಚ್‌ಗಳಿಗೆ ನೋಟೀಸ್ ನೀಡಿ, 'ಪ್ರಾರ್ಥನೆ ಮಾಡಲು ಪರವಾನಿಗೆ ಪಡೆಯಲಾಗಿದೆಯೇ' ಎಂದು ವಿವರಣೆ ಕೇಳಿರುತ್ತಾರೆ. ಸಂವಿಧಾನದ ಅಡಿಯಲ್ಲಿ ಜನರಿಗೆ ನೀಡಿರುವ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ವಿಷಯ ಇದಾಗಿದೆ.

ಭಜರಂಗದಳದ ಕಾರ್ಯಕರ್ತರಲ್ಲದೆ, ಪೋಲೀಸರು ಕೂಡ ಕ್ರೈಸ್ತ ಧರ್ಮ ಗುರುಗಳ ವಿರುದ್ಧ ಹಗೆ ಸಾಧಿಸಲು ಪ್ರಯತ್ನಿಸುತ್ತಿರುವುದು ವಿಷಾದನೀಯ, ಅಲ್ಲದೆ, ಚರ್ಚುಗಳ ಧರ್ಮ ಗುರುಗಳೇ ಭಜರಂಗದಳದ ಕಾರ್ಯಕರ್ತರ ವಿರುದ್ಧ ಗಲಾಟೆ ಮಾಡಲು ಮುಂದಾಗಿದ್ದಾರೆ ಎಂದು ತಾಲ್ಲೂಕು ದಂಡಾಧಿಕಾರಿ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಲಾಗಿದೆ. ಇದರಿಂದ ಬಿಜೆಪಿ ಆಡಳಿತದಲ್ಲಿ ರಾಜಕೀಯ ಒತ್ತಡ ತಂದು ಇಲಾಖೆಯನ್ನು ಕೋಮುವಾದೀಕರಣ ಗೊಳಿಸಲು ಪ್ರಯತ್ನ ನಡೆಯುತ್ತಿದೆ ಎಂಬುದು ಸ್ಪಷ್ಟವಾಗಿದೆ.

ಧರ್ಮಗುರುಗಳೇ ಜಗಳ ನಡೆಸಿದ್ದಾರೆಂಬ ಸುಳ್ಳು ವರದಿಯನ್ನು ಪೋಲೀಸರು ತಹಶೀಲ್ದಾರ್‌ರಿಗೆ ನೀಡಿದ್ದು ಇದರ ಆಧಾರದಲ್ಲಿ ತಹಶೀಲ್ದಾರ್‌ರು 16 ಧರ್ಮಗುರುಗಳ ಮೇಲೆ ವಿಚಾರಣೆ ನಡೆಸುತ್ತಿದ್ದಾರೆ. ಭಜರಂಗದಳದ ಕಾರ್ಯಕರ್ತರು ದಲಿತ ಕ್ರಿಶ್ಚಿಯನ್ನರ ಮೇಲೆ ದಾಳಿಗಳನ್ನು ನಡೆಸಿ, ದೂರು ನೀಡಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ. ಈ ಕುರಿತು ಹಲ್ಲೆಗೊಳಗಾದವರು ದೂರು ನೀಡಿದರೂ ಯಾವುದೇ ಕೇಸನ್ನು ದಾಖಲು ಮಾಡಿಲ್ಲ.

ಬಿಜೆಪಿ ಆಡಳಿತದ ದಾವಣಗೆರೆ ಮಹಾನಗರ ಪಾಲಿಕೆಯೂ ಕೂಡಾ ಚರ್ಚ್‌ಗಳ ಕಾರ್ಯ ನಿರ್ವಹಣೆಗೆ ಅಡ್ಡಿ ಮಾಡುತ್ತಿದೆ. 'ಪ್ರಾರ್ಥನೆ ನಡೆಸಲು ಪರವಾನಿಗೆ ಪಡೆಯಲಾಗಿದೆಯೇ' ಎಂದು ನೋಟೀಸ್ ನೀಡಿರುತ್ತಾರೆ. ಅಂದರೆ ಬಿಜೆಪಿ ಆಡಳಿತ

ದಾಳಿಗೊಳಗಾದ ಚರ್ಚ್



ಹಾಗೂ ಪೊಲೀಸರು ಒಂದಾಗಿ ಕ್ರೈಸ್ತ ಸಮುದಾಯದ ಮೇಲಿನ ಹಲ್ಲೆಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷಿ ಸಚಿವ ರವೀಂದ್ರನಾಥ್‌ರವರು ಈ ಕೃತ್ಯಗಳಿಗೆ ಬೆಂಬಲ ನೀಡುತ್ತಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದಾವಣಗೆರೆ ಜಿಲ್ಲೆ ಒಂದರಲ್ಲೇ 11 ಕಡೆಗಳಲ್ಲಿ ಚರ್ಚುಗಳ ಮೇಲೆ, ಅಲ್ಲಿನ ಧರ್ಮಗುರುಗಳ ಮೇಲೆ ದಾಳಿ, ದೌರ್ಜನ್ಯ ನಡೆಸಿದ ವರದಿಗಳು ಇವೆ. ಆದರೂ ಸರ್ಕಾರ, ಪೋಲೀಸರು ದಾಳಿ ನಡೆಸಿದವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಸಂವಿಧಾನದವನ್ನು ಎತ್ತಿ ಹಿಡಿಯುವುದಾಗಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿಗಳು ಹಾಗೂ ಇತರೆ ಮಂತ್ರಿಗಳು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆಸಿದ್ದಾರೆ.

ದಾವಣಗೆರೆಯಲ್ಲಿ ಚರ್ಚ್‌ಗಳನ್ನು ಧ್ವಂಸಗೊಳಿಸಿದ ಪ್ರಕರಣದ ಸ್ಥಳಗಳಿಗೆ ಸಿಪಿಐ(ಎಂ) ಪಕ್ಷ ನಿಯೋಗ ಸೆಪ್ಟೆಂಬರ್ 9 ರಂದು ಭೇಟಿ ನೀಡಿ ಪರಿಶೀಲನೆ ನಡೆಸಿದೆ. ದಾಳಿಗೀಡಾದ ಚರ್ಚ್‌ಗಳನ್ನು ಪರಿಶೀಲಿಸಿದ ನಿಯೋಗವು ದಾಳಿಗೊಳಗಾದ ಧರ್ಮಗುರು ಅವರ ಕುಟುಂಬ ಹಾಗೂ ಇತರ ಜನರನ್ನು ಭೇಟಿ ಮಾಡಿ ಸಾಂತ್ವನ ಹೇಳಿದೆ.

3 ಚರ್ಚ್‌ಗಳ ಬೀಗಮುದ್ರೆಯನ್ನು ತೆರವುಗೊಳಿಸಬೇಕು ಹಾಗೂ ಸರ್ಕಾರವೇ ಅದರ ದುರಸ್ತಿ ಕಾರ್ಯವನ್ನು ನಡೆಸಿ ಪ್ರಾರ್ಥನೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. 8 ಜನರ ಸಿಪಿಐ(ಎಂ) ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ದಾವಣಗೆರೆ ಪ್ರದೇಶ ಸಮಿತಿ ಕಾರ್ಯದರ್ಶಿ ಕೆ.ಎಲ್.ಭಟ್, ಪ್ರದೇಶ ಸಮಿತಿ ಸದಸ್ಯರಾದ ಅನಂತನಾಯಕ್, ವಿದ್ಯಾರ್ಥಿ ಮುಖಂಡ ವೆಂಕಟೇಶ್‌ನಾಯಕ್ ಮತ್ತಿತರರು ಇದ್ದರು.

■ ಮಾರುತಿ ಮಾನ್ಪಡೆ

ಸೌಹಾರ್ದತೆಗೆ ಧಕ್ಕೆ ರಾಯಚೂರು ಗಲಭೆ

ರಾಯಚೂರು ನಗರದಲ್ಲಿ ಗಣೇಶ ಮಂಟಪ ಬೆಂಕಿ ಪ್ರಕರಣ ಹಿನ್ನಲೆಯಲ್ಲಿ ಸಂಘಪರಿವಾರದ ಕೋಮುಗಲಭೆ ಯತ್ನವನ್ನು ಮತ್ತೊಮ್ಮೆ ಜನತೆ ವಿಫಲಗೊಳಿಸಿದ್ದಾರೆ. ದಿನಾಂಕ 03-09-2008 ರಂದು ತಡರಾತ್ರಿ 12-30 ಮತ್ತು 1.00 ಗಂಟೆ ಸುಮಾರಿಗೆ ದುಷ್ಕರ್ಮಿಗಳು ರಾಯಚೂರು ನಗರದ ಮೂರು ಪ್ರದೇಶಗಳಲ್ಲಿನ ಗಣೇಶ ಮಂಟಪಕ್ಕೆ ಬೆಂಕಿ ಹಚ್ಚಿದ ದುಷ್ಕೃತ್ಯವನ್ನು ಜಾತಿ-ಮತ-ಧರ್ಮ ಎನ್ನದೆ ಎಲ್ಲರೂ ಖಂಡಿಸಿದ್ದಾರೆ. ನಗರದ ಹೃದಯ ಭಾಗದಲ್ಲಿನ ಸದರ ಬಜಾರ್ ಪೊಲೀಸ್ ಠಾಣೆ ಹತ್ತಿರದ ಸೂಪರ್ ಮಾರ್ಕೆಟ್, ಜೈನ್ ಮಂದಿರ ಹಾಗೂ ಬುದಾಸೀ ಮಜೀದ್-ಅಂಜನೇಯ ಗುಡಿ ಹತ್ತಿರದ ಹೈಕೋರ್ಟ್ ಪರವಾನಿಗೆಯಿಂದ ಸ್ಥಾಪಿತಗೊಂಡ ಹೈಕೋರ್ಟ್ ಗಣೇಶ ಮಂಟಪದ ಕೆಲ ಭಾಗವು ಬೆಂಕಿ ತಗಲಿ ಸುಟ್ಟ ಸುದ್ದಿಯು ಕಾಳ್ಗಿಚ್ಚಿನಂತೆ ಹರಡಿ ಉದ್ರಿಕ್ತ ಸ್ಥಿತಿ ನಿರ್ಮಾಣಗೊಂಡಿತು. ವಿವಿದೆಡೆ ಸ್ಥಾಪಿಸಿದ ಗಜಾನನ ಸಮಿತಿಗಳ ಮುಂಖಂಡರು ಯುವಜನರು ಪೊಲೀಸ್ ಠಾಣೆ ಮುಂದೆ ಸೇರಿ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಮುತ್ತಿಗೆ ಹಾಕಿದರು. ಕೋಮುವಾದಿಗಳ ವ್ಯವಸ್ಥಿತ ಪಿತೂರಿಯನ್ನು ಬೇಧಿಸುವಲ್ಲಿನ ಪೊಲೀಸ್ ಇಲಾಖೆಯ ವೈಫಲ್ಯವನ್ನು ಖಂಡಿಸಿ ರಾಯಚೂರು ಬಂದ್‌ಗೆ ಕರೆ ನೀಡಿದರು. ನಾಗರೀಕ ಸಮಿತಿ, ಗಜಾನ ಸಮಿತಿಗಳ ಹೆಸರಿನಲ್ಲಿ ನೀಡಿದ ಬಂದ್ ಕರೆಯಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗ ದಳದ ಬ್ಯಾನರ್, ಧ್ವಜಾಗಳು ರಾರಾಜಿಸಿದವು. ಘಟನೆಗೆ ಕೋಮು ಬಣ್ಣ ನೀಡಲು ಪ್ರಯತ್ನಿಸಲಾಯಿತು. ವಿಹೆಚ್‌ಪಿ, ಭಜರಂಗ ದಳ, ಹಿಂದೂ ಪರ ಸಂಘಟನೆಯ ಬಂದ್ ಕರೆ ಎಂದು ಪ್ರತಿಬಿಂಬಿಸಲಾಯಿತು. ಬಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಬಂದ್ ಕರೆಯಲ್ಲಿ ಉದ್ರಿಕ್ತ ಜನರಿಂದ ಕಲ್ಲು ತೂರಾಟ, ವಾಹನಗಳ ಮೇಲೆ ದಾಳಿ. ರಸ್ತೆತಡೆ ನಡೆದವು. ಕೆಲವೆಡೆ ಹಿಂಸೆಗೆ ಇಳಿದ ಜನರನ್ನು ಚದುರಿಸಲು ಲಘು ಲಾಠಿ ಚಾರ್ಜ ಮಾಡಲಾಯಿತು. ರಸ್ತೆ ರ‍್ಯಾಲಿಗಳಲ್ಲಿ ಬಿಜೆಪಿ ವಿಧಾನ ಪರಿಷತ್ ಸದಸ್ಯರು, ನಗರ ಸಭೆ ಅಧ್ಯಕ್ಷರು, ಮಾಜಿ ಶಾಸಕರು ಭಾಗವಹಿಸಿದರಿಂದ ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿತ್ತು. ಉದ್ರಿಕ್ತಸ್ಥಿತಿಯಲ್ಲಿ ಅಂಗಡಿ ವ್ಯಾಪಾರ ಮಳಿಗೆಗಳು ಸ್ವಯಂ ಪ್ರೇರಿತವಾಗಿ ಮುಚ್ಚಿದವು, ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆದರಿಂದ ಸಂಚಾರ ಸ್ಥಗಿತಗೊಂಡಿತು. ಶಾಲಾ ಕಾಲೇಜುಗಳಿಗೆ ರಜ ಘೋಷಿಸಲಾಯಿತು. ಮಧ್ಯಾಹ್ನದ ನಂತರ ಅಲ್ಪ ಸಂಖ್ಯಾತರು ಹೆಚ್ಚಿರುವ ಪ್ರದೇಶಕ್ಕೆ ಸಂಘಪರಿವಾರದ ನೇತೃತ್ವದಲ್ಲಿ ದಾಳಿಗೆ ಪ್ರಯತ್ನಿಸಲಾಯಿತು. ಮುಚ್ಚಿದ ಅಂಗಡಿಗಳ ಮೇಲೆ, ನಿಂತ ದ್ವಿಚಕ್ರ ವಾಹನಗಳ ಮೇಲೆ ದಾಳಿ ನಡೆಸಿದರಿಂದ ಪ್ರತಿ ದಾಳಿ ನಡೆದರಿಂದ ಗುಂಪು ಘರ್ಷಣೆಗೆ ಕಾರಣವಾಗುವದನ್ನ ಅರಿತ ಪೊಲೀಸ್ ಇಲಾಖೆ ಎಚ್ಚೆತ್ತು ಲಾಠಿ ಚಾರ್ಜ್ ಮಾಡಿತು. ಮೂರುಜನರು ಗಾಯಗೊಂಡರು, ಸಂಘಪರಿವಾರದ 10 ಜನ ಮುಖಂಡರನ್ನು ಬಂಧಿಸಲಾಯಿತು. ಅನಿರ್ದಿಷ್ಟ ನಿಷೇದಾಜ್ಞೆ ಜಾರಿಗೊಳಿಸಲಾಯಿತು. ನಗರ ನಿಯಂತ್ರಕ್ಕೆ ಬಂತು.

ರಾಯಚೂರು ನಗರ ಕೋಮು ಸೌಹಾರ್ದತೆಗೆ ಮತ್ತು ಶಾಂತಿ ಸಹಬಾಳ್ವೆಗೆ ಹೆಸರಾದ ನಗರ. ಹಣ ಬಲದಿಂದ ಜಿಲ್ಲೆಯ ಮಸ್ಕಿ ಮತ್ತು ಲಿಂಗಸೂಗೂರು ವಿಧಾನಸಭಾ ಸ್ಥಾನಗಳನ್ನು ಕಾಂಗ್ರೆಸ್ ವಲಸಿಗರು ಬಿಜೆಪಿಯಿಂದ ಜಯಗಳಿಸಿದ್ದಾರೆ. ಆದರೆ ಸಂಘಪರಿವಾರದ ಯಾವ ಮುಖಂಡರೂ ಸ್ಥಳೀಯ ಸಂಸ್ಥೆಗೆ ಆಯ್ಕೆಯಾಗುವದು ಸಾಧ್ಯವಾಗಿಲ್ಲ. ಇತ್ತೀಚೆಗೆ ವಿಧಾನ ಪರಿಷತ್‌ಗೆ ನಾಮಕರಣ ಮಾಡಲಾಗಿದೆ. ಸಂಘ ಪರಿವಾರದ ಚಟುವಟಿಕೆಗಳು ತೀವ್ರಗೊಂಡಿದ್ದರೂ ಜನರಿಂದ ದೂರ ಇವೆ. ಹೈದ್ರಾಬಾದ್- ಕರ್ನಾಟಕದ ಕಲ್ಯಾಣ ನಾಡು ಕೋಮು ಸಾಮರಸ್ಯಕ್ಕೆ ಹೆಸರುವಾಸಿ. ಸಂತ-ಸೂಫಿಗಳ ಬೀಡು. ಈಗಲು ದರ್ಗಾ ಮತ್ತು ಮಂದಿರಗಳಲ್ಲಿ ಜಾತಿ-ಧರ್ಮಗಳು ಮೀರಿ ಆಚರಣೆಗಳು ನಡೆಯುತ್ತವೆ. ಸಂಘಪರಿವಾರದ ಆಟಗಳು ಈ ಹಿಂದೆ 1988 ಮತ್ತು 1990ರ ಗಣೇಶೋತ್ಸವದ ಸಂದರ್ಭದಲ್ಲಿಯೂ ಕೋಮು ಗಲಭೆ ಪ್ರಚೋದನೆಗೆ ಪ್ರಯತ್ನಿಸಿತ್ತು. ಕಳೆದ ವರ್ಷಗಳಲ್ಲಿ ಮೊಹರಂ ಮತ್ತು ಗಣೇಶ ವಿಸರ್ಜನೆ ಏಕಕಾಲಕ್ಕೆ ಬಂದಿದ್ದರೂ ಸೌಹಾರ್ದತೆಯಿಂದ ಆಚರಿಸಲಾಗಿತ್ತು. ಬಿಜೆಪಿಯ ಗುಜರಾತ್ ಮಾದರಿ ಆಡಳಿತವನ್ನು ರಾಯಚೂರಿನಿಂದ ಪ್ರಾರಂಭಿಸುವ ಹೊಂಚು ವಿಫಲಗೊಂಡಿದೆ. ಶಾಂತಿ ಸಭೆ ನಡೆಸಲು ಸಹಕರಿಸುತ್ತಿಲ್ಲ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಯಚೂರು ಜಿಲ್ಲಾ ಸಮಿತಿ ಮಧ್ಯ ಪ್ರವೇಶಿಸಿ ಶಾಂತಿ ಕಾಪಾಡಲು ಜನತೆಯಲ್ಲಿ ಮನವಿ ಮಾಡಿಕೊಳ್ಳ ಲಾಯಿತು. ದುಷ್ಕರ್ಮಿಗಳನ್ನು ಬಂಧಿಸಲು ಜಿಲ್ಲಾಡಳಿತ ತೀವ್ರ ಕ್ರಮ ಕೈಗೊಳ್ಳಲು ಒತ್ತಾಯಿಸಲಾಯಿತು. ರಾಯಚೂರು ನಗರದ ಜನತೆ ತಮ್ಮ ಐತಿಹಾಸಿಕ ಪರಂಪರೆಯ ಶಾಂತಿ ಸೌಹಾರ್ದತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ.


○ ಚೆನ್ನಿ

ಬಿ.ಎಂ.ಟಿ.ಸಿ. ಖಾಸಗೀಕರಣದತ್ತ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(BMTC)ಯು 32 ಡಿಪೋಗಳ ಮೂಲಕ ಬೆಂಗಳೂರು-ನಗರ ಮತ್ತು ಸುತ್ತಮುತ್ತಲಿನ ಎಲ್ಲಾ ವರ್ಗಗಳ ನಾಗರೀಕರ ಪ್ರಯಾಣ ಅವಶ್ಯಕತೆಗಳನ್ನು ಪೂರೈಸಲಾಗುತ್ತಿದೆ. ಸಾರ್ವಜನಿಕರ ಪ್ರಯಾಣದ ಅವಶ್ಯಕತೆಗಳನ್ನು ನೀಗಿಸಲು ಚಾಲಕರು-ನಿರ್ವಾಹಕ-ತಾಂತ್ರಿಕ ಸಿಬ್ಬಂದಿ-ಆಡಳಿತ ಸಿಬ್ಬಂದಿಗಳು ಒಳಗೊಂಡಂತೆ ಸುಮಾರು 30 ಸಾವಿರಕ್ಕೂ ಹೆಚ್ಚಿನ ನೌಕರರು ಹಗಲಿರುಳು ದುಡಿಯುತ್ತಿದ್ದಾರೆ. ಈ ಎಲ್ಲಾ ನೌಕರರು ಮತ್ತು ಕುಟುಂಬಗಳು ಬಿ.ಎಂ.ಟಿಸಿ. ಸಂಸ್ಥೆಯ ಕಾರ್ಯ ನಿರ್ವಹಣೆ ಮೇಲೆ ಎಲ್ಲರ ಜೀವನ ಹೊಂದಿಕೊಂಡಿದೆ.

ವೇತನ ಹೆಚ್ಚಳದ ನೆಪ

ಇತ್ತೀಚೆಗೆ ರಾಜ್ಯ ಸರ್ಕಾರವು ನೌಕರರ ವೇತನ ಭತ್ಯೆಗಳ ಹೆಚ್ಚಳವನ್ನು ನೆಪಮಾಡಿ ಪ್ರಯಾಣಿಕರ ಮೇಲೆ ದರ ಏರಿಕೆ ಹೊರೆಯನ್ನು ಮಾಡಲಾಗಿದೆ. ವಾಸ್ತವವಾಗಿ ಎಲ್ಲರಿಗೂ ತಿಳಿದಿರುವಂತೆ ನೌಕರರ ವೇತನ ಹೆಚ್ಚಳಕ್ಕೆ ಸಂಬಂಧಪಟ್ಟಂತೆ ಯಾವುದೇ ಒಪ್ಪಂದವನ್ನಾಗಲೀ ಅಥವಾ ಪೂರಕ ಕ್ರಮಗಳನ್ನಾಗಲೀ ವಹಿಸಲಾಗಿಲ್ಲವೆಂಬುದು ಸತ್ಯ ಸಂಗತಿಯಾಗಿದೆ. ಬಸ್ ದರ ಏರಿಕೆ ಬಗ್ಗೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವ ಪ್ರಯತ್ನ ಇದಾಗಿದೆ.



ದುರುದ್ದೇಶ

ಇಡೀ ದೇಶದಲ್ಲೇ ಲಾಭದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ.ಎಂ.ಟಿ.ಸಿ ಸಂಸ್ಥೆಯ ಶೇರು ಬಂಡವಾಳವನ್ನು ಶೇ.15ರಷ್ಟು ಹಿಂಪಡೆದು ರೂ.30 ಕೋಟಿ ರೂ.ಗಳನ್ನು ಸಂಗ್ರಹಿಸುವ ತೀರ್ಮಾನವನ್ನು ಬಿ.ಜೆ.ಪಿ ಸರ್ಕಾರ ಕೈಗೊಂಡಿದೆ.

ಸಂಸ್ಥೆಯ ಬಂಡವಾಳ ಹಿಂಪಡೆಯುವುದೆಂದರೆ ಸರ್ಕಾರಿ ಸಂಸ್ಥೆಯ ಪಾಲನ್ನು ಖಾಸಗೀಯವರಿಗೆ ಮಾರಾಟ ಮಾಡುವುದಾಗಿದೆ. ಇಂತಹ ಮಾರಾಟವು ಬಿ.ಎಂ.ಟಿ.ಸಿ.ಯನ್ನು ಖಾಸಗೀಕರಣ ಮಾಡುವ ದೀರ್ಘ ಕಾಲಿಕ ದುರುದ್ದೇಶದ ಮೊದಲ ಹೆಜ್ಜೆಯಾಗಿದೆ. ಬಿ.ಜೆ.ಪಿ ಸರ್ಕಾರದ ಖಾಸಗೀಕರಣ ನೀತಿಯ ಭಾಗವಾಗಿ ಇಂತಹ ಬಂಡವಾಳ ಹಿಂಪಡೆಯುವ ಕ್ರಮವಾಗಿದೆ.

ಇಂತಹ ಖಾಸಗೀಕರಣದ ಮೊದಲ ಹೆಜ್ಜೆಯಲ್ಲಿ ಕಾರ್ಮಿಕರನ್ನು ಯಾಮಾರಿಸಲು ಬಂಡವಾಳ ಹಿಂಪಡೆಯುವುದರಲ್ಲಿ ಪ್ರತಿಯೊಬ್ಬ ನೌಕರನಿಗೆ 200 ಶೇರುಗಳನ್ನು ನೀಡುವುದಾಗಿ ವಂಚನೆಯ ಯೋಜನೆಯನ್ನು ಮಾಡಲಾಗಿದೆ. ಈ ಕ್ರಮದಲ್ಲಿ ಸರ್ಕಾರ ಯಶಸ್ವಿಯಾದಲ್ಲಿ ಬಿ.ಎಂ.ಟಿ.ಸಿ ಸರ್ಕಾರಿ ಸಂಸ್ಥೆಯ ಸ್ಥಾನ-ಮಾನವನ್ನೇ ಕಳೆದುಕೊಳ್ಳುತ್ತದೆ ಹಾಗೂ ಖಾಸಗೀ ಬಂಡವಾಳಗಾರರ ಕೈಗೆ ಪರೋಕ್ಷವಾಗಿ ಆಡಳಿತ ವರ್ಗಾಯಿಸಲ್ಪಡುತ್ತದೆ. ಅಂದರೆ ಹೆಸರಿಗೆ ಬಿ.ಎಂ.ಟಿ.ಸಿ. ಮುಂದುವರೆದರೂ ಅದರ ಮಾಲೀಕತ್ವ ಮತ್ತು ಆಡಳಿತ ಖಾಸಗೀಯವರ ಪಾಲಾಗುತ್ತದೆ. ಇದರ ನೇರ ಪರಿಣಾಮ ಬಂಡವಾಳಗಾರರು ಸಂಸ್ಥೆಯನ್ನು ಲಾಭಕ್ಕಾಗಿ ಮಾತ್ರ ನಿರ್ವಹಿಸುವುದರಿಂದ ಎಲ್ಲಾ ವರ್ಗದ ನೌಕರರ ಮೇಲೆ ದಾಳಿ ಹೆಚ್ಚಾಗುತ್ತದೆ. ಉದ್ಯೋಗದ ಭದ್ರತೆ ಆತಂಕಕ್ಕೆ ಒಳಗಾಗುತ್ತದೆ. ಅಷ್ಟೇ ಅಲ್ಲದೇ ನೌಕರರಿಗೆ ಸಿಗುವ ಸೌಲಭ್ಯಗಳು ಮತ್ತು ಕಲ್ಯಾಣ



ಯೋಜನೆಗಳಿಂದ ವಂಚಿತರಾಗುತ್ತಾರೆ.

ಮತ್ತೊಂದೆಡೆ ಪ್ರಯಾಣಿಕರಲ್ಲಿ ವಿವಿಧ ಜನ ವರ್ಗಗಳಿಗೆ ಲಭ್ಯವಾಗುತ್ತಿರುವ, ವಿದ್ಯಾರ್ಥಿ ರಿಯಾಯಿತಿ ಅಂಗವಿಕಲರ, ಸ್ವಾತಂತ್ರ್ಯಯೋಧರ ದಿನ ಮತ್ತು ತಿಂಗಳ ಪಾಸುಗಳು ಮತ್ತು ಪೊಲೀಸ್ ಪತ್ರಕರ್ತರ ಪಾಸುಗಳು, ದಾಳಿಗೊಳಗಾಗುತ್ತವೆ. ಆದ್ದರಿಂದ ಈ ಖಾಸಗೀಕರಣದ ಹೆಮ್ಮಾರಿ ಕೇವಲ ನೌಕರರನ್ನಷ್ಟೇ ಬಾಧಿಸುವುದಲ್ಲದೆ ಸಾರ್ವಜನಿಕರಿಗೂ ಸೌಲಭ್ಯಗಳಿಂದ ವಂಚನೆ ಮಾಡಲಾಗುತ್ತದೆ.

ಚಳುವಳಿಯತ್ತ

ಈ ಹಿನ್ನೆಲೆಯಲ್ಲಿ ದಿನಾಂಕ 15.9.2008 ರಂದು ಬಂಡವಾಳ ಹಿಂಪಡೆಯುವ ಸರ್ಕಾರದ ಕ್ರಮವನ್ನು ವಿರೋಧಿಸಿ ತೀವ್ರ ಪ್ರತಿಭಟನೆಯನ್ನು ನಡೆಸಲು ಸಿಐಟಿಯು ನೇತ್ರತ್ವದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಫೆಡರೇಷನ್ ವತಿಯಿಂದ ತೀರ್ಮಾನಿಸಲಾಗಿದೆ. ಈ ಪ್ರತಿಭಟನೆಯು ಬಿ.ಎಂ.ಟಿ.ಸಿ.ಯನ್ನು ಸರ್ಕಾರಿ ಮಾಲಿಕತ್ವದಲ್ಲೇ ಉಳಿಸಲು ಹಾಗೂ ನೌಕರರು ಮತ್ತು ಕುಟುಂಬಗಳ ಹಿತರಕ್ಷಣೆಗಾಗಿ ಮತ್ತು ಸಾರ್ವಜನಿಕರಿಗೆ ಸೇವಾ-ಸೌಲಭ್ಯಗಳನ್ನು ಸಂರಕ್ಷಿಸಿ ಮುಂದುವರೆಸಲು ನಡೆಸಲಾಗುತ್ತದೆ.

■ ಎಸ್.ಪ್ರಸನ್ನಕುಮಾರ್

ಹಿಮ್ಮುಖ ನಡಿಗೆ – ಬಿಜೆಪಿ ಸರ್ಕಾರದ 'ಸಾಧನೆ'ಗೆ ಸಂಕೇತ

ಬಿಜೆಪಿ ಸರ್ಕಾರದ ನೂರು ದಿನಗಳ ಆಡಳಿತದ ವೈಫಲ್ಯಗಳನ್ನು ಖಂಡಿಸಿ ಸೆಪ್ಟೆಂಬರ್ 9 ರಂದು ರಾಜ್ಯವ್ಯಾಪಿ ವಿವಿಧೆಡೆ ಪ್ರತಿಭಟನೆಗಳು ನಡೆದಿವೆ. ಸಿಪಿಐ(ಎಂ) ರಾಜ್ಯಸಮಿತಿಯ ಕರೆಯ ಮೇರೆಗೆ ನಡೆದ ಪ್ರತಿಭಟನೆಯ ಭಾಗವಾಗಿ ಬೆಂಗಳೂರಿನಲ್ಲಿ ಒಂದು ವಿಭಿನ್ನ ಪ್ರತಿಭಟನೆ ನಡೆಯಿತು. ಟೌನ್‌ಹಾಲ್ ಬಳಿ ಜಮಾಯಿಸಿದ ಕಾರ್ಯಕರ್ತರು ಕಾರ್ಪೊರೇಷನ್ ವೃತ್ತದವರೆಗೆ ಹಿಮ್ಮುಖ ನಡಿಗೆ ನಡೆದರು. ಇದು ಬಿಜೆಪಿಗೆ 'ಸಾಧನೆ'ಯ ಸಂಕೇತ. ಬೆನ್ನ ಮೇಲೆ ಸಾಧನೆ ಸಾರುವ ಚಿತ್ರಗಳು. ಜನರು ಕಣ್ಣರಳಿಸಿ ನೋಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಜಿ.ಎನ್.ನಾಗರಾಜ್, ಜಿ.ಸಿ.ಬಯ್ಯಾರೆಡ್ಡಿ, ಪ್ರಸನ್ನಕುಮಾರ್, ಜಿಲ್ಲಾಕಾರ್ಯದರ್ಶಿ ಕೆ.ಪ್ರಕಾಶ್, ಗೌರಮ್ಮ ಮುಂತಾದವರು ನೇತೃತ್ವ ವಹಿಸಿದ್ದರು. ಕಾರ್ಪೊರೇಷನ್ ಬಳಿ ಪ್ರತಿಭಟನಾ ಸಭೆ ನಡೆಯಿತು.



...............'ಮಹಾಸ್ಫೋಟ' ಪರೀಕ್ಷೆ

ಪುಟ 16 ರಿಂದ

ಸುಮಾರು ರೂ. 30,000 ಕೋಟಿಗಿಂತಲೂ ಹೆಚ್ಚು ವ್ಯಯ ಮಾಡಿದೆ.

ವಿಶ್ವದ ಸೃಷ್ಟಿಯ ಶೋಧ ಮತ್ತು ಬಿಗ್‌ಬ್ಯಾಂಗ್ (ಮಹಾ ಸ್ಫೋಟ):

ಈ ವಿಶ್ವ ಆದೇಗೆ ರೂಪು ತಳೆಯಿತೆಂಬುದರ ಕುರಿತಂತೆ ಆದಿ ಕಾಲದಿಂದಲೂ ಚರ್ಚೆಗಳೂ ನಡೆಯುತ್ತಲೇ ಬಂದಿವೆ. ಇದಕ್ಕೆ ಉತ್ತರವಾಗಿ ದೈವವಾದಿಗಳು ಬ್ರಹ್ಮ, ಬೈಬಲ್, ಇತ್ಯಾದಿಗಳತ್ತ ಬೊಟ್ಟು ತೋರಿದರೆ, ವಿಜ್ಞಾನದ ಪರೀಕ್ಷೆಗಳು ಮತ್ತು ಅದರ ಭೌತಿಕ ನಿಯಮಗಳು ಇವೆಲ್ಲ ಕಲ್ಪಿತ ನಂಬಿಕೆಗಳನ್ನು ನುಚ್ಚುನೂರು ಮಾಡುತ್ತಾ ಬಂದಿವೆ.

ನಮ್ಮ ವಿಶ್ವ, ಕಾಲ ಮತ್ತು ವ್ಯಾಪ್ತಿ ಎರಡರಲ್ಲೂ ಅಪರಿಮಿತ. ಇಲ್ಲಿ ಬದಲಾವಣೆಯೊಂದೇ ಸ್ಥಿರವಾಗಿರುವುದು. ಒಂದಾನೊಂದು ಕಾಲದಲ್ಲಿ ಬಹುತೇಕ ಶೂನ್ಯದಿಂದ ಈ ವಿಶ್ವ ಮೂಡಿಬಂದಿದ್ದು, ಹೆಚ್ಚಿನ ಉಷ್ಣಾಂಶದಿಂದ ಹಲವು ಸಣ್ಣ ಉಂಡೆಗಳಾಗಿ ಸಿಡಿದು, ಈ ಉಂಡೆಗಳು ಹಲವು ಗೆಲಾಕ್ಸಿಗಳಾಗಿ, ನಕ್ಷತ್ರಗಳಾಗಿ, ಗ್ರಹಗಳಾಗಿ, ಭೂಮಿಯಂಥಹ ಗ್ರಹದಲ್ಲಿ ಜೀವಿಗಳು ರೂಪುಗೊಂಡು, ... ಹೀಗೆ ಸಹಸ್ರ ಸಹಸ್ರ ಕೋಟಿ ಕೋಟಿ ವರುಷಗಳಿಂದ ಮಾರ್ಪಾಡಾಗುತ್ತಾ ಬಂದಿದೆ, ಅದರ ಗಾತ್ರ ಹಿಗ್ಗುತ್ತಾ ವಿಸ್ತರಿಸುತ್ತಾ ಸಾಗುತ್ತಿದೆಯೆಂದು ಇಂದು ವಿಜ್ಞಾನಿಗಳು ನಂಬುತ್ತಾರೆ. ಇದನ್ನು 'ಮಹಾ ಸ್ಫೋಟ' ಸಿದ್ಧಾಂತ (ಬಿಗ್‌ಬ್ಯಾಂಗ್ ಥಿಯರಿ) ಎಂದು ಕರೆಯಲಾಗುತ್ತಿದ್ದು, ಹಲವು ಪರೀಕ್ಷೆಗಳು ಮತ್ತು ಪುರಾವೆಗಳ ಬಲದಿಂದಾಗಿ ಬಹುತೇಕ ವಿಜ್ಞಾನಿಗಳು ಈ ಸಿದ್ಧಾಂತವನ್ನು ಒಪ್ಪುತ್ತಾರೆ. 1980ರಲ್ಲಿ ಭೌತವಿಜ್ಞಾನ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಜೇಮ್ಸ್ ವಾಟ್ಸನ್ ಕ್ರೋನಿನ್ ಹೇಳುವಂತೆ ?ನಾವು ಇದುವರೆಗೂ ವಿಶ್ವದ ಕೇವಲ ಶೇ. 4.0 ಭಾಗವನ್ನಷ್ಟೇ ಬಲ್ಲೆವು, ಆದರೆ ಎಲ್ಲೆಡೆ ಹರಡಿರುವ ಮತ್ತು ಈ ವಿಶ್ವವನ್ನು ಹಿಡಿದಿಟ್ಟು ಅದರ ವಿಸ್ತರಣೆಯ ಚಲನೆಗೆ ಕಾರಣವಾಗಿರುವ ಇನ್ನೂ ಶೇ. 96 ರಷ್ಟು ಭಾಗವನ್ನು ಅರಿಯಬೇಕಿದೆ.?

ಪ್ರಸ್ತುತ ನಡೆಸುತ್ತಿರುವ ದೈತ್ಯ ಡಿಕ್ಕಿಕಾರಕ ಪರೀಕ್ಷೆಯನ್ನು ಮಾನವ ಇತಿಹಾಸದಲ್ಲೇ ಮಹತ್ತರ ಮೈಲುಗಲ್ಲೆಂದು ಬಣ್ಣಿಸಿರುವ ಬ್ರಿಟನ್ನಿನ ಪ್ರಸಿದ್ಧ ಖಗೋಳ ವಿಜ್ಞಾನಿ ಮಾರ್ಟಿನ ರೀಸ್ ?ಅಸಂಖ್ಯಾತ ಸಂಖ್ಯೆಯ ವಿಶ್ವಗಳಿದ್ದು ಪ್ರತಿಯೊಂದು ಕೂಡ ವಿವಿಧ ರೀತಿಯ ಸ್ವರೂಪ, ವಾತಾವರಣ, ಗುಣಲಕ್ಷಣಗಳನ್ನು ಹೊಂದಿವೆ. ನಾವು ಬದುಕಲು ಸೂಕ್ತವಿರುವ ಗುಣಲಕ್ಷಣ ಮತ್ತು ವಾತಾವರಣ ಭೂಮಿಯಲ್ಲಿರುವುದರಿಂದ ನಾವಿಲ್ಲಿ ಬದುಕುತ್ತಿದ್ದೇವೆ. ಸಹಸ್ರ ಸಹಸ್ರ ಕೋಟಿ ಕೋಟಿ ವರುಷಗಳ ಹಿಂದೆ ಉರಿದು ಹೋದ ನಕ್ಷತ್ರಗಳ ಬೂದಿಯಿಂದ ನಾವು ನಿರ್ಮಿತವಾಗಿದ್ದೇವೆ? ಎನ್ನುತ್ತಾರೆ.

ಹಲವು ರಹಸ್ಯಗಳಿಗೆ ಉತ್ತರದ ನಿರೀಕ್ಷೆ:

ಜೀವವಿರುವ ಮತ್ತು ನಿರ್ಜೀವವಾದ ಎಲ್ಲ ವಸ್ತುಗಳು ಮೂಲ ವಸ್ತುಗಳಿಂದ ಆಗಿವೆ. ಆದರೆ ಈ ಮೂಲವಸ್ತುಗಳ ಒಳಗೇನಿದೆ? ಕಣಗಳು ಹೇಗೆ ದ್ರವ್ಯರಾಶಿಯನ್ನು ಗಳಿಸಿಕೊಳ್ಳುತ್ತವೆ? ಇದಕ್ಕೆ ಹಿಗ್ಸ್ ಬೋಸಾನ್‌ಗಳು ಕಾರಣವೆಂದು ಹೇಳಲಾಗುತ್ತದೆ. ಇವುಗಳನ್ನು 'ದೇವ ಕಣಗಳು' ಎಂದು ಸ್ಟೀಫನ್ ಹಾಕಿಂಗ್ ಹೇಳುತ್ತಾರೆ. ಇವುಗಳ ಕುರಿತು ಇನ್ನಷ್ಟು ಮಾಹಿತಿಯನ್ನು ಪಡೆಯಬಹುದೇ? ಮಹಾಸ್ಫೋಟದ ನಂತರ ನಿದ್ರ್ರವ್ಯ (ಆಂಟಿ ಮ್ಯಾಟರ್) ಎಲ್ಲಿ ಹೋಯಿತು? ಇತ್ಯಾದಿ ಯಂಥಹ ಹತ್ತಲವು ರಹಸ್ಯ ಪ್ರಶ್ನೆಗಳಿಗೆ ಉತ್ತರ ಪಡೆಯುವ ಕೌತುಕ ವಿಜ್ಞಾನಿಗಳದು.

ಇಂಥಹದೊಂದು ಮಹಾಪರೀಕ್ಷೆಯಿಂದ ತಕ್ಷಣದಲ್ಲೇ ಫಲಿತಾಂಶಗಳು ಲಭಿಸುತ್ತವೆಂದು ಕೊಳ್ಳದಿದ್ದರೂ ನಮ್ಮ ವಿಶ್ವವನ್ನು ಅರಿತುಕೊಳ್ಳುವ ಶೋಧನಾ ಮಾರ್ಗ ವೈಜ್ಞಾನಿಕ ತಳಹದಿಯ ಮೇಲೆ ಮುಂದೆ ಸಾಗಲೆಂದು ನಮ್ಮ ವಿಜ್ಞಾನಿಗಳಿಗೆ ಹಾರೈಸೋಣ.

ಟಾಟಾ ಸಂಸ್ಥೆಯವರು ಸರ್ಕಾರ ಮತ್ತು ಮಮತಾರ ನಡುವಿನ ಒಪ್ಪಂದವನ್ನು ಒಪ್ಪಿಲ್ಲವೆಂದಿದ್ದರೂ ಬಿಕ್ಕಟ್ಟಿನ ಪರಿಹಾರದ ದಾರಿಯ ಹುಡುಕಾಟ ನಡೆದಿದೆ. ಸಿಂಗೂರು ಮತ್ತೆ ಶಾಂತಗೊಳ್ಳುತ್ತಿದೆ. ಕಳೆದ ಎರಡು ವಾರಗಳ ಆರ್ಭಟ, ಗದ್ದಲ ನಿಂತಿದೆ. ಇದು ಹೇಗೆ ಸಾಧ್ಯವಾಯಿತು, ಮತ್ತೆ-ಮತ್ತೆ ಈ ಸವಾಲು ಏಕೆ ಬರುತ್ತಿದೆ, ಮಮತಾ ಬ್ಯಾನರ್ಜಿಯವರೊಂದಿಗೆ ಕಾಂಗ್ರೆಸ್, ಬಿಜೆಪಿ, ಮುಸ್ಲಿಂ ಮೂಲಭೂತವಾದಿಗಳು, ಮಾವೋವಾದಿಗಳು, ಎನ್‌ಜಿವೊಗಳು ಮತ್ತು ಕಾರ್ಪೊರೆಟ್ ಮಾಧ್ಯಮ ಎಲ್ಲರೂ ಕೈಮಿಲಾಯಿಸುತ್ತಾರೇಕೆ?

ಸಿಂಗೂರ್ : ಪ್ರತಿಗಾಮಿಗಳ ರಾಜಕೀಯ ಸವಾಲು

ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ಕಳೆದ ಎರಡು ವಾರಗಳಿಂದ ನಡೆಯುತ್ತಿದ್ದ ಮಮತಾ ಬ್ಯಾನರ್ಜಿ ನೇತೃತ್ವದ 'ಮುತ್ತಿಗೆ', ಗದ್ದಲ, ಆರ್ಭಟಗಳು ಈಗ ನಿಂತಿವೆ. ಅಲ್ಲಿನ ಜನ ಸದ್ಯಕ್ಕಂತೂ ಹಾಯಾಗಿ ಉಸಿರಾಡುವಂತಾಗಿದೆ. ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿಯವರ ಸಮ್ಮುಖ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ ಮತ್ತು ಮಮತಾ ಬ್ಯಾನರ್ಜಿ ನಡುವೆ ಎರಡು ಸುತ್ತಿನ ಮಾತುಕತೆಗಳ ನಂತರ ಸಪ್ಟೆಂಬರ್ 7ರಂದು ಒಂದು ನಿರ್ಣಯಕ್ಕೆ ಬರಲಾಯಿತು. ಇದನ್ನು ರಾಜ್ಯಪಾಲರು ಪ್ರಕಟಿಸಿದರು. ಇದರ ಪ್ರಕಾರ ತೃಣಮೂಲ ಕಾಂಗ್ರೆಸ್ 15 ದಿನಗಳಿಂದ ನಡೆಯುತ್ತಿದ್ದ ತನ್ನ 'ಮುತ್ತಿಗೆ'ಯನ್ನು ನಿಲ್ಲಿಸುತ್ತದೆ, ಒಂದು ವಾರದ ವರೆಗೆ ಮೋಟಾರ್ ಪ್ರಾಜೆಕ್ಟ್‌ನ 'ವೆಂಡರ್ಸ್ ಪಾರ್ಕ್'ನಲ್ಲಿ ಕೆಲಸ ನಿಲ್ಲಿಸಬೇಕು ಹಾಗೂ ಈ ಒಂದು ವಾರದಲ್ಲಿ ಇದುವರೆಗೆ ತಮ್ಮ ಜಮೀನಿಗೆ ಪರಿಹಾರ ಮೊತ್ತ ಪಡೆಯಲು ನಿರಾಕರಿಸಿದವರಿಗೆ 'ಗರಿಷ್ಟ' ಪ್ರಮಾಣದ ಭೂಮಿ ನೀಡುವ ವಿಧಿ-ವಿಧಾನಗಳನ್ನು ಅಂತಿಮಗೊಳಿಸಬೇಕು.

ಇದರೊಂದಿಗೆ ಸಿಂಗೂರ್‌ನಲ್ಲಿ ತೃಣಮೂಲ ಕಾಂಗ್ರೆಸ್ ಹಾಕಿದ್ದ ವೈಭವೋಪೇತ 'ಧರಣಾ ಮಂಚ್'ನ್ನು ಸಪ್ಟಂಬರ್ 8 ರಂದು ಆ ಪಕ್ಷದ ಕಾರ್ಯಕರ್ತರೇ ಕಳಚಿ ಹಾಕಿದ್ದಾರೆ. ಹಿಂದಿನ ದಿನದ ವರೆಗೂ ಕೇಳಬರುತ್ತಿದ್ದ ಉದ್ಯಮಿಗಳು 'ಬಂಗಾಳ ಬಿಡಲಿ' ಎಂಬ ಬೊಬ್ಬೆ ನಿಂತಿತು. ಪತ್ರಿಕೆಗಳ ಎದುರು

ಆತಂಕಿತರಾಗಿದ್ದ ರಾಜ್ಯಪಾಲರ ಮಧ್ಯಪ್ರವೇಶ ಮುಖ್ಯ ಪಾತ್ರ ವಹಿಸಿತು. ಆದರೆ ಈ ಹಿಂದೆ ರಾಜ್ಯಪಾಲರ ಇಂತಹ ಪ್ರಯತ್ನ ಸಫಲವಾಗಿರಲಿಲ್ಲ ಎಂಬುದನ್ನೂ ಗಮನಿಸಬೇಕು. ತೃಣಮೂಲಿಗಳು ಮತ್ತು 'ಮಾವೋವಾದಿ' ಸಹಚರರ ಅಬ್ಬರದ ಎದುರು ಎಡರಂಗ ಸರಕಾರದ ಸಂಯಮದ ನಿಲುವು ಕೂಡಾ ಪಾತ್ರ ವಹಿಸಿತು.


ಆದರೆ ಎಲ್ಲಕ್ಕೂ ಮುಖ್ಯವಾಗಿ ಈ 'ಮುತ್ತಿಗೆ'ಯ ವಿರುದ್ಧ ಸಿಂಗೂರ್ ಮತ್ತು ಸುತ್ತಮುತ್ತಲು ಮತ್ತು

ದನಿಯಲ್ಲಿ ಆಯಾಸ ಎದ್ದು ಕಾಣುತ್ತಿತ್ತು, 'ಇದೊಂದು ಚಾರಿತ್ರಿಕ ವಿಜಯ' ಎಂದು ಆಕೆ ಕ್ಷೀಣ ದನಿಯಲ್ಲಿ ಹೇಳಿದಾಗ ಯಾರದ್ದು ಎಂದು ನೆರೆದಿದ್ದವರು ಕೇಳಿಕೊಳ್ಳುವಂತಾಯಿತಂತೆ.

ವಾಸ್ತವವಾಗಿ, ಈ 'ಮುತ್ತಿಗೆ' ಜನಜೀವನವನ್ನು ಬಹಳವಾಗಿ ಬಾಧಿಸಲಾರಂಭಿಸಿದಾಗ ಜನಗಳ ಪ್ರತಿರೋಧವೂ ಕ್ರೋಢೀಕರಣಗೊಳ್ಳಲಾರಂಭಿಸಿತು. 'ಧರಣಾ ಮಂಚ್' ನ ಸುತ್ತಲಿನ ಪ್ರದೇಶಗಳಲ್ಲಿ ಪ್ರತಿದಿನ ಮೆರವಣಿಗೆಗಳು ನಡೆಯುತ್ತಿದ್ದು 'ಪ್ರತಿ ಮುತ್ತಿಗೆ'ಯ ಸ್ವರೂಪ ತಳೆಯಲಾರಂಬಿಸಿತ್ತು. ಸಪ್ಟೆಂಬರ್ 6 ರವೇಳೆಗೆ ಸುಮಾರು ಎರಡು ಲಕ್ಷ ಮಂದಿ ವಿವಿಧ ಮೆರವಣಿಗೆಗಳ ರೂಪದಲ್ಲಿ ಈ 'ಮುತ್ತಿಗೆ'ಯ ಸುತ್ತ ಹರಡಿಕೊಂಡಿತ್ತು ಎಂದು ವರದಿಯಾಗಿದೆ. ಇಲ್ಲಿ ಅಬ್ಬರವಿರಲಿಲ್ಲ, ಬೆದರಿಕೆಗಳಿರಲಿಲ್ಲ. ತರ್ಕಬದ್ಧವಾಗಿ ಯೋಚಿಸಿ ಎಂಬ ಮನವಿಯಿತ್ತು.



ಪಶ್ಚಿಮ ಬಂಗಾಳದ ಕೈಗಾರೀಕರಣಕ್ಕೆ ಸಿಂಗೂರಿನಲ್ಲಿ ಸಿಕ್ಕ ಬೃಹತ್ ಜನಬೆಂಬಲ



ಅಭಿವೃದ್ಧಿ ವಿರೋಧಿ ಪ್ರತಿಗಾಮಿ ರಾಜಕೀಯದ ಮಮತಾ ಧರಣಿ

ಮಮತಾರವರ ಅಬ್ಬರದ ಹೇಳಿಕೆಗಳೂ ಈಗ ಕೇಳಿಸುತ್ತಿಲ್ಲ.

ಇವೆಲ್ಲಾ ಹೇಗಾದವು?

ನಿಜ, ಈ 'ಮುತ್ತಿಗೆ' ಸಿಂಗೂರಿನ ಜನತೆಗೆ ಮಾತ್ರವಲ್ಲ, ಸುತ್ತಮುತ್ತಲಿನ ಎಲ್ಲಾ ಜನರಿಗೂ ಉಂಟು ಮಾಡಿದ್ದ ಅಪಾರ ತೊಂದರೆಗಳಿಂದ ರಾಜ್ಯದಾದ್ಯಂತ ಜನಗಳು ಅಣಿನೆರೆಯಲಾರಂಭಿಸಿದ್ದು ವಿಜಯದ ಗುಂಗಿನಲ್ಲಿದ್ದ ಮಮತಾ'ದೀದಿ' ಮತ್ತು ಆಕೆಯ ವಿವಿಧ ಬಣ್ಣಗಳ ಸಹಚರರನ್ನು ವಾಸ್ತವ ಲೋಕಕ್ಕೆ ಎಳೆ ತಂದಿತು. ಸಪ್ಟೆಂಬರ್ 7 ರಂದು 'ದೀದಿ' ರಾಜಭವನದಿಂದ 'ಧರಣಾ ಮಂಚ್'ಗೆ ಹಿಂದಿರುಗಿದಾಗ ಆಕೆಯ

ಕ್ರಮೇಣ ತೃಣಮೂಲಿಗಳನ್ನು ಬೆಂಬಲಿಸಿದ್ದ ಸಿಂಗೂರಿನ ರೈತರೂ 'ದಯವಿಟ್ಟು ಹೋಗಿ' ಎನ್ನಲಾರಂಭಿಸಿದ್ದರು.

'ಮುತ್ತಿಗೆ' ಏಕೆ?

ಭೂಮಿ ಕೊಡಲು 'ಮನಸ್ಸಿಲ್ಲದ' ರೈತರಿಂದ ಸ್ವಾಧೀನ ಪಡಿಸಿಕೊಂಡ ಸುಮಾರು 400 ಎಕ್ರೆ ಭೂಮಿಯನ್ನು ಅವರಿಗೆ ಹಿಂದಿರುಗಿಸಿ ಎಂಬುದು ಮಮತಾ ಬ್ಯಾನರ್ಜಿ ಮತ್ತು ಆಕೆಯ ಬೆಂಬಲಿಗೆ ಬೇಡಿಕೆಯ ಈಡೇರಿಕೆಗೆ ಈ 'ಮುತ್ತಿಗೆ' ಎಂಬುದು ಘೋಷಿತ ಉದ್ದೇಶ. ಇಲ್ಲಿ ಒಟ್ಟು 997.11 ಎಕ್ರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇದರಲ್ಲಿ 690.79 ಎಕ್ರೆ ಪ್ರದೇಶದ ಸುಮಾರು 11,000 ಜಮೀನು ಮಾಲಕರು ಪರಿಹಾರ ಸ್ವೀಕರಿಸಿದ್ದಾರೆ. ಸುಮಾರು 300ಎಕ್ರೆ ಭೂಮಿಯ ಸುಮಾರು 1100 ಮಂದಿ ಇನ್ನೂ ಪರಿಹಾರ ಸ್ವೀಕರಿಸಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಕೆಲವು ಸಂದರ್ಭಗಳಲ್ಲಿ ಮಾಲಕತ್ವ ದಾಖಲೆಗಳು ಸ್ಪಷ್ಟವಾಗಿಲ್ಲ. ಇರಲಿ, ಇವರೆಲ್ಲರಿಗೂ ಭೂಮಿ ಮಾರಲು ಮನಸ್ಸಿಲ್ಲ ಎಂದಿಟ್ಟುಕೊಂಡರೂ ಅವರ ಭೂಮಿಯನ್ನು ಅವರಿಗೆ ಬಿಟ್ಟು ಕೊಡುವುದೆಂದರೆ ಈ ಪ್ರಾಜೆಕ್ಟನ್ನು ಮುಚ್ಚಿ ಬಿಡುವುದೆಂದೇ ಅರ್ಥ. ಏಕೆಂದರೆ ಈ 300 ಎಕ್ರೆ ಒತ್ತೊತ್ತಾಗಿ ಒಂದೇ ಕಡೆ ಇಲ್ಲ, ಪ್ರಾಜೆಕ್ಟ್ ಪ್ರದೇಶದಾದ್ಯಂತ ಅಲ್ಲಲ್ಲಿ ಚದುರಿದಂತಿದೆ. ಆದ್ದರಿಂದ ಈ ಪ್ರಾಜೆಕ್ಟ್‌ನಿಂದ ಜನರಿಗೆ, ರಾಜ್ಯಕ್ಕೆ ಉಪಯೋಗವಾಗುತ್ತದೆ ಎಂದು ಒಪ್ಪುವುದಾದರೆ 'ಮನಸ್ಸಿಲ್ಲದವರ' ಭೂಮಿಯನ್ನು ಹಿಂದಿರುಗಿಸಬೇಕು ಎನ್ನುವ ಬೇಡಿಕೆ ಅವಾಸ್ತವ ಎಂಬುದು ಎಡರಂಗದ ನಿಲುವು.

ಬೇರೆಲ್ಲೂ ಇಲ್ಲ

ಭೂಮಿ ನೀಡಿದವರ ಜೀವನೋಪಾಯಕ್ಕೆ ದೇಶದ ಬೇರೆಲ್ಲೂ ಕಾಣದ ವಿವರವಾದ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿರುವಾಗ ಇಂತಹ ಬೇಡಿಕೆ ಇನ್ನಷ್ಟು ಅವಾಸ್ತವವಾಗುತ್ತದೆ ಎಂಬುದು ಸರಕಾರದ ನಿಲುವು. ಭೂಮಿ 'ಕಳಕೊಂಡವರ' ಕುಟುಂಬಗಳ 2793 ಯುವಜನ ಈಗಾಗಲೆ ಈ ಪ್ರಾಜೆಕ್ಟಿನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅಲ್ಲದೆ ಈ ಪ್ರದೇಶದ ಭೀಹೀನ ಕುಟುಂಬಗಳ 575 ಯುಜನರೂ ತರಬೇತಿ ಪಡೆಯುತ್ತಿದ್ದಾರೆ. ಸುಮಾರು 900 ಯುವಜನ ಇತರ ಪುನರ್ವಸತಿ ಯೋಜನೆಗಳಲ್ಲಿ ಈಗಾಗಲೆ ಉದ್ಯೋಗ ಪಡೆದಿದ್ದಾರೆ. ಮಹಿಳೆಯರು ಕ್ಯಾಂಟೀನುಗಳನ್ನು ನಡೆಸುವ ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ತರಬೇತಿ ಪಡೆಯುತ್ತಿದ್ದಾರೆ. ಕಡಿಮೆ ಶಿಕ್ಷಣ ಪಡೆದ, ಅಶಿಕ್ಷಿತ ಮತ್ತು ಬಡ ಭೂಹೀನ ಕುಟುಂಬಗಳ ಯುವಜನರಿಗೂ ಡ್ರೈವರುಗಳಾಗಿ, ಸೆಕ್ಯೂರಿಟಿ ಗಾರ್ಡ್‌ಗಳಾಗಿ ಕೆಲಸ ಕೊಡಲಾಗುತ್ತಿದೆ. ಸ್ವಂತ ಉದ್ಯೋಗ ಮಾಡಬಯಸುವವರಿಗೂ ಸಹಾಯ ಒದಗಿಸಲಾಗುತ್ತಿದೆ. ದೇಶದ ಬೇರೆಲ್ಲೂ ಈ ರೀತಿ ಕಾರ್ಖಾನೆಯಲ್ಲಿ ಉತ್ಪಾದನೆ ಆರಂಭವಾಗುವ ಮೊದಲೇ ಇಂತಹ ವ್ಯಾಪಕ ವ್ಯವಸ್ಥೆ ಏರ್ಪಡಿಸಿರುವ ಒಂದಾದರೂ ಉದಾಹರಣೆ ಯಿಲ್ಲವೆನ್ನುತ್ತಾರೆ ಪಶ್ಚಿಮ ಬಂಗಾಳದ ಕೈಗಾರಿಕಾ ಮಂತ್ರಿ ನಿರುಪಮ್ ಸೇನ್. ಈಗಾಗಲೆ ಈ ಪ್ರಾಜೆಕ್ಟ್‌ನಿಂದಾಗಿ ಈ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳು ದ್ವಿಗುಣಗೊಂಡಿವೆ.

ಎಡರಂಗದ ನಿಲುವು

ಇಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಯ ಪ್ರಮಾಣ ಈ ಪ್ರಾಜೆಕ್ಟಿಗೆ ಬೇಕಾದುದಕ್ಕಿಂತಲೂ ಹೆಚ್ಚಿದೆ, ಆ ಹೆಚ್ಚುವರಿಯನ್ನು ಹಿಂದಿರುಗಿಸಬೇಕು ಎಂಬುದು ಕೆಲವರ ವಾದ. ನಿಜ, ದೇಶದ ಇತರೆಡೆ ಪ್ರಾಜೆಕ್ಟುಗಳ ಹೆಸರಿನಲ್ಲಿ ಹೆಚ್ಚುವರಿ ಭೂಮಿ ಸ್ವಾಧೀನ ಪಡಿಸಿಕೊಂಡು ರಿಯಲ್ ಎಸ್ಟೇಟ್ ಧಂಧೆ ನಡೆಸುವ ಉದಾಹರಣೆಗಳಿವೆ. ಆದರೆ ಇಲ್ಲಿ ಹಾಗಾಗುತ್ತಿಲ್ಲ. ಕೇಂದ್ರ ಸರಕಾರ ರಚಿಸಿರುವ ಎಂಬ ವಿಶೇಷತಜ್ಞರ ಸಂಸ್ಥೆ ಇಂತಹ ಯೋಜನೆಗಳಿಗೆ ಬೇಕಾಗುವ ಭೂಮಿಯ ಪ್ರಮಾಣವನ್ನು ಲೆಕ್ಕಹಾಕಿದೆ. ಒಂದು ಲಕ್ಷ ಕಾರುಗಳನ್ನು ಉತ್ಪಾದಿಸುವ ಸ್ಥಾವರಕ್ಕೆ ಅದರ ಪ್ರಕಾರ 450 ಎಕ್ರೆ ಬೇಕು. ಪ್ರತಿ ಒಂದು ಲಕ್ಷ ಹೆಚ್ಚಿನ ಕಾರು ಉತ್ಪಾದನೆಗೆ ಇದರ 25ಶೇ. ರಷ್ಟು ಹೆಚ್ಚುವರಿ ಭೂಮಿ ಬೇಕು. ಟಾಟಾ ಪ್ರಾಜೆಕ್ಟ್ ಪ್ರತಿ ವರ್ಷ 3.5 ಲಕ್ಷ ಕಾರು ಉತ್ಪಾದಿಸುವ ಯೋಜನೆ ಹಾಕಿಕೊಂಡಿದೆ. ಈ ಲೆಕ್ಕಾಚಾರದ ಪ್ರಕಾರ 800 ಎಕ್ರೆಗೂ ಹೆಚ್ಚು ಭೂಮಿ ಬೇಕು. ಆದರೆ ಸಿಂಗೂರ್ ನಲ್ಲಿ ಟಾಟಾ ಕಾರು ಯೋಜನೆಗೆ ಒದಗಿಸಿದ್ದು 645 ಎಕ್ರೆ ಮಾತ್ರ. ಸುಮಾರು 250 ಎಕ್ರೆ ಭೂಮಿಯನ್ನು ಪೂರಕ ಉದ್ದಿಮೆಗಳಿಗಾಗಿ ಮೀಸಲಿಡಲಾಗಿದೆ. ಹರ್‍ಯಾಣಾದ ಗುರ್‌ಗಾಂವ್‌ನಲ್ಲಿರುವ ಮಾರುತಿ ಕಾರ್ಖಾನೆ 3.5 ಲಕ್ಷ ಕಾರುಗಳನ್ನು ಉತ್ಪಾದಿಸುತ್ತಿದ್ದು ಅದಕ್ಕೆ ನೀಡಿರುವ ಭೂಮಿ 650 ಎಕ್ರೆ ಹಾಗೂ ಪೂರಕ ಉದ್ದಿಮೆಗಳು ಇನ್ನೂ 600 ಎಕ್ರೆ ಪ್ರದೇಶದಲ್ಲಿವೆ. ಅಂದರೆ ಅಲ್ಲಿ 1250 ಎಕ್ರೆ ಭೂಮಿ

ಪುಟ 10ಕ್ಕೆ

ಇದೂ ಸಿಂಗೂರಿನಲ್ಲಿಯೇ!

ಹಚ್ಚ ಹಸುರಿನಭೂಮಿ, ಭತ್ತ ಬೆಳೆಯುವ, ಹಣ್ಣು- ತರಕಾರಿ ಬೆಳೆಯುವ ಫಲವತ್ತಾದ ಭೂಮಿ, ಇದ್ದಕಿದ್ದಂತೆ ಅದರ ಸುತ್ತಲೂ ಹನ್ನೊಂದು ಅಡಿ ಎತ್ತರದ ಗೋಡೆ ಏಳುತ್ತಿದೆ. ನಾಲ್ಕೂ ನಿಟ್ಟಿನಲ್ಲಿ ಮುಳ್ಳು ಬೇಲಿಗಳು, ಭದ್ರ ಕಾವಲಿನಲ್ಲಿ ಗುಪ್ತವಾಗಿ ಕೆಲಸ ನಡೆಯುತ್ತಿದೆ. ಊರಜನರು ಬಳಸುತ್ತಿದ್ದ ಕೆರೆ ಮಾಯವಾಗಿ ಒಂದು ಕೊಳವೆ ಬಾವಿ ಬಂದಿದೆ. ಊರವರೆಲ್ಲಾ ಇನ್ನು ಮುಂದೆ ಇದನ್ನೇ ಅಭ್ಯಾಸ ಮಾಡಿಕೊಳ್ಳಬೇಕೆಂಬ ತಾಕೀತು. ಇವೆಲ್ಲಾ ಎಲ್ಲಿ ಅಂತೀರ? ಮಮತಾ ?ದೀದಿ? ಯ ಕೃಪೆಯಿಂದ ರಾಷ್ಟ್ರೀಯ, ಅಂತರ್‍ರಾಷ್ಟ್ರೀಯ ಗಮನ ಸೆಳೆದಿರುವ ಅದೇ ಸಿಂಗೂರ್‌ನಲ್ಲಿ, ಆದರೆ ಸಿಂಗೂರ್ ನಲ್ಲಿ ಕೇವಲ ಕೃಷಿಭೂಮಿಯಿತ್ತು, ಇದೆ, ಮುಂದೆಯೂ ಕೃಷಿಭೂಮಿ ಮಾತ್ರವೇ ಇರುತ್ತದೆ ಎಂದು ಸಾರುತ್ತಿರುವ ಮಮತಾ ಬ್ಯಾನರ್ಜಿ ಅಥವ ಆಕೆಯ ಪಡೆಗಳು ಮಾತ್ರ ಅಲ್ಲಿ ನಾಪತ್ತೆ. ಏಕಿರಬಹುದು? ಇಲ್ಲೊಂದು ರೆಸಾರ್ಟ್ ನಿರ್ಮಾಣವಾಗುತ್ತಿದೆ ಎನ್ನುತ್ತಾರೆ ಊರವರು. ಅದು ಯಾರದು ಗೊತ್ತೇ? ಶ್ರೀ ಸೌಮೇಂದ್ರನಾಥ್ ಮಿತ್ರ ಅಲಿಯಾಸ್ ಸೋಮೆನ್ ಮಿತ್ರ ಎಂಬ ಕಾಂಗ್ರೆಸ್ ಮುಖಂಡರದ್ದು. ಈತ ಇತ್ತೀಚಿನ ಸಿಂಗೂರ್ ಧರಣೆಯ ಫೋಟೋದಲ್ಲಿ ಅಕ್ಷರಶಃ 'ದೀದಿ'ಯ ಕಾಲಬುಡದಲ್ಲಿ ಕಾಣಿಸಿಕೊಂಡಿದ್ದಾರಂತೆ. ಇದನ್ನು ಇತ್ತೀಚೆಗೆ ಅವರಿಗೆ ಕೊಡಿಸಿದ ವ್ಯಕ್ತಿ ಸೈಲ ಘೋಷ್. ಈತ ಸಿಂಗೂರಿನ ತೃಣಮೂಲ ಕಾಂಗ್ರೆಸ್ ಮುಖಂಡ, ಅಲ್ಲಿಯ ಪಂಚಾಯತ್ ಸಮಿತಿಯ ಸದಸ್ಯ ಕೂಡಾ!

ಗೋಕರ್ಣ :

ಸಾಮ್ರಾಜ್ಯ ವಿಸ್ತರಣೆಯ ಉಮೇದಿನಲ್ಲಿ ರಾಮಚಂದ್ರ ಪುರ ಮಠ





ಮೂಲತಃ ಗೋಕರ್ಣದ ದೇವಸ್ಥಾನ ಸಾರ್ವಜನಿಕರೆಲ್ಲರಿಗೆ ತೆರೆದುಕೊಂಡ ಮತ್ತು ಎಲ್ಲ ವರ್ಗ-ವರ್ಣ-ಸಮಾಜದವರೂ ದೇವರನ್ನು ಮುಟ್ಟಿ ಧಾರ್ಮಿಕ ಕಾರ್ಯ ಮಾಡಬಹುದಾದ ಕ್ಷೇತ್ರ. ಇಲ್ಲಿ ಶಂಕರಾಚಾರ್ಯ ಬರುವುದಕ್ಕಿಂತ ಮುನ್ನವೇ ಸಹಸ್ರಾರು ವರ್ಷಗಳಿಂದಲೂ ಆದಿವಾಸಿಗಳಾದ ಬೇಡರು, ಮೀನುಗಾರರರು ಇತ್ಯಾದಿ ಸಮುದಾಯದಿಂದ ಪೂಜಿಸಲ್ಪಡುವ ದೇವಸ್ಥಾನವಿತ್ತು. ನಂತರ ಈ ಶಂಕರಾಚಾರ್ಯರಿಂದ ಇಲ್ಲಿಯೇ ಪಕ್ಕದ 'ಅಶೋಕೆ'ಯಲ್ಲಿ ರಾಘೂತ್ತಮ ಮಠ ಸ್ಥಾಪನೆಯಾಯಿತು. ಶಂಕರಾಚಾರ್ಯರು ತಮ್ಮ ಶಿಷ್ಯನಿಗೆ ಅಂದು ಹೇಳಿಕೊಟ್ಟ ಶ್ಲೋಕವನ್ನು ಈಗಿನವರೆಲ್ಲ ತಿರುಚಿ, ಗೋಕರ್ಣ ಮಹಾಬಲ ದೇವರಿಗೂ-ರಾಮಚಂದ್ರಾಪುರ ಮಠಕ್ಕೂ ಸಂಬಂಧ ಕಲ್ಪಿಸಿದ್ದಾರೆ. ಆದರೆ ಮೂಲ ಶ್ಲೋಕದಲ್ಲಿ ಅಪ್ರತಿಷ್ಠ ಯತಿಶ್ರೇಷ್ಠ ಗೋಕರ್ಣ ಮುನಿಸೇವಿತೆ

'ಶತಶೃಂಗಕ್ಕೆ ಲಿಂಗಸ್ಯ ನಿತ್ಯಂ ವಿಧಿವದರ್ಚನಂ॥ ಇಲ್ಲಿ 'ಶತಶೃಂಗ' ಶಬ್ದದ ಸ್ಥಳದಲ್ಲಿ 'ಮಹಾಬಲಸ್ಯ' ಎಂಬ ಶಬ್ದ ಸೇರಿಸಿಕೊಂಡು ರಾಮಚಂದ್ರಾಪುರ ಮಠದವರು ಹಕ್ಕು ಸಾಧಿಸಲು ಇತಿಹಾಸ ಎಂದು ತೋರಿಸುತ್ತಾರೆ. ಹಿಂದೆ ರಘೋತ್ತಮ ಮಠ ಎಂದಿರುವುದನ್ನು ರಾಮಚಂದ್ರಾಪುರ ಮಠ ಎಂದೂ ಕಾಲಾನುಕ್ರಮದಲ್ಲಿ ಬದಲಿಸಿಕೊಂಡಿದ್ದಾರೆ. ಆದರೆ ರಾಮ, ಸೀತೆ, ಲಕ್ಷ್ಮಣರ ಮೂರ್ತಿಗಳನ್ನು ಪೂಜಿಸಿಕೊಂಡಿರ ಬೇಕಾದವರು. ಆ ವಿಧಾನಕ್ಕೆ ವಿರುದ್ಧವಾದ ಶಿವನನ್ನು ಹೇಗೆ ಪೂಜಿಸಲು ಸಾಧ್ಯ ಎಂಬುದು ಇಲ್ಲಿ ಗೋಕರ್ಣ ರಕ್ಷಣಾ ಸಮಿತಿಯ ಮುಖ್ಯಸ್ಥರ ಮತ್ತು ಮಠಕ್ಕೆ ವಹಿಸುವುದನ್ನು ವಿರೋಧಿಸುವವರ ಅಭಿಪ್ರಾಯ ಎಂಬುದು ತಿಳಿದುಬಂತು. ಮಠದವರು ಪೂರ್ವ ತಯಾರಿಯೊಂದಿಗೆ ತಮ್ಮದೇ ಇತಿಹಾಸ ತಾವೇ ಬರೆದು ಮೂಲ ಅಂಶಗಳನ್ನೆಲ್ಲ ತಿರುಚಿದ್ದಾರೆಂಬುದಕ್ಕೆ ಇಲ್ಲಿಯ ಚಂದಾವರದ ಕದಂಬರ ಶಾಸನ, ಗೋಕರ್ಣದ ತಾಮ್ರಪಟ, ಧಾರೇಶ್ವರದ ಕಾಮದೇವರಸನ ಶಿಲಾಶಾಸನ, ಮುಖಮಂಟಪದ ಶಿಲಾಲೇಖ, ಹಾಗೂ ವಿವಿಧ ರಾಜರು, ಮಂಡಳಿಕರು, ಪಾಳೇಗಾರರು, ಪ್ರಸಿದ್ಧ ಮನೆತನಗಳು ಸೇರಿ ದೇವಸ್ಥಾನ ನಿರ್ಮಿಸಿದ್ದುದು ವಿನಃ ರಾಮಚಂದ್ರಾಪುರ ಮಠದ ಆಳ್ವಿಕೆ ಎಲ್ಲೂ ಇಲ್ಲ ಎಂಬುದರಿಂದ ಅರಿಯಬಹುದಾಗಿದೆ. ಈಗ ನೋಡಿದರೆ ಆಗಸ್ಟ್ 15 ರ ನಂತರ 'ರಾಮಚಂದ್ರಾಪುರ ಮಠ ಆಡಳಿತಕ್ಕೆ ಒಳಪಟ್ಟಿದೆ' ಎಂದು ಬೋರ್ಡ್ ತೂಗುತ್ತಿರುವುದು ತಮಗೆ ಆಂತಕ ಮೂಡಿಸಿದೆ ಎನ್ನುತ್ತಾರೆ ಸ್ಥಳೀಯರು. ಹಿಂದೂಗಳನ್ನು, ಬ್ರಾಹ್ಮಣರನ್ನು ರಕ್ಷಿಸುತ್ತಾರೆಂದು ಬಿಜೆಪಿಯಲ್ಲಿದ್ದೆವು. ಆದ್ರೆ ಅವರೇ ಸಾರ್ವಜನಿಕ ಆಸ್ತಿ ನುಂಗಲು ದೇವಸ್ಥಾನವನ್ನು ಮಠಕ್ಕೆ ನೀಡುತ್ತಿದ್ದು ಒಡೆದು ಆಳುವ ನೀತಿ ಎಂದು ಹವ್ಯಕ ಮುಖಂಡರೋರ್ವರ ಅಭಿಪ್ರಾಯ. ದೇವಸ್ಥಾನ ಮತ್ತು ಪರಿವಾರ ದೇವರುಗಳಿರುವ 9 ಕಿ.ಮೀ ಸುತ್ತಳತೆಯ, ಮಠಕ್ಕೆ ಹೋದರೆ ನಾವು ಪುನಃ ಪರಾಧೀನರಾದಂತೆಯೇ ಎನ್ನುತ್ತಾರೆ ಸೂರಿಯವರು. ನಾವು ದೇವಸ್ಥಾನದ ಆದಾಯದಿಂದಲೇ ಬದುಕುವವರಲ್ಲ. ನಮ್ಮ ಯುವಜನರನೇಕರು ಐಟಿ, ಬಿಟಿ ಉದ್ಯೋಗ ಎಂದು ಪರವೂರು ಸೇರಿದ್ದಾರೆ.



ವೈಯಕ್ತಿಕ ಉದ್ದೇಶಕ್ಕಾಗಿ ಮಾತ್ರ ವಿರೋಧಿಸುತ್ತಿಲ್ಲ ಎಂದು ಹಲವರು ಸ್ಪಷ್ಟಪಡಿಸಿದರು.

ದೇವಸ್ಥಾನವನ್ನು ಮಠಕ್ಕೆ ವಹಿಸಿದ್ದನ್ನು ಬಲವಾಗಿ ಸಮರ್ಥಿಸುವವರು ಉಪಾದಿ ಮಂಡದ ಗಣೇಶ್‌ಭಟ್ ಹೀರೇಗಾಗೆ ಮತ್ತು ಬಾಲಚಂದ್ರ ಜಂಬೆ ಇವರಿಬ್ಬರೂ ಅಧ್ಯಕ್ಷ-ಕಾರ್ಯದರ್ಶಿಗಳಾಗಿದ್ದಾರೆ. ಇದೇ ಉಪಾದಿ ಮಂಡಳದವರು ಮಠದೊಂದಿಗೆ ಶಾಮೀಲಾಗಿದ್ದಾರೆ ಎಂಬುದು ಅವರು ಮಾನ್ಯ ರಾಜ್ಯಪಾಲರಿಗೆ ಕೊಟ್ಟ ಮನವಿಯಿಂದ ತಿಳಿದುಬರುತ್ತದೆ. ಅವರೇ ಹೇಳುವಂತೆ "ಗೋಕರ್ಣದ ಅಭಿವೃದ್ಧಿಯಾಗಿಲ್ಲ. ಮಠದವರು ನಮ್ಮನ್ನು ಉದ್ಧಾರ ಮಾಡುತ್ತಾರೆ. ಇಲ್ಲಿ ನೈರ್ಮಲ್ಯ, ರಸ್ತೆ, ಕುಡಿಯುವ ನೀರು, ಭಕ್ತಾದಿಗಳಿಗೆ ಉಳಿಯಲು ವ್ಯವಸ್ಥೆ ಎಲ್ಲ ಮಾಡುತ್ತಾರೆ. ಮಠಕ್ಕೆ ವಹಿಸಲು ನಾವೇ ಕೇಳಿದ್ದೇವೆ. ಆದರೆ ಮಠದ ಸ್ವಾಮಿಗಳು ಎಂದೂ ತನಗೆ ವಹಿಸಲು ಸರ್ಕಾರವನ್ನು ಕೇಳಿಯೇ ಇಲ್ಲ. ಮಠ ವಿರೋಧಿಸುವವರು ವ್ಯಸನಿಗಳು, ಅಭಿವೃದ್ಧಿ ವಿರೋಧಿ ಪುಂಡರು. ಇತ್ಯಾದಿಯಾಗಿ ಹೇಳುತ್ತಾರೆ. ಕಾರ್ಯದರ್ಶಿಗಳಂತೂ ಒಂದು ಹೆಜ್ಜೆ ಮುಂದೆ ಹೋಗಿ ರಾಜಕಾರಣದಲ್ಲಿ ಧರ್ಮ ಬೇಕು, ಧರ್ಮದಲ್ಲಿ ರಾಜಕಾರಣ ಬೇಡ" ಎಂದು ಹೇಳಿ ನಡೆದೇಬಿಟ್ಟರು.

ಒಟ್ಟಾರೆ ಇದರ ಹಿಂದೆ ಏನಿದೆ ಎಂದು ನೋಡಲಾಗಿ, ಮಠದ ಹೊಗಳು ಭಟ್ಟರ ಸಂಘಪರಿವಾರಕ್ಕೆ ಆಸ್ತಿ ಮಾಡಿಕೊಡುವ ಉದ್ದೇಶವೇ ಇದ್ದುದು ಸತ್ಯ. ಏಕೆಂದರೆ ಅಭಿವೃದ್ಧಿ ನೆಪ ಮಾತ್ರ. ಗೋಕರ್ಣ ಕ್ಷೇತ್ರಕ್ಕೆ ಜಿಲ್ಲಾ ನ್ಯಾಯಾಲಯದಿಂದಲೇ ಟ್ರಸ್ಟಿಗಳ ನೇಮಕವಾಗುತ್ತಿತ್ತು. ಸ್ಥಳೀಯ ಗ್ರಾಮ ಪಂಚಾಯ್ತಿ ಮತ್ತು ಜಿಲ್ಲಾಡಳಿತ ಜಾತ್ರೆ ಇತ್ಯಾದಿ ಸಂದರ್ಭದ ನಿರ್ವಹಣೆ ನಡೆಸುತ್ತಿತ್ತು. ಕುಮಟಾ ಅಸಿಸ್ಟೆಂಟ್ ಕಮಿಶನರ್‌ರವರು ಆಡಳಿತಾಧಿಕಾರಿಗಳಾಗಿದ್ದರು. ಒಟ್ಟಾರೆ ಸರ್ಕಾರದ ಹಿಡಿತದಲ್ಲೇ ಇದ್ದುದರಿಂದ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರವೇ ಮಾಡಬೇಕು. ಇದೆಲ್ಲಕ್ಕಿಂತ ಹೆಚ್ಚಿನದಾಗಿ ಸಾರ್ವಜನಿಕ ಆಸ್ತಿ, ದೇವಸ್ಥಾನವನ್ನು ಖಾಸಗಿಯವರಿಗೆ ನೀಡಿ ಬಿಜೆಪಿಯ ಓಟ್‌ಬ್ಯಾಂಕ್ ಸೃಷ್ಟಿಸಿಕೊಳ್ಳುವುದೇ ಆಗಿದೆ.

ಈ ಎಲ್ಲ ವಿಷಯಗಳನ್ನು ಬಿಟ್ಟು ನೋಡುವುದಾದರೆ, ದೇವಸ್ಥಾನಕ್ಕೂ- ಮಠಕ್ಕೂ ಧಾರ್ಮಿಕ ಸಿದ್ಧಾಂತದ ಭಿನ್ನಾಭಿಪ್ರಾಯ ನೂರಾರು ವರ್ಷಗಳಿಂದಲೂ ಇದೆ. ಮಠದ ಅಧಿಕಾರ ವ್ಯಾಪ್ತಿಗೆ ಒಳಪಡುವುದು ಸರ್ವ ವಿಧದಿಂದಲೂ ಅಸಾಧ್ಯವಾದ್ದರಿಂದ ಸರ್ಕಾರ ಕೂಡ ಮೂಲ ದಾಖಲೆಗಳನ್ನು, ನಿಯಮಾವಳಿಗಳನ್ನು ತಿರುಚುತ್ತಿದೆ.

1950 ರ ಬಾಂಬೆ ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ಪ್ರಕಾರ ನೊಂದಣಿಗೊಂಡ ಕರ್ನಾಟಕದ ಎಲ್ಲ 34245 ದೇವಸ್ಥಾನಗಳೂ 1997ರ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಅಧಿನಿಯಮದಂತೆ ಅಧಿಸೂಚಿತ ಪಟ್ಟಿಯಲ್ಲಿವೆ. ರಾಮಚಂದ್ರಾಪುರ ಮಠವು ಮೊದಲು ಮೌಖಿಕವಾಗಿ ನಂತರ ದಿನಾಂಕ 12.4.2008 ರಂದು ಪತ್ರದ ಮೂಲಕ ಗೋಕರ್ಣ ಹಸ್ತಾಂತಕ್ಕೆ ಕೇಳಿತ್ತು. ಆದರೆ ಉತ್ತರಕನ್ನಡ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖಾ ಕಾರ್ಯದರ್ಶಿಗಳು, ಕಾನೂನು ಇಲಾಖೆಯ ಅಭಿಪ್ರಾಯ ಅಂತಿಮವಾಗಿ ಮಾನ್ಯ ರಾಜ್ಯಪಾಲರೂ ಕೂಡ ಸೂಚಿಸಿದಂತೆ ಇದನ್ನು ಅಧಿಸೂಚಿತ ಪಟ್ಟಿಯಿಂದ ಹೊರತುಪಡಿಸಬಾರದೆಂದೇ ಆದೇಶಿಸಿದ್ದಾರೆ. ಆದಾಗ್ಯೂ ಒಂದು ವ್ಯವಸ್ಥಿತ ಸಂಚಿನ ಭಾಗವಾಗಿ, ಹಿಂದಿನೆಲ್ಲ ಆದೇಶಗಳನ್ನು ಗಾಳಿಗೆ ತೂರಿದ ಪ್ರಸ್ತುತ ಸರ್ಕಾರವೂ ಸಾರ್ವಜನಿಕರ ಹಿತಾಸಕ್ತಿಯನ್ನು ಬಲಿಕೊಟ್ಟು ಮಠೀಕರಣಕ್ಕೆ ತನ್ಮೂಲಕ ಖಾಸಗೀಕರಣಕ್ಕೆ ಮುಂದಾಗಿ 12.8.2008ರಂದು ಗೋಕರ್ಣವನ್ನು ಅಧಿಸೂಚಿತ ಪಟ್ಟಿಯಿಂದ ಕೈಬಿಟ್ಟು ರಾಮಚಂದ್ರಾಪುರ ಮಠಕ್ಕೆ ವಹಿಸಿದ್ದು ಒಂದು ಸಂಚು. ಸರ್ಕಾರ ತನ್ನ ಘನ ಜವಾಬ್ದಾರಿಗಳಿಂದ, ಅಭಿವೃದ್ಧಿಯ ಮೂಲ ಕರ್ತವ್ಯದಿಂದ ನುಣುಚಿಕೊಂಡು ಭಕ್ತಾದಿಗಳಿಗೆ ಸಾರ್ವಜನಿಕರಿಗೆ ದ್ರೋಹ ಎಸಗಿತು. ಈ ಆದೇಶ ಹೊರಡುತ್ತಿರುವಂತೆಯೇ ಈ ಉದ್ದೇಶಕ್ಕಾಗಿಯೇ ಪವರ್ ಆಫ್ ಅಟಾರ್ನಿ ಮಾಡಿಸಿಟ್ಟುಕೊಳ್ಳಲು ಮಠಕ್ಕೆ ತಿಳಿಸಿ ತನ್ನ ಗೌಪ್ಯತೆಯನ್ನು ಮಠಕ್ಕೆ ಮಾತ್ರ ತಿಳಿಸಿದ್ದು ಸತ್ಯ ಶೋಧನೆಯಿಂದ ಕಂಡುಬರುತ್ತದೆ. ಹಾಗಾಗಿ ಸ್ಥಳೀಯ ಒಂದು ಗುಂಪಿನ ಸ್ಥಾಪಿತ ಹಿತಾಸಕ್ತಿಗಳು ಮತ್ತು ಸರ್ಕಾರದ ಉನ್ನತ ಮಟ್ಟದವರು ಧಾರ್ಮಿಕ-ರಾಜಕೀಯ ಒತ್ತಡ ತಂದೇ ಈ ಕಾರ್ಯ ಎಸಗಿದ್ದಾರೆಂದು ತಿಳಿಯುತ್ತದೆ.

ಮಾತ್ರವಲ್ಲ, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ನಂ.11734, ರಿಟ್ ಪಿಟಿಷನ್ ನಂ.11656, ದೇವಸ್ಥಾನದ ಆಸ್ತಿ ಹಸ್ತಾಂತರದ ಕುರಿತು ಸದ್ಯ ದಾಖಲಾಗಿರುವ ರಿಟ್ ಪಿ. ನಂ.30609 ಪ್ರಕರಣ ನಡೆಯುತ್ತಿದೆ. ದೇವಸ್ಥಾನದ ಆಸ್ತಿ ಮತ್ತು ಆದಾಯದ ಮೇಲೆ ಕಣ್ಣಿಟ್ಟೇ ತುದಿಗಾಲ ಮೇಲೆ ನಿಂತು ದೇವಸ್ಥಾನ ಹಸ್ತಾಂತರಿಸಿಕೊಂಡ ರಾಮಚಂದ್ರಾಪುರ ಮಠದ ಸ್ವಾಮಿಗಳು ಜನರ ಮುಗ್ಧ ಭಾವನೆಗಳ ಮೇಲೆ ಸವಾರಿ ಮಾಡಲು ದಿನಾಂಕ 15.9.2008 ರಂದು 'ಮಹಾಸಂಕಲ್ಪ' ಗೋಕರ್ಣದ ಪುನರುತ್ಥಾನ ಇತ್ಯಾದಿ ಹೆಸರಿನಲ್ಲಿ ಗೋಕರ್ಣದ ಮೇಲೆ ಖಾಯಂ ದಾಳಿ ಮಾಡಲು (ಪುರ ಪ್ರವೇಶ) ನಾಂದಿ ಹಾಡುತ್ತಿದ್ದಾರೆ! ಮಾತ್ರವಲ್ಲ ಹೊರಗಿನಿಂದ ಜನರನ್ನು ಕರೆತರಿಸಿ ಸ್ಥಳೀಯರಿಗೆ ಆತಂಕದ ಭಾವನೆ ಮೂಡಿಸುತ್ತಿದ್ದಾರೆ.

ಹಾಗಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಉತ್ತರಕನ್ನಡ ಜಿಲ್ಲಾ ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿತು ಮತ್ತು ಸರ್ಕಾರ ಈ ತಕ್ಷಣ ಜನರ ಅಭಿಪ್ರಾಯಕ್ಕೆ ಬೆಲೆಕೊಟ್ಟು ತನ್ನ ಆದೇಶ ಹಿಂಪಡೆಯಬೇಕು, ಸಾರ್ವಜನಿಕ ಟ್ರಸ್ಟ್‌ನಲ್ಲಿ ಎಲ್ಲ ಜಾತಿ, ಜನಾಂಗ, ವರ್ಣ, ವರ್ಗ ಬೇಧವಿಲ್ಲದೆ ರಚಿಸಬೇಕು, ಗೋಕರ್ಣದ ಪ್ರವಾಸೋದ್ಯಮ ಇತ್ಯಾದಿ ಅಭಿವೃದ್ಧಿ ಕಾರ್ಯಕ್ಕೆ ಗ್ರಾಮ ಪಂಚಾಯ್ತಿಗೆ ವಿಶೇಷ ಪ್ಯಾಕೇಜ್ ನೀಡಬೇಕು, ಸರ್ಕಾರವೇ ಮುಂದಾಗಿ ನಿಂತು ನಿರ್ವಹಿಸಬೇಕು, ಖಾಸಗಿ ಸುಪರ್ದಿಗೆ ಬೇಡ ಎಂದು ಒತ್ತಾಯಿಸಿದೆ.

ನಿಯೋಗದಲ್ಲಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಶಾಂತಾರಾಂ ನಾಯಕ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ತಿಲಕಗೌಡ, ಸುಭಾಸ್ ಕೊಪ್ಪೀಕರ್, ಯಮುನಾ ಗಾಂವ್ಕಾರ್, ಸಥಳೀಯ ಘಟಕ ಕಾರ್ಯದರ್ಶಿ ಶಾಲಿನಿ ಕಲ್ಮನೆ ಇದ್ದರು.

ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ಮತ್ತು ಅದರ ಪರಿವಾರ ದೇವರುಗಳನ್ನು, ಅದಕ್ಕೆ ಸಂಬಂಧಿಸಿದ ಆಸ್ತಿ-ಆದಾಯಗಳನ್ನೆಲ್ಲ ರಾಮಚಂದ್ರಾಪುರ ಮಠಕ್ಕೆ ವಹಿಸಿದ ಹಿನ್ನೆಲೆಯ ಸಿಪಿಎಂ ಪಕ್ಷದ ನಿಯೋಗವು ಗೋಕರ್ಣಕ್ಕೆ ತೆರಳಿ ಜನರೊಂದಿಗೆ ಸಂವಾದಿಸಿ ಸತ್ಯಶೋಧನೆಗೆ ಮುಂದಾಯಿತು. ಆ ಸಂದರ್ಭದಲ್ಲಿ ಕಂಡುಬಂದ ಅಂಶಗಳು ನಿಜಕ್ಕೂ ಆಶ್ಚರ್ಯ ತರುವಂತವುಗಳೇ ಆಗಿದ್ದವು.

■ ಯಮುನಾ ಗಾಂವ್ಕಾರ್

ಕುಂಟಿಕಾನ ಮಠ ಸ್ವಾಹಂ

ಹೊಸನಗರ ರಾಮಚಂದ್ರಪುರ ಮಠದ, ದೇವಸ್ಥಾನ, ಮಠ ಕಬಳಿಸುವ ದಾಹದ ಬಗೆಗೆ ಯಾರಿಗಾದರೂ ಅನುಮಾನ ಇದ್ದರೆ ಆ ಅನುಮಾನವನ್ನು ಅವರು ಬಿಡುವುದು ಒಳ್ಳೆಯದು. ಅಗತ್ಯವಿದ್ದರೆ ಈ ಪ್ರಕರಣದ ಪರಿಶೀಲನೆ ಮಾಡಬಹುದು ಅವರು.

ಈಗ ಕೇರಳದಲ್ಲಿರುವ ಕಾಸರಗೋಡು ಜಿಲ್ಲೆಯಲ್ಲಿ ಒಂದು ಮಠ. ಕುಂಟಿಕಾನ ಮಠ ಅಂತ ಅದರ ಹೆಸರು. ದೇವಸ್ಥಾನ, 7 ಎಕರೆ ಕೃಷಿ ಭೂಮಿ ಹೊಂದಿರುವ ಕುಂಟಿಕಾನ ಮಠಕ್ಕೆ ರಾಮಚಂದ್ರಪುರ ಮಠದ ರಾಘವೇಂದ್ರ ಸ್ವಾಮಿ ಆಮರಿಕೊಂಡಿದ್ದಾರೆ.

ಕುಂಟಿಕಾನ ಮಠವು ರಾಮಚಂದ್ರಪುರದ ಶಾಖಾಮಠ ಎಂಬ ಅಮೋಘ ಸಂಶೋಧನೆ ನಡೆಸಿದ ರಾಘವೇಂದ್ರ ಶಿಷ್ಯಂದಿರು ಸೆಪ್ಟೆಂಬರ್5 ರಂದು ಮಠದಮೇಲೆ ದಾಳಿ ಮಾಡೇ ಬಿಟ್ಟರು. ಸುಮಾರು 100 ಜನರಷ್ಟಿದ್ದ ಪುಂಡ ರೌಡಿಗಳ ತಂಡ ನುಗ್ಗಿ ದೇವಸ್ಥಾನ ಮಠದ ಬೀಗ ಒಡೆದು ಆಕ್ರಮಿಸಿಕೊಂಡಿದೆ. ನಮ್ಮನ್ನು ಒಳಗೆ ಬಿಡುತ್ತಿಲ್ಲ ಎಂದು ಮಠದ ಆಚೆ ನಿಂತು ರೋಧಿಸುತ್ತಿರುವ ಗೋವಿಂದಭಟ್ಟರು, ಬಾಲಕೃಷ್ಣ ಭಟ್ಟರ ಗೋಳಾಡುತ್ತಿದ್ದಾರೆ. ದಾಖಲೆಗಳಲ್ಲಿ ಮಠ ತಮ್ಮ ಕುಟುಂಬ ವರ್ಗದವರು ಟ್ರಸ್ಟಿಗಳಾಗಿದ್ದು ಟ್ರಸ್ಟಿಗೆ ಸೇರಿತ್ತು ಅಂತ ಅವರು ಹೇಳುತ್ತಿದ್ದಾರೆ. 1983 ರಲ್ಲಿ ಮಠದ ಅಭಿವೃದ್ಧಿಗೇ ಅಂತ ಸಮಿತಿ ರಚಿಸಿ ಸಲಹೆ ತೆಗೆದುಕೊಳ್ಳಲು ಯತ್ನಿಸಿದ್ದೇ ತಪ್ಪಾಗಿ ಮಠದ ಮೇಲೆ ಎರಗಿ ಬಿದ್ದಿದ್ದಾರೆ.

ಭಜರಂಗದಳ ಮತ್ತು ಭಯೋತ್ಪಾದನೆ



ಇದು ಭಯೋತ್ಪಾದನೆ ಅಲ್ಲದೆ ಬೇರೇನು?

ಭಜರಂಗದಳ, ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣಾ ವೇದಿಕೆ ...... ಈ ಸಂಘಟನೆಗಳ ಮಾತು, ಕೆಲಸದ ವಿಧಾನ, ಕೃತ್ಯಗಳಲ್ಲಿ ಹೆಚ್ಚು ಸಾಮ್ಯತೆ ಹೊಂದಿರುವ ಸಂಘಟನೆಗಳು.

ಇಂತಹ ಹತ್ತಾರು ಸಂಘಟನೆಗಳ ಬೆಳವಣಿಗೆಗೆ ಪೋಷಕ ದ್ರವ್ಯವನ್ನು ಒದಗಿಸಿ ಅವುಗಳಿಗೆ ಆಧಾರವಾಗಿರುವುದು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಆರೆಸ್ಸೆಸ್ ಎಂಬ ಸ್ವಯಂಘೋಷಿತ ರಾಷ್ಟ್ರಭಕ್ತರ ಸಂಘಟನೆ.

ಸಂಘ ಪರಿವಾರದ ಅಂಗವಾದರೂ ಭಜರಂಗದಳ,ವಿಎಚ್‌ಪಿಗಳು ಹಲವಾರು ಬಾರಿ ಆರೆಸ್ಸೆಸ್‌ಗಿಂತ ತಾವು ಭಿನ್ನ ಎಂಬಂತೆ ತೋರಿಸಿಕೊಳ್ಳುತ್ತವೆ ಅಥವಾ ಹಾಗೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತವೆ.

ಯುವಕರು, ಮಕ್ಕಳು, ಮಹಿಳೆಯರು ಯಾರನ್ನೂ ಬಿಡದ ಶಸಸ್ತ್ರ ತರಬೇತಿ







ಭಜರಂಗದಳ, ವಿಎಚ್‌ಪಿ, ಅನ್ಯ ಧರ್ಮಿಯರ ಬಗೆಗೆ, ಮುಸ್ಲಿಂ, ಕ್ರಿಶ್ಚಿಯನ್ನರ ವಿಷಯದಲ್ಲಿ ಅತ್ಯಂತ ಹಸಿ ಹಸಿ ದ್ವೇಷವನ್ನು ಕಾರುವ ಉಗ್ರ ಭಾಷೆಯಲ್ಲಿಯೇ ಮಾತನಾಡುತ್ತವೆ. ಕಾನೂನು ಕೈಗೆ ತೆಗೆದುಕೊಳ್ಳುವ ಕೊಲ್ಲುವ, ಸುಡುವ ಮಾತುಗಳನ್ನು ನಿರ್ಲಜ್ಜವಾಗಿ ನಿರ್ಭಯವಾಗಿಯೇ ಆಡುತ್ತವೆ.

ಇವುಗಳಿಗಿಂತ ತಾನು ತುಂಬಾ ಭಿನ್ನ ಎಂಬಂತೆ, ತಾನು ಭಾರಿ ಸಂಭಾವಿತ ಸಂಘಟನೆ, ಸುಸಂಸತ ಎಂಬಂತೆ ಆರೆಸ್ಸೆಸ್ ತೋರಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಇವೆಲ್ಲಾ ಒಂದು ರೀತಿಯಲ್ಲಿ ಸಂಘ ಪರಿವಾರದ ಸಂಘಟನೆಗಳ ನಡುವೆ ಶ್ರಮ ವಿಭಜನೆ ಅಷ್ಟೆ. ಭಾರತದಲ್ಲಿ ಇಂದಿಗೂ ಹೆಚ್ಚಿನ ಪ್ರಮಾಣದಲ್ಲಿರುವ ಜಾತ್ಯಾತೀತ, ಧಾರ್ಮಿಕ ಸಹಿಷ್ಣುತೆಯ ಉದಾರವಾದಿ ಮನಸ್ಸಿನ ಜನರ ಮನವೊಲಿಸಲು ಕೆಲವು ಸಂಘಟನೆಗಳು ಯತ್ನಿಸಿದರೆ, ಸುಳ್ಳು, ಹಸಿ ಸುಳ್ಳು, ಅರೆಸತ್ಯ ಇತ್ಯಾದಿಗಳನ್ನು ಬಳಸಿ ಬಿಸಿರಕ್ತದ ಯುವಜನರ ತಲೆ ಕೆಡಿಸಿ ರಕ್ತ ಹರಿಸುವುದಕ್ಕೆ ಶ್ರಮಿಸುವುದು ಇನ್ನು ಕೆಲವು ಸಂಘಟನೆಗಳ ಕೆಲಸ. ಇಂತಹ ಕೆಲಸಗಳನ್ನು ಅವು ಬಹಳ ಯೋಜಿತವಾಗಿಯೇ ಮಾಡುತ್ತಿವೆ.

ಕೋಮುಗಲಭೆ ಹಬ್ಬಿಸುವುದು, ಅಮಾಯಕರನ್ನು ಸುಡುವುದು, ಇರಿಯುವುದು, ಅನ್ಯ ಧರ್ಮಗಳ ಧಾರ್ಮಿಕ ಕೇಂದ್ರಗಳ ಮೇಲೆ ದಾಳಿ ಮಾಡುವುದು ಇವೆಲ್ಲಾ ಇವರ ಈಗಾಗಲೇ ಜಗಜ್ಜಾಹೀರಾಗಿರುವ ಪ್ರತಾಪಗಳು. ಈಗೀಗ ಇದನ್ನು ಮೀರಿದ-ಇನ್ನಷ್ಟು ಅಪಾಯಕಾರಿಯೂ ಆತಂಕಕಾರಿಯೂ ಆದ ದುಷತ್ಯಗಳ ವರದಿಗಳು ಈ ಭಜರಂಗದಳದ ಕುರಿತು ಬರತೊಡಗಿದೆ.

ಬಾಂಬ್ ಸಿಡಿಯಿತು

ಉತ್ತರ ಪ್ರದೇಶದ ಕಾನ್ಪುರದಲ್ಲಿ ಇತ್ತೀಚಿಗೆ ಇಬ್ಬರು ಭಜರಂಗ ದಳದ ಕಾರ್ಯಕರ್ತರು ಸತ್ತರು. ಹೇಗೆಂದರೆ ಅವರು ಬಾಂಬ್ ತಯಾರಿಕೆಯಲ್ಲಿ ತೊಡಗಿದ್ದರು. ಆಕಸ್ಮಿಕವಾಗಿ ಬಾಂಬ್ ಸಿಡಿಯಿತು. ಇಬ್ಬರು ಸತ್ತರು. ಹಲವರು ಗಾಯಗೊಂಡರು. ಇವರು ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಕೋಮುಗಲಭೆ ಹಬ್ಬಿಸುವ ಗಂಭೀರ ತಯಾರಿಯಲ್ಲಿದ್ದವರು. ಅತ್ಯಂತ ಪ್ರಚೋದನಕಾರಿ ಭಾಷಣ, ವಿಷಪ್ರಚಾರದ ಜೊತೆಗೆ ಬಾಂಬುಗಳನ್ನು ಬಳಸಲೂ ಅವರು ಸಿದ್ಧತೆ ಮಾಡುತ್ತಿದ್ದರು.

ಒರಿಸ್ಸಾದ ಭುವನೇಶ್ವರದಲ್ಲಿ ಬಿಜೆಪಿ ಮುಖಂಡರೊಬ್ಬರ ಮಗನನ್ನು ಇದೇ ರೀತಿ ಬಾಂಬ್ ತಯಾರಿಸುವ ಯತ್ನದಲ್ಲಿದ್ದಾಗ ಅದು ಸಿಡಿದು ವಿಷಯ ಬಯಲಾಗಿ ಬಂಧಿಸಲಾಯಿತು. ತಮಿಳುನಾಡಿನ ತೆಂಕಸಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಪೊಲೀಸರು ಆರೆಸ್ಸೆಸ್ ಕಾರ್ಯಕರ್ತನ ಕೈವಾಡವನ್ನು ಪತ್ತೆ ಹಚ್ಚಿದರು.

ಇಂತಹ ಹಲವು ಪ್ರಕರಣಗಳೂ ವರದಿಯಾಗುತ್ತಿದ್ದರೂ ಗುಜರಾತ್, ಮಹಾರಾಷ್ಟ್ರ, ಒರಿಸ್ಸಾ ಮುಂತಾದ ಕಡೆಗಳಲ್ಲಿ ಈ ಸಂಘಟನೆಗಳು ಮುಗ್ಧ ಅಲ್ಪಸಂಖ್ಯಾತರ ಮಾರಣ ಹೋಮಗಳನ್ನು ನಡೆಸಿರುವುದು ಇಡೀ ಜಗತ್ತಿಗೆ ತಿಳಿದಿದ್ದರೂ ಈ ಸಂಘಟನೆಗಳನ್ನು ಭಯೋತ್ಪಾದಕ ಸಂಘಟನೆಗಳು ಅಂತಾಗಲಿ ಉಗ್ರಗಾಮಿಗಳು ಅಂತಾಗಲಿ ಕರೆಯುವುದು ಯಾಕೆ ಚಾಲ್ತಿಗೆ ಬಂದಿಲ್ಲ. ಕೆಲವು ಪತ್ರಿಕೆ ಮಾಧ್ಯಮಗಳಂತೂ 'ಹಿಂದೂ ಪರ' ಎಂಬ ಪದಗಳನ್ನು ಬಳಸಿ ಎಲ್ಲ ಹಿಂದೂಗಳನ್ನು ಇವರ ಗುತ್ತಿಗೆಗೆ ಕೊಟ್ಟು ಬಿಡುತ್ತವೆ.

ಹೋಗಲಿ ಕೇಂದ್ರ ಸರ್ಕಾರವಾದರೂ ಈ ಸಂಘಟನೆಗಳನ್ನು ವಿಶೇಷವಾಗಿ ಗಮನಿಸಿ ಎಚ್ಚರ ವಹಿಸಬೇಕಾದ ಸಂಘಟನೆಗಳ ಪಟ್ಟಿಯಲ್ಲಿಯಾದರೂ ಇಟ್ಟು ಇವರ ಚಟುವಟಿಕೆ, ಚಲನವಲನವನ್ನು ಅನುಸರಿಸುತ್ತಿದೆಯಾ ಅಂದರೆ ಆ ಬಗ್ಗೆ ಕೂಡ ಸರ್ಕಾರ ಗಂಭೀರವಾಗಿರುವುದು ಕಾಣುತ್ತಿಲ್ಲ. ಈ ಹಿಂದೆ ಸಿಪಿಐ(ಎಂ) ರಾಜ್ಯ ಸಭಾ ಸದಸ್ಯರಾದ ಬೃಂದಾಕಾರಟ್ ಈ ಬಗ್ಗೆ ಪ್ರಶ್ನೆ ಎತ್ತಿದಾಗ ಗೃಹಸಚಿವ ಶಿವರಾಜಪಾಟೀಲ್ ಕೊಟ್ಟ ಉತ್ತರವೇ ಅದಕ್ಕೆ ಸಾಕ್ಷಿ.



ಭಿನ್ನತೆ

ಭಯೋತ್ಪಾದಕರಿಗೆ ನಿಜವಾಗಿಯೂ ಧರ್ಮ ಎಂಬುದಿಲ್ಲ. ಅವರು ಹಲವು ಧರ್ಮಗಳಿಗೆ ಸೇರಿದವರಾಗಿರಬಹುದು ಅಥವಾ ಆ ಧರ್ಮಗಳ ಹೆಸರನ್ನು ಹೇಳುತ್ತಿ ರುವವರಾಗಿರ ಬಹುದು. ಆ ಭಯೋತ್ಪಾದನೆಯ ಕೃತ್ಯಗಳು ಬೀರುವ ಪರಿಣಾಮಗಳು ಮಾತ್ರ ಬಹು ಸಂಖ್ಯಾತರಿಗೆ ಬೇರೆ ರೀತಿಯದ್ದಾಗಿದೆ. ಅಲ್ಪಸಂಖ್ಯಾತರಿಗೆ ಅದು ಬೇರೆ ರೀತಿಯದ್ದಾಗಿದೆ.

ಯಾರೋ ದಾರಿ ತಪ್ಪಿದ ಕೆಲವು ಮುಸ್ಲಿಂ ಯುವಕರು ರಾಷ್ಟ್ರ ದ್ರೋಹ, ಸಮಾಜದ್ರೋಹದ ಕೆಲಸ ಮಾಡಿ, ಭಯೋತ್ಪಾದಕ ಚಟುವಟಿಕೆಯಲ್ಲಿ ಪಾಲ್ಗೊಂಡರೆ ಇಲ್ಲಿ ಅದಕ್ಕಾಗಿ ಇಡೀ ಅಲ್ಪಸಂಖ್ಯಾತ ಸಮುದಾಯವನ್ನು ದೇಶದ್ರೋಹಿಗಳೆಂಬಂತೆ ಬಿಂಬಿಸಲಾಗುತ್ತದೆ. ಇದೇ ಕಾರಣವಾಗಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರನ್ನು ಸಂಶಯಿಸುವುದು, ಅನುಮಾನಿಸುವುದನ್ನು ನಿರ್ಲಜ್ಜವಾಗಿ ಮಾಡಲಾಗುತ್ತದೆ. ಅದನ್ನು ನಿರ್ದಯವಾಗಿ ಮಾಡಲಾಗುತ್ತದೆ.

ಆದರೆ ಬಹುಸಂಖ್ಯಾತ ಸಮುದಾಯಕ್ಕೆ ಸೇರಿದವರು ಭಯೋತ್ಪಾದನೆ ಚಟುವಟಿಕೆಯಲ್ಲಿ ತೊಡಗಿದರೆ ಇತರರಿರಲಿ ಸ್ವತಃ ದುಷತ್ಯ ಮಾಡಿದವರೂ ಹಲವು ಬಾರಿ ಬೀದಿ ಬೀದಿಗಳಲ್ಲಿ ಆರಾಮವಾಗಿ ತಿರುಗಾಡಿಕೊಂಡಿರುತ್ತಾ ಸಾಕ್ಷಿಗಳನ್ನು ಹೆಸರಿಸುತ್ತಾ, ಸಾಕ್ಷ ನಾಶಪಡಿಸುತ್ತಾ ಇರುತ್ತಾರೆ.

ಶಿಕ್ಷಣ, ಉದ್ಯೋಗ 'ಸಾಮಾಜಿಕ ಸ್ಥಾನಮಾನಗಳ' ಪ್ರಶ್ನೆಯಲ್ಲಿ ಅಲ್ಪಸಂಖ್ಯಾತ ಸಮುದಾಯ ಎದುರಿಸುತ್ತಿರುವ ತಾರತಮ್ಯ ನೀತಿಯನ್ನೇ 'ಭಯೋತ್ಪಾದನೆ'ಯ ವಿಚಾರದಲ್ಲೂ ಕಾಣಬಹುದು.

ಇದು ಭಯೋತ್ಪಾದನೆ ಅಲ್ಲವೇ?

ತುಂಬು ಗರ್ಭಿಣಿಯ ಹೊಟ್ಟೆ ಸೀಳಿ ಮಗುವನ್ನು ಹೊರತೆಗೆದು ತ್ರಿಶೂಲದಿಂದ ಚುಚ್ಚಿಕೊಂಡು ಕೇಕೆ ಹಾಕಿ ಕುಣಿಯುವುದು, ಮನೆ, ಚರ್ಚ್, ಮಸೀದಿ ಗೋರಿ, ಬೇಕರಿ, ಎನ್ನದೆ ಬೆಂಕಿ ಇಟ್ಟು ಸಾಮೂಹಿಕವಾಗಿ ಹತ್ಯಾಕಾಂಡ ನಡೆಸುವುದು ಇಂತಹದ್ದನ್ನು, ನಡೆಸುವುದಾಗಿ ಹೇಳುತ್ತಾ ಆಡಳಿತಕ್ಕೆ ಸವಾಲು ಎಸೆದು ತ್ರಿಶೂಲ ಇತ್ಯಾದಿ ಆಯುಧ ಹಂಚುವುದು ಭಯೋತ್ಪಾದನೆ ಅಲ್ಲವೇ? ಬಾಂಬ್ ತಯಾರಿಸುವುದು ಭಯೋತ್ಪಾದಕ ಕೃತ್ಯವೇ ಅಲ್ಲವೇ? ನಮ್ಮ ಆಡಳಿತ ಪಾರ್ಲಿಮೆಂಟಿನ ಮೇಲೆ ದಾಳಿ ಮಾಡಿದರೆ ಮಾತ್ರ ಭಯೋತ್ಪಾದಕರು ಅಂತ ತೀರ್ಮಾನಿಸುವುದಾ?

ರಾಷ್ಟ್ರೀಯ ಹಿಂದೂ ಸೇನೆಯ ರಾಜ್ಯ ಅಧ್ಯಕ್ಷರಾದ ಪ್ರಮೋದ ಮುತಾಲಿಕ್ ಇತ್ತೀಚಿಗೆ ನಮ್ಮ ಸಂಘಟನೆ ಹಿಂದೂ ಆತ್ಮಹತ್ಯಾ ದಳ ರಚಿಸಿದೆ ಅಂತ ಘೋಷಿಸಿದರು. ಮತ್ತೆ ಪ್ರಶ್ನಿಸಿದಾಗ ನಾವು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ದಾಳಿ ಮಾಡಿ ಕೊಲ್ಲುತ್ತೇವೆಂದು ಬಹಿರಂಗವಾಗಿ ಸಾರಿದರು. ಯಾವ ಸರ್ಕಾರ ಏನು ಕ್ರಮ ವಹಿಸಿದೆ ಅವರ ಮೇಲೆ.

ಯಾವುದಾದರೂ ಒಂದು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಂಘಟನೆ ಸುಮ್ಮನೆ ಬಾಯಿ ಮಾತಿನಲ್ಲಿ ಇಂತಹ ಮಾತೊಂದನ್ನು ಆಡಿ ಉಳಿಯುವುದುಂಟೇ? ಯಾಕೀ ತಾರತಮ್ಯ? ಯಾಕೀ ಪಕ್ಷಪಾತ!

ಬಹುಸಂಖ್ಯಾತ ಸಮುದಾಯ ತಮ್ಮ ಜೊತೆಗಿದೆ ಅಂತ (ತಪ್ಪಾಗಿ) ಭಾವಿಸಿ ಭಜರಂಗ ದಳದಂತಹ ಸಂಘಟನೆಗಳು ಹುಂಬ ಧೈರ್ಯದ ಮಾತನ್ನಾಡುತ್ತವೆ. ಧಾರ್ಮಿಕ ಭಾವನೆಗಳನ್ನು ದುರುಪಯೋಗ ಮಾಡಿಕೊಂಡು ತಮ್ಮ ದುಷತ್ಯ ಎಸಗುತ್ತವೆ.

ಜಾತ್ಯಾತೀತ ಎಂದು ಹೇಳುವ ಸರ್ಕಾರಗಳಿಗೆ ಏನಾಗಿದೆ? ಸಂವಿಧಾನ, ಕಾನೂನು, ಕಾನೂನಿನ ಆಡಳಿತವನ್ನು ಕಾಪಾಡಬೇಕಾದ ಆಡಳಿತ, ಪೊಲೀಸ್, ನ್ಯಾಯಾಂಗಕ್ಕೆ ಏನಾಗಿದೆ. ಬಹುಸಂಖ್ಯಾತ ಕೋಮುವಾದದ ಬಗೆಗೆ ಭಯವೋ ಅಥವಾ ಅದನ್ನು ಸಹಿಸಿಕೊಳ್ಳುವ, ಅಥವಾ ಒಳಗಿಂದೊಳಗೆ ಬೆಂಬಲಿಸುವ ಮೃದು ಧೋರಣೆಯೋ?


ಈಗಾಗಲೇ ಸಿಡಿದಿರುವ ಬಾಂಬ್‌ಗಳಲ್ಲಿ ಎಷ್ಟು ಬಾಂಬ್‌ಗಳು ಭಜರಂಗ ದಳ ತಯಾರಿಸಿ ಇಟ್ಟಿದ್ದೋ ಯಾರಿಗೆ ಗೊತ್ತು. ಮುಸ್ಲಿಂ ಮತ್ತಿತರೆ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುವ ಅವಕಾಶ ಸೃಷ್ಟಿಸಿಕೊಳ್ಳಲು ಇವರು ಯಾವ ಮಟ್ಟಕ್ಕೆ ಬೇಕಾದರೂ ಹೋಗಬಲ್ಲರು ಎಂಬುದಕ್ಕಂತೂ ಹಲವು ದಾಖಲೆಗಳಿವೆ.

ನಾಜಿ ಹಿಟ್ಲರನ ತಂತ್ರವೂ ಇದೇ ಆಗಿತ್ತಲ್ಲವೇ. ಹಿಟ್ಲರನ ಆರಾಧಕರು ಇನ್ನೇನು ಮಾಡಿಯಾರು? ಜನರನ್ನು ಕೊಂದು ಅದನ್ನು ಮುಸ್ಲಿಮರ ಮೇಲೆ ಹಾಕುವ ಖಚಿತ ಯೋಜನೆ ಇವರಿಗೆ ಇತ್ತು ಎಂಬುದು ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಕಂಡುಬಂದಿದೆ.

ಆರ್.ಕೆ.



■ ಕೆ.ನೀಲಾ



ಅವಳು ಅಕ್ಷರಶಃ:
ನೇರವಾಗಿಯೇ
ಮಾತಿಗಿಳಿದಳು. "ಅಕ್ಕ,
ಯಾರನ್ನ ನಂಬುವುದು?
ಅವಳ ಪ್ರಶ್ನೆಗೆ ನಾನು
ಉತ್ತರಿಸದೆ ಕೇಳಿದೆ"
ಏನಾಯ್ತು..?

ಉಗುಳಿ ಈಚೆ ಬಂದಳು ಗಟ್ಟಿಗಿತ್ತಿ

ಹೆಣ್ಣು ಭ್ರೂಣ ಹತ್ಯೆ ವಿರೋಧಿ ಪ್ರಚಾರಾಂದೋಲನದ ಅಂಗವಾಗಿ ನಡೆಯಲಿರುವ ಎಂಟು ಜಿಲ್ಲೆಗಳ ಕಾರ್ಯಾಗಾರದ ತಯಾರಿನಲ್ಲಿ ತಲ್ಲೀನರಾಗಿದ್ದೆವು. ಮೊದಲ ಹಂತದ ಕೆಲಸ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಭೇಟಿ ಮಾಡಿ ಪಿಸಿ ಅಂಡ್ ಪಿಎನ್‌ಡಿಟಿ ಕಮಿಟಿ ಕುರಿತು ಸಮಗ್ರ ಮಾಹಿತಿ ಪಡೆಯುವುದು. ಲಿಂಗಾನುಪಾತದ ಪಟ್ಟಿ ಪಡೆಯುವುದು. ರೆಡಿಯೋಲಾಜಿಸ್ಟ್ ಸೆಂಟರ್‌ಗಳ ನೋಂದಣಿ ಇತ್ಯಾದಿಯ ಪರಿಶೀಲನೆಯೂ ಮಾಡುವುದು. ಹೀಗೆ ಮನಸು ಮೆದುಳು ತುಂಬೆಲ್ಲ ಕಾರ್ಯಾಗಾರದ ಥಕಥೈ ಆವರಿಸಿತ್ತು. ಈ ಬಾರಿ ಅದ್ಭುತವೆನ್ನುವಂತೆ ಸಂಗಾತಿಗಳ ಟೀಮ್ ಕೆಲಸ ಪರಿಣಾಮಕಾರಿಯಾಗಿತ್ತು. ಉತ್ಸಾಹದ ಗರಿಗಳು ಎಲ್ಲರ ನೆತ್ತಿಯ ಮೇಲೆ ಹೊಳೆಯುತ್ತಿದ್ದವು. 'ಹೆಣ್ಣು ಮಗು ಉಳಿಸಿ, ಮಾನವ ಕುಲ ರಕ್ಷಿಸಿ' ಸಂದೇಶವು ಪ್ರಜ್ಞಾವಂತರ ಹೃದಯದ ಕದ ತಟ್ಟುತ್ತಿತ್ತು. ಜಗವ ಹೆತ್ತ ಜನನಿಗೆ ಜಗಕೆ ಬರುವ ಹಕ್ಕಿಲ್ಲವೇ...? ಪ್ರಶ್ನೆಯು ಗಾಳಿಯಂತೆ ಎಲ್ಲೆಡೆ ಹರಿದಾಡುತ್ತಿತ್ತು.

ಅದು ಬೆಳಗು ಮುಂಜಾವಿನ ಹೊತ್ತು. ಹರೆಯದ ಹುಡುಗಿಯೊಬ್ಬಳು ಬಾಗಿಲು ತಳ್ಳಿ ಒಳಬಂದಳು. ನಾನು ಯಥಾರೀತಿ ಒಂದು ಸ್ನೇಹದ ನಗು ಚೆಲ್ಲಿ ಕುಶಲ ವಿಚಾರಿಸಿದೆ. ಅವಳ ತುಟಿಯಂಚಿಗೆ ಒತ್ತಾಯದ ನಗು ಇತ್ತು. ಕಣ್ಣು ಬೆಳಕಿಗೆ ಮಂದ ಪರದೆ ಇತ್ತು. ಅವಳು ಎದೆಯ ದುಗುಡ ಹೊರಗೆಡವಲು ಬಂದಿದ್ದಾಳೆಂಬ ಸೂಚನೆ ಒಟ್ಟೂ ವರ್ತನೆಯಲ್ಲಿತ್ತು. ಮನ ಮುಟ್ಟಿ ಮಾತಾಡುವ ನಿಷ್ಕಪಟ ಅಭಿವ್ಯಕ್ತಿಯಿಂದ ಎದುರಿನವರ ಅಂತರಂಗದ ಮಾತುಗಳಿಗೆ ದನಿಯಾಗಿಸಬಹುದು. ಅವಳು ಅಕ್ಷರಶಃ ನೇರವಾಗಿಯೇ ಮಾತಿಗಿಳಿದಳು. "ಅಕ್ಕ, ಯಾರನ್ನ ನಂಬುವುದು?" ಅವಳ ಪ್ರಶ್ನೆಗೆ ನಾನು ಉತ್ತರಿಸದೆ ಕೇಳಿದೆ "ಏನಾಯ್ತು..?"

ಬಹಳ ವಿಶ್ವಾಸದ ಅನೇಕ ವರ್ಷಗಳ ಒಡನಾಟದ ಹಿರಿಯ ವ್ಯಕ್ತಿಯೊಬ್ಬ ಅವಳೊಂದಿಗೆ ತೀರ ಕೆಟ್ಟದಾಗಿ ನಡೆದುಕೊಂಡಿದ್ದ. ವಯಸ್ಸಾದ ಯಜಮಾನ ಅದೂ ಈವರೆಗೆ ಗೌರವಕ್ಕೆ ಭಾಜನನಾದ ವ್ಯಕ್ತಿಯೊಬ್ಬ ಏಕಾಂತದ ಸಮಯದಲ್ಲಿ ಅಸಹ್ಯವಾಗಿ ವರ್ತಿಸಿದ್ದು ಅವಳಿಗೆ ಅತೀವ ನೋವು ವೇದನೆ ಉಂಟುಮಾಡಿತ್ತು. ಎಲ್ಲಕ್ಕೂ ಮಿಗಿಲಾಗಿ ಈ ಜಗತ್ತಿನಲ್ಲಿ ನಂಬಿಕೆಗೆ ಅರ್ಹವಾದವರು ಯಾರೂ ಇಲ್ಲ ಎನ್ನುವಂಥ ಭಾವನೆಗೆ ತಲುಪಿದ್ದಳು.

ಏನು ನಡೆದಿತ್ತು ಅವಳೊಂದಿಗೆ.....?

ಅವಳು ಬಿಕ್ಕುತ್ತಲೇ ಅರುಹಿದಳು. ಅದೊಂದು ದಿನ ಹೀಗೆ.... ಬರೆಯುತ ಕೂತಿದ್ದರು. ಆತ ಕಾಮಸೂತ್ರದ ಪುಸ್ತಕಗಳ ಪುಟ ತಿರುವಿ ವಿವರಿಸತೊಡಗಿದ. ಅಶ್ಲೀಲ ಚಿತ್ರಗಳು, ಕೆಲವು ಕ್ಲೈಮ್ಯಾಕ್ಸ್ ಕಾಪಿಗಳು ಮುಂದಿಟ್ಟು ಎಲ್ಲದರ ಬಗ್ಗೆಯೂ ಅರಿಯುವಂತೆ ಒತ್ತಾಯಿಸಿದ. ಇನ್ನೂ ಮುಂದುವರೆದು ಯಾವ್ಯಾವೋ ಅಸಂಗತ ಲೈಂಗಿಕ ವಿಷಯಗಳನ್ನು ವಿವರಿಸಲು ಹೊರಟ. ಇವಳು ಕೇಳುತ್ತಿದ್ದಾಳಾ? ಆಸಕ್ತಿ ಇದೆಯೇ ಇಲ್ಲವೇ ಎಂಬಂಥ ಕಿಂಚಿತ್ ಆಲೋಚನೆಯೂ ಇಲ್ಲದೆ ಮಾತಾಡುತ್ತಿರುವ ಆ ಹಿರಿಯರ ವರ್ತನೆಗೆ ಬೇಸತ್ತು ಇವಳಿಗೆ ಅವನಿಂದ ತಪ್ಪಿಸಿಕೊಂಡು ಬರುವುದರಲ್ಲಿ ಸಾಕುಸಾಕಾಗಿ ಹೋಯ್ತು.

ಇದು ಅತ್ಯಾಚಾರದ ಪ್ರಕರಣವೂ ಅಲ್ಲ. ಆ ವ್ಯಕ್ತಿ ಈ ಹಿಂದೆ ಇಂಥ ಯಾವುದೇ ದುಸ್ಸಾಹಸಕ್ಕಿಳಿದ ಹಿನ್ನೆಲೆಯಿಲ್ಲ. ಆದರೆ ಇವಳಿಗೆ ತೀರ ಹೆದರಿಕೆ ಬರುವಂತೆ ಆತ ವರ್ತಿಸಿದ್ದು ಯಾವ ಅಪರಾಧದ ಪಟ್ಟಿಯಲ್ಲಿ ನಿಲ್ಲಿಸುವುದು? ಮುಟ್ಟದೇ ತಟ್ಟದೇ ನಡೆಸುವ ಯಾವ ತೆರನ ಚಟದ ಆಟವಿದು?

ಈಚೆಗೆ ಗೆಳತಿಯೊಬ್ಬಳು ಹೇಳುತ್ತಿದ್ದಳು. ಬಸ್ಸುಗಳಲ್ಲಿ ಬರುವಾಗ ಯುವಕರೇನಾದರೂ ಪಕ್ಕದ ಸೀಟಿನಲ್ಲಿ ಕೂತರೆ, ಒಂದಿಷ್ಟು ಅಂಜಿ, ಅಳುಕಿ ತಮ್ಮ ಪಾಡಿಗೆ ತಾವಿರುತ್ತಾರೆ. ಆದರೆ ವಯಸ್ಸಾದ ಬಿಳಿ ತಲೆಯ ಕೆಲವರು ವಿಚಿತ್ರ ಕೀಟಲೆಗೆ ಇಳಿಯುತ್ತಾರೆ ಎಂದು, ವಯಸ್ಸಾದ ಮೇಲೆ ಉಂಟಾಗುವ ವಿಕೃತ ಮನೋರೋಗ ಇರಬಹುದೇ...? ಏನೆಲ್ಲ ಇರಬಹುದು. ಆದರೆ ಈ ಚಟಕ್ಕೆ ಬಲಿಯಾಗುವ ಹೆಣ್ಣುಮಕ್ಕಳ ಮನಸ್ಸಿನ ಸ್ಥಿತಿ ಏನು? ಅನುಭವಿಸಿದ ಆಘಾತದಿಂದ ಹೊರಬರುವುದು ಹೇಗೆ? ಎಲ್ಲರ ಮನಸ್ಥಿತಿಯೂ ಥಟ್ಟನೆ ಪ್ರತಿಭಟಿಸುವಂತ ಅಭ್ಯಾಸಕ್ಕೊಳಪಟ್ಟಿರುವುದಿಲ್ಲ. ಅಥವ ಎದುರಿಸಲು ಬೇಕಾದ ಜಾಣತನವೂ ಇರಲಿಕ್ಕಿಲ್ಲ.

ಇಂಥದೇ ಅನುಭವವೊಂದು ಸಾಕ್ಷರತೆಯಲ್ಲಿ ಕೆಲಸ ಮಾಡಿದ ಯುವತಿಯದ್ದು. ಅರವತ್ತು ವಯಸ್ಸಿನ ಹಿರಿಯ ಸಾಹಿತಿಯೊಂದಿಗೆ ಸಾಕ್ಷರತೆಯ ಕೆಲಸಕ್ಕೆ ಅಲ್ಲಲ್ಲಿ ಹೋಗುತ್ತಿದ್ದಳು. ಮೊದಲಿಗೆಲ್ಲ ಭುಜ ತಟ್ಟಿ, ಕೈ ತಟ್ಟಿ ಮಾತಾಡುವುದಕ್ಕೆ ತಂದೆಯಂಥ ವಯಸ್ಸು ಕಲ್ಮಶವಿರಲಿಕ್ಕಿಲ್ಲ ಎಂದು ಭಾವಿಸಿದಳು. ಅವನೂ ಮಾತಿಗೊಮ್ಮೆ "ನೀನು ನನಗೆ ಮಗಳಂತೆ" ಎಂದು ಹೇಳುತ್ತಿದ್ದ. ಅದೊಮ್ಮೆ ತನ್ನ ಮನೆಗೆ ಮಧ್ಯಾಹ್ನದೂಟಕ್ಕೆ ಕರೆದ. ತಪ್ಪಾರ್ಥ ಬಗೆಯದೇ ಹುಂ ಅಂದಳು. ಅವಳು ಬಚ್ಚಲು ಮನೆಯಿಂದ ಕೈತೊಳೆದು ಈಚೆ ಬರುವಾಗ ಟವೆಲ್ ಕೊಡುವ ನೆಪದಲ್ಲಿ ಕೆನ್ನೆ ತಟ್ಟಿದ. ಪಕ್ಕದಲ್ಲಿ ಕೂರಿಸಿಕೊಂಡು ಭುಜ ಸವರಿದ.

ಇವಳಿಗೆ ರೇಜಿಗೆ ಸುರುವಾಯ್ತು. ಭಾವನೆಯಲ್ಲಿ ದುಷ್ಟ ವಾಸನೆ ಗ್ರಹಿಸಿದಳು. ಮನೆಯಲ್ಲಿ ಯಾರೂ ಇಲ್ಲದ್ದು ಗಮನಿಸಿದಳು. ಇನ್ನೂ ಒಂದೆರಡು ವರ್ತನೆಗಳಿಗೆ ಇಳಿಯುವ ಮುನ್ನವೇ ಈಕೆ ಮುದುಕನ ಕಪಾಳಿಗೆ ಸಶಕ್ತ ಏಟು ಬಿಟ್ಟಳು. ಅನಿರೀಕ್ಷಿತ ಧಾಳಿಗೆ ತತ್ತರಿಸಿದ ಅವನು ಹಾಂ ಹೂಂ ಅನ್ನುವುದರಲ್ಲಿಯೇ ಇನ್ನಷ್ಟು ಏಟುಗಳ ರುಚಿ ತೋರಿಸಿ, "ಇನ್ಯಾರೊಂದಿಗಾದ್ರೂ ಹಿಂಗೆ ವರ್ತಿಸಿದ್ರ ಜೈಲಿಗೆ ಕಳಸ್ತೀನಿ ನೆನಪಿಡು..." ಅಂತ ಥೀ ಥೂ ಉಗುಳಿ ಈಚೆ ಬಂದಳು ಗಟ್ಟಿಗಿತ್ತಿ.

'ವ್ಹಾ ಮಗಳೇ ಶಹಾಬ್ಬಾಸ್' ಅಂದೆವು. ಹಿರಿತನದ ಪರದೆ ಹೊದ್ದು ನಡೆಸುವ ಅಸಹ್ಯ ಆಟಗಳಿಗೆ ಕಡಿವಾಣ ಬೇಕಲ್ಲವೇ? ಒಂಟಿ ಹೆಣ್ಣುಮಕ್ಕಳು ರಾತ್ರಿ ಪ್ರಯಾಣದಲ್ಲಿ ಅನುಭವಿಸುವ ಯಾತನೆ, ಎದುರಿಸುವ ಸಮಸ್ಯೆಗಳ ಪಟ್ಟಿ ತುಂಬ ದೊಡ್ಡದಿದೆ.

ಈಗ ಈ ಗೆಳತಿ ಹೇಳಿದ ಪ್ರಕರಣವಂತೂ ಇನ್ನೂ ಚಿಂತೆಗೆ ಒಡ್ಡುವಂಥದ್ದೇ. ಹೆಣ್ಣುಮಕ್ಕಳಿಗೆ ಜೀವನದಲ್ಲಿ ಒಂದು ನಂಬಿಕೆಯ ನೆಲೆಯಿಲ್ಲವೇ? ಹೆಣ್ಣೆಂದ ಕೂಡಲೇ ತಾಯಿಯ ಗರ್ಭದಿಂದಲೂ ಕಿತ್ತುವರು. ಎಳೆಹುಡುಗಿಯರು ಮತ್ತು ಹೆಂಗೂಸುಗಳು ತೀರ ಸಮೀಪದ ಸಂಬಂಧಿ ಮತ್ತು ವ್ಯಕ್ತಿಗಳಿಂದೇ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗುತ್ತಾರೆಂಬುದು ಸರಕಾರಿ ವರದಿಯೂ ಸ್ಪಷ್ಟಪಡಿಸುತ್ತದೆ. ಮನೆ ಒಳಗೆ, ಹೊರಗೆ ಕೆಲಸ ಮಾಡುವ ಸ್ಥಳದಲ್ಲಿ ಪ್ರಯಾಣದಲ್ಲಿ ಹೀಗೆ ಎಲ್ಲ ಕಡೆಯೂ ಒಂದಿಲ್ಲೊಂದು ಸ್ವರೂಪದಲ್ಲಿ ಎರಗುವ ಲೈಂಗಿಕ ದೌರ್ಜನ್ಯದ ಧಾಳಿಗೆ ಕಡಿವಾಣ ಹಾಕಲೆಂದೇ ಸುಪ್ರಿಂ ಕೋರ್ಟು, "ಲೈಂಗಿಕ ದೌರ್ಜನ್ಯ ತಡೆ ಸಮಿತಿ" ರಚಿಸಲು ನಿರ್ದೇಶಿಸಿದೆ.

ನಮ್ಮ ಕಾರ್ಯಾಗಾರದ ತರುವಾಯ ಪ್ರಚಾರಾಂದೋಲನ ಸಮಿತಿಯೊಂದನ್ನು ರಚಿಸಿದೆವು. ಚಿಂತನೆಯನ್ನು ಪಕ್ವಗೊಳಿಸಿದ್ದು ಕಾರ್ಯಾಗಾರ ಈಗ ಚಳುವಳಿಯ ಸರದಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಜಾರಿಗಾಗಿ ಪಿಸಿ ಅಂಡ್ ಪಿಎನ್‌ಡಿಟಿ ಕಮಿಟಿಗಳ ರಚನೆ ಮತ್ತು ಕಾರ್ಯ ನಿರ್ವಹಣೆಗಾಗಿ ಬಸ್ಸಿನಲ್ಲಿ ಕಡ್ಡಾಯ ಮೂರು ಸಾಲುಗಳು ಮಹಿಳೆಯರಿಗೆ ಬಿಟ್ಟುಕೊಡಲು, ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ನಿಲ್ಲಿಸಲು ಆಗ್ರಹಿಸಿ ಹೋರಾಟಕ್ಕೆ ಕರೆ ಕೊಡಲಾಯ್ತು. ಸಾಮೂಹಿಕ ಹೋರಾಟದೊಂದಿಗೆ ವೈಯಕ್ತಿಕ ನೆಲೆಯಲ್ಲಿಯೂ ಮಹಿಳೆಯರು ಧೈರ್ಯದಿಂದ ಎದುರಿಸಲು ತಾಕತ್ತು ಪಡೆಯಬೇಕಿದೆ. ಸ್ವಂತ ಅಸ್ತಿತ್ವದ ಅಸ್ಮಿತದ ಬದುಕು ಕಟ್ಟಿಕೊಳ್ಳಲು ಬೇಕಾದ ಜಾಗೃತ ಪ್ರಜ್ಞೆಯೇ ಅಂತರಂಗ ಮತ್ತು ಬಹಿರಂಗದ ಹೋರಾಟಕ್ಕೆ ಕಾರಣವಾಗುತ್ತದೆ.

○

ಸಿಂಗೂರ್ ....

ಪುಟ 6 ರಿಂದ

ನೀಡಿದ್ದರೆ ಸಿಂಗೂರಿನಲ್ಲಿ ನೀಡಿರುವುದು 997.11 ಎಕ್ರೆ ಮಾತ್ರ, ಹಾಗಿರುವಾಗ ಹೆಚ್ಚುವರಿ ಎಲ್ಲಿದೆ ಎನ್ನುತ್ತಾರೆ ನಿರುಪಮ್ ಸೆನ್.

ಆದರೂ ಎಡರಂಗ ಸರಕಾರ ಈ ವಿಷಯದಲ್ಲಿ ಸ್ವೀಕಾರಯೋಗ್ಯ ಪರಿಹಾರದ ಬಗ್ಗೆ ಚರ್ಚಿಸಲು ಸಿದ್ಧವಿದೆ ಎಂದು ನಿರುಪಮ್ ಸೆನ್ ಹೇಳುತ್ತಾರೆ. ಬಡ ಮತ್ತು ಅಂಚಿನಲ್ಲಿರುವ ರೈತರಿಗೆ ಹಣಕಾಸು ಪುನರ್ವಸತಿ ಕಲ್ಪಿಸಬೇಕೆಂಬುದು ವಿರೋಧ ಪಕ್ಷದವರ ಆಶಯವಾದರೆ ಸಂವಾದದ ಮೂಲಕ ಪರಿಹಾರ ಸಾಧ್ಯ. ಇಲ್ಲಿರುವ ಗುರಿ ರಾಜ್ಯದ ಕೈಗಾರಿಕೀಕರಣದ ಸಾಧ್ಯತೆಗಳನ್ನು ಹೆಚ್ಚಿಸುವುದು. ಕೈಗಾರಿಕೀಕರಣ ಬೇಡ, ಆಮೂಲಕ ಉದ್ಯೋಗಾವಕಾಶ ನಿರ್ಮಾಣ ಬೇಡ ಎಂದು ಯಾವ ರಾಜಕೀಯ ಪಕ್ಷವೂ ಹೇಳುವುದಿಲ್ಲ. ಹಾಗಿರುವಾಗ ಇಂತಹ ನಕಾರಾತ್ಮಕ ನಿಲುವು, ದಿಕ್ಕಿಲ್ಲದ ಚಳುವಳಿಗಳು ಏತಕ್ಕೆ ಎಂದು ಅವರು ಪ್ರಶ್ನಿಸುತ್ತಾರೆ.

ಮುಖ್ಯ ಪ್ರಶ್ನೆಗಳು

ಎಡರಂಗ ಸರಕಾರದ ಆಡಿಯಲ್ಲಿ ಬಂಗಾಳದ ಕೈಗಾರಿಕೀಕರಣ ಅಸಾಧ್ಯ ಎಂದು ಈ ಪಕ್ಷಗಳು ಕಳೆದ ಮೂರು ದಶಕಗಳಿಂದ ಬೊಬ್ಬಿಡುತ್ತಾ ಬಂದಿವೆ. ಈಗ ಕೈಗಾರಿಕೀಕರಣದ ಮೂರ್ತ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುತ್ತಿರುವಾಗ ಅದನ್ನು ವಿಫಲಗೊಳಿಸುವ ಪ್ರಯತ್ನಗಳು ಏಕೆ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತವೆ , ಇದು ಆ ವಿರೋಧಿಗಳ ರಾಜಕೀಯ ಅಸ್ತಿತ್ವದ, ಉಳಿವಿನ ಪ್ರಶ್ನೆ ಎನ್ನುತ್ತಾರೆ ಸಿಪಿಐ(ಎಂ) ಮುಖಂಡರು. ಆದ್ದರಿಂದಲೇ ತೃಣಮೂಲಿಗಳ ಜೊತೆಯಲ್ಲಿ ಕಾಂಗ್ರೆಸ್ , ಬಿಜೆಪಿ, ಮುಸ್ಲಿಂ ಮೂಲಭೂತವಾದಿಗಳು, ಮಾವೋವಾದಿಗಳು, ಎಸ್‌ಯುಸಿಐ, ವಿದೇಶಿ ನೆರವಿನ ಎನ್‌ಜಿಒಗಳು ಮತ್ತು ಕಾರ್ಪೊರೇಟ್ ಮಾಧ್ಯಮಗಳವರು ಎಲ್ಲರೂ ಕೈಮಿಲಾಯಿಸುತ್ತಾರೆ.

ಎರಡನೆಯದಾಗಿ, ಇವೇ ರಾಜಕೀಯ ಶಕ್ತಿಗಳು ಎಡರಂಗ ಸರಕಾರದ ಭೂಸುಧಾರಣೆ ಕ್ರಮಗಳನ್ನು ಹಿಂಸಾತ್ಮಕವಾಗಿ ವಿರೋಧಿಸಿ ಭೂಮಾಲಕರ ಪರ ನಿಂತಿದ್ದವು. ಈಗ ಬಡರೈತರ ಬಗ್ಗೆ ಅವರದ್ದು ಮೊಸಳೆ ಕಣ್ಣೀರು ಎಂಬುದಕ್ಕೆ ಗಹನವಾದ ವಿಶ್ಲೇಷಣೆಯೇನೂ ಬೇಕಿಲ್ಲ. ಸಿಂಗೂರ್ ನಲ್ಲಿ ಸ್ವಾಧೀನ ಪಡಿಸಿಕೊಂಡದ್ದು 1000 ಎಕ್ರೆಗಿಂತಲೂ ಕಡಿಮೆ, ಆದರೆ ಕೇವಲ ಕಳೆದ ಮೂರು ವರ್ಷಗಳಲ್ಲೇ ಪಶ್ಚಿಮ ಬಂಗಾಳದಲ್ಲಿ 30,000 ಎಕ್ರೆ ಭೂಮಿಯನ್ನು ಭೂಹೀನರಲ್ಲಿ ಹಂಚಲಾಗಿದೆ! ಸಿಂಗೂರಿನಲ್ಲಿ ಸ್ವಾಧೀನ ಪಡಿಸಿಕೊಂಡ 997.11 ಎಕ್ರೆ ಭೂಮಿಯ ಒಡೆಯರ ಸಂಖ್ಯೆ 13,000 ಕ್ಕೂ ಹೆಚ್ಚು. ಅಂದರೆ ಒಂದು ಎಕ್ರೆ ಭೂಮಿಯ ಮೇಲೆ 13 ಕುಟುಂಬಗಳು ಅವಲಂಬಿಸಿವೆ. ಹೀಗಿರುವಾಗ ತ್ವರಿತ ಕೈಗಾರಿಕೀಕರಣವಿಲ್ಲದೆ ಜನಗಳ ಜೀವನ ಮಟ್ಟ ಉತ್ತಮಗೊಳ್ಳುವುದಿಲ್ಲ, ರಾಜ್ಯ ಪ್ರಗತಿ ಕಾಣುವುದಿಲ್ಲ ಎಂಬುದು ಸ್ಪಷ್ಟ ಎನ್ನುತ್ತಾರೆ ಹಿರಿಯ ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚೂರಿಯವರು. ಹೀಗೆ ಸಿಂಗೂರ್ ನಲ್ಲಿ ವಾಸ್ತವವಾಗಿ ಕಾಣುತ್ತಿರುವುದು ಎಡಶಕ್ತಿಗಳಿಗೆ ಒಂದು ರಾಜಕೀಯ ಸವಾಲು, ಇದನ್ನು ರಾಜಕೀಯವಾಗಿಯೇ ಎದುರಿಸಲಾಗುವುದು

ದುಡಿಯುವ ವರ್ಗ ಹೋರಾಟದಿಂದ, ವರ್ಗ ಸಂಘರ್ಷದಿಂದ ಗಳಿಸಿಕೊಂಡದ್ದನ್ನು ಆಳುವವರ್ಗ ನುಂಗಿ ನೀರು ಕುಡಿಯಲು ಹಣದುಬ್ಬರ ಒಂದು ಸಾಧನ. ಹಾಗಾದರೆ ಹಣದುಬ್ಬರ ಎಂದರೇನು?

ಬದುಕನ್ನು ಕಿತ್ತು ತಿನ್ನುತ್ತಿರುವ ಹಣದುಬ್ಬರ

ಮುರುಳಿ


ಹಣದುಬ್ಬರ ಎನ್ನುವುದು ಬಂಡವಾಳಶಾಹಿ ಆರ್ಥಿಕದ ಒಂದು ಆರ್ಥಿಕ ಸಾಧನ. ಹಣದುಬ್ಬರ ಮೂಲಕವೇ ಬೆಳವಣಿಗೆ ಸಾಧಿಸಲು ಸಾಧ್ಯ ಎನ್ನುವ ಬಂಡವಾಳಿಗರು ಈ ಹಣದುಬ್ಬರದಿಂದ ದುಡಿವ ಜನರನ್ನು ಹಿಂಸಿಸುತ್ತಾರೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಇರುವ ದೇಶಗಳಲ್ಲೆಲ್ಲ ಜನಸಾಮಾನ್ಯರು ಈ ಹಿಂಡುವಿಕೆಯಿಂದ ನರಳುವಂತಾಗುತ್ತದೆ. ಹಣದುಬ್ಬರ ಸರ್ವವ್ಯಾಪಿ ಎನ್ನುವಂತೆ ಮೇಲುನೋಟಕ್ಕೆ ಕಂಡರೂ ಅದರ ಪರಿಣಾಮವನ್ನು ಬಂಡವಾಳಿಗರು ತಪ್ಪಿಸಿಕೊಳ್ಳುತ್ತಾರೆ. ಜನಸಾಮಾನ್ಯರು ಹಣದುಬ್ಬರದಿಂದ ನರಳುವಂತಾಗುತ್ತದೆ. ಇದಕ್ಕೆ ಪ್ರತಿಯಾಗಿ ಆರ್ಥಿಕ ಹಿಂಜರಿತ ಉಂಟಾದರೂ ಜನಸಾಮಾನ್ಯರು/ದುಡಿವ ಜನರೇ ನರಳುವಂತಾಗುತ್ತದೆ. ಹಲವು ಬಾರಿ ಎಷ್ಟೆಷ್ಟೋ ಹೋರಾಟಗಳು, ಭಾರಿ ವರ್ಗ ಸಂಘರ್ಷದಿಂದ ಕಾರ್ಮಿಕರು ಗಳಿಸಿದ್ದನ್ನು ಒಂದೇ ಬಾರಿಗೆ ಬೆಲೆ ಏರಿಕೆ ನುಂಗಿ ಹಾಕುತ್ತದೆ.

ಹಣದುಬ್ಬರ ಉಂಟಾಗುವುದು ಬೆಲೆಗಳು ಏರುವುದರಿಂದ ಹೇಳಲಾಗುತ್ತದೆ. ಇಲ್ಲಿ ಒಂದು ಸೂಕ್ಷ್ಮ ಇದೆ. ಸರಕುಗಳ/ಸೇವೆಗಳ ಬೆಲೆ ಏರುತ್ತದೆ ನಿಜ. ಆದರೆ ದುಡಿವ ಜನರ ಕೂಲಿ/ಸಂಬಳ ಹೆಚ್ಚುವುದಿಲ್ಲ. ಇದರಿಂದಾಗಿಯೇ ದುಡಿವ ಜನ ನರಳುವಂತಾಗುತ್ತದೆ.

ಭಾರತದ ಸಂದರ್ಭದಲ್ಲಿ ಹಣದುಬ್ಬರದ ಜೊತೆಗೆ ಕಪ್ಪು ಹಣವೂ ಪ್ರಮುಖ ಪಾತ್ರ ವಹಿಸುತ್ತದೆ. ಬಂಡವಾಳಿಗರ ಕಪ್ಪು ಹಣ ಹೊಂದಿದ್ದು ಸಮಾನಾಂತರ ಆರ್ಥಿಕ ನಡೆಸುತ್ತದೆ. ಹಣದುಬ್ಬರ ಹಿಡಿತಕ್ಕೆ ತರಲು ಹಣದ ಪೂರೈಕೆಯನ್ನೇ ಭಾರತೀಯ ರಿಸರ್ವ್ ಬ್ಯಾಂಕ್ ಕಡಿಮೆ ಮಾಡಿದರೆ ಆರ್ಥಿಕ ಈ ಹಣದ ಕೊರತೆ ಅನುಭವಿಸುತ್ತದೆ. ಬಿಳಿ ಆರ್ಥಿಕ ಇಂತಹ ಹಿಂಡುವಿಕೆ ಅನುಭವಿಸಿದರೆ ಕಪ್ಪು ಹಣವಿರುವವರು ಕಪ್ಪು ಹಣದ ಬಲದಿಂದ ವಿಜೃಂಭಿಸುತ್ತಾರೆ. ಹೀಗೆ ಹಣದುಬ್ಬರವನ್ನು ಹಿಡಿತಕ್ಕೆ ತರುವ ಕ್ರಮಗಳೂ ಜನ ಸಾಮಾನ್ಯರನ್ನು ಹಿಂಡುತ್ತವೆ.

ಈ ಕುರಿತು ಆರ್ಥಿಕ ವಲಯದಲ್ಲಿ ಹಲವು ರೀತಿಯ ವಾದ ವಿವಾದಗಳು, ವ್ಯಾಖ್ಯಾನಗಳಿವೆ. ಇಲ್ಲಿ ಅವನ್ನೆಲ್ಲಾ ವಿಸ್ತೃತವಾಗಿ ಚರ್ಚಿಸುತ್ತಿಲ್ಲ. ಆದರೆ ಜನಸಾಮಾನ್ಯನ ಬದುಕಿಗೆ ಯಾವ ರೀತಿ ಮಾರಕವಾಗಿದೆ ಎಂಬುದನ್ನು ತಿಳಿಯುವುದು ಮುಖ್ಯ.

ಹಣದುಬ್ಬರ ಅರ್ಥ ವ್ಯವಸ್ಥೆಯ ಪರಿಕಲ್ಪನೆಯಾಗಿದೆ. ಅಂದರೆ ಒಂದು ನಿರ್ದಿಷ್ಟ ಅವಧಿಯಲ್ಲಿ ದರಗಳಲ್ಲಿ ಕಾಣುವ ಏರಿಕೆ ಪ್ರಮಾಣವೇ ಹಣದುಬ್ಬರ. ಕೆಲವು ಸರಕುಗಳು ಮತ್ತು ಸೇವೆಗಳ ದರಗಳೂ ಹೆಚ್ಚಾಗುತ್ತವೆ ಎಂತಲೂ ಹೇಳಬಹುದು. ವ್ಯವಸ್ಥೆಯಲ್ಲಿ ನಗದು ಚಲಾವಣೆ ಅಥವಾ ಬೇಡಿಕೆ ಹೆಚ್ಚಾದಾಗ ಹಣದುಬ್ಬರ ಸೃಷ್ಟಿಯಾಗುತ್ತದೆ. ಮತ್ತೊಮ್ಮೆ ಉತ್ಪನ್ನ ಸರಕುಗಳ ಸರಬರಾಜಿನಲ್ಲಾಗುವ ಕೊರತೆಯಿಂದಲೂ ಉಂಟಾಗುತ್ತದೆ. ಹಣದುಬ್ಬರ ಏರಿಕೆಯಲ್ಲಿ ನಗದು ಸರಬರಾಜಾಗುವ ಪ್ರಮಾಣವೇ ಪ್ರಮುಖ ಕಾರಣ ಎಂದು ‘ಮಾನೆಟೇರಿಯನ್ಸ್’ ವಾದಿಸಿದರೆ, ನಗದು ಸರಬರಾಜಿಗಿಂತಲೂ ಬೇಡಿಕೆಯಲ್ಲಿ ಉಂಟಾಗುವ ಏರಿಕೆ ಕಾರಣ ಎಂಬುದು ‘ಕೆನ್‌ಸಿಯನ್ಸ್’ ವಾದವಾಗಿದೆ. ಬಹುತೇಕ ಆರ್ಥಿಕ ತಜ್ಞರು ಎರಡು



ಗುಂಪುಗಳಾಗಿ ವಿಂಗಡನೆಯಾಗುತ್ತಾರೆ. ಒಂದನೆಯದು ಗುಣಾತ್ಮಕ ಹಣದುಬ್ಬರ ಸಿದ್ಧಾಂತ ಮತ್ತು ಎರಡನೆಯದು ಪರಿಮಾಣಾತ್ಮಕ ಹಣದುಬ್ಬರ ಸಿದ್ಧಾಂತ. ಮಾರಾಟಗಾರನು ವಸ್ತುವೊಂದನ್ನು ಮಾರಾಟ ಮಾಡುವಾಗ ತಾನು ಪಡೆಯುವ ಹಣಕ್ಕೆ ಮುಂದೊಂದು ದಿನ ಅಂತದೇ ವಸ್ತು ಖರೀದಿಸಲು ಸಾಧ್ಯವೇ ಎಂಬುದರ ಮೇಲೆ ಗುಣಾತ್ಮಕ ಹಣದುಬ್ಬರ ಸಿದ್ದಾಂತ ನಿಂತಿದೆ. ನಗದು ಸರಬರಾಜು, ಅದರ ವೇಗ ಮತ್ತು ವಿನಿಮಯ ದರಗಳ ಮೇಲೆ ಪರಿಮಾಣಾತ್ಮಕ ಹಣದುಬ್ಬರ ಸಿದ್ಧಾಂತ ನಿಂತಿದೆ. ಆಡಂಸ್ಮಿತ್ ಅವರು ಹಣಕ್ಕೆ ಪರಿಮಾಣಾತ್ಮಕ ಹಣದುಬ್ಬರ ಸಿದ್ದಾಂತವನ್ನು ಮತ್ತು ಉತ್ಪಾದನೆಗೆ ಗುಣಾತ್ಮಕ ಹಣದುಬ್ಬರ ಸಿದ್ಧಾಂತವನ್ನು ಪ್ರಸ್ತಾಪಿಸುತ್ತಾರೆ.

ಹಣದುಬ್ಬರ ಹೆಚ್ಚಾಗುವುದಕ್ಕೆ ಸಂಬಂಧಿಸಿದಂತೆ ಎರಡು ಪ್ರಮುಖ ಕಾರಣಗಳನ್ನು ಮುಂದಿಡಲಾಗುತ್ತದೆ. 1. ಹೆಚ್ಚಾಗುವ ಬೇಡಿಕೆಯಿಂದ ಹಣದುಬ್ಬರ ಹೆಚ್ಚಾಗುವುದು. ಅಂದರೆ ಉತ್ಪಾದನೆ ಪ್ರಮಾಣಕ್ಕಿಂತಲೂ ಬೇಡಿಕೆ ಹೆಚ್ಚಾದಾಗ ಸೃಷ್ಟಿಯಾಗುವ ಹಣದುಬ್ಬರವಾಗಿದೆ. 2. ಬೆಲೆ ಏರಿಕೆಯಿಂದ ಹೆಚ್ಚಾಗುವ ಹಣದುಬ್ಬರವಾಗಿದೆ. ಅಂದರೆ ಸಮರ್ಪಕವಾಗಿ ಉತ್ಪಾದಿಸಿದ್ದರೂ ಸರಕುಗಳನ್ನು ನಿಗದಿತ ಸಮಯಕ್ಕೆ, ನಿಗದಿತ ಸ್ಥಳಕ್ಕೆ ಸರಬರಾಜು ಮಾಡಲು ಸಾಧ್ಯವಿಲ್ಲದಿದ್ದಾಗ ಬೆಲೆ ಏರಿಕೆ ಕಾಣುವ ಮೂಲಕ ಹೆಚ್ಚಾಗುವ ಹಣದುಬ್ಬರವಾಗಿದೆ. 1970ರಲ್ಲಿ ಒಪೆಕ್ (ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಒಕ್ಕೂಟ) ಸ್ಥಾಪನೆಯಾದಾಗ ತೈಲ ಸರಬರಾಜನ್ನು ಸಮರ್ಪಕವಾಗಿ ಮಾಡದಿದ್ದಾಗ ಇಂತಹ ಹಣದುಬ್ಬರ ಸೃಷ್ಟಿಯಾಗಿತ್ತು.

ಹಣದುಬ್ಬರ ಲೆಕ್ಕಹೇಗೆ?

ಒಟ್ಟಾರೆಯಾಗಿ ಒಂದು ನಿಗದಿತ ಅವಧಿಯಲ್ಲಿ ಎಲ್ಲ ವಸ್ತುಗಳ ದರಗಳಲ್ಲಿ ಕಾಣುವ ಹೆಚ್ಚಳವನ್ನು ಹಣದುಬ್ಬರ ಎನ್ನಲಾಗಿದೆ. ವಿದೇಶಗಳಲ್ಲಿ ಹಣದುಬ್ಬರ ಪ್ರಮಾಣವನ್ನು ಗ್ರಾಹಕರ ದರ ಸೂಚಿ (ಸಿಪಿಐ)ಗೆ ಅನುಗುಣವಾಗಿ ಲೆಕ್ಕಹಾಕಿದರೆ ಭಾರತದಲ್ಲಿ ಸಗಟು ಮಾರಾಟ ದರ ಸೂಚಿ(ಡಬ್ಲ್ಯೂಪಿಐ) ಆಧಾರದಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ. ಭಾರತದಲ್ಲಿ ಸಗಟು ಮಾರಾಟ ದರಕ್ಕೂ ಗ್ರಾಹಕರು ಚಿಲ್ಲರೆಯಾಗಿ ಖರೀದಿಸುವ ದರಕ್ಕೂ ಭಾರಿ ವ್ಯತ್ಯಾಸವಿರುತ್ತದೆ. ಅಂದರೆ ನಮ್ಮ ಸರ್ಕಾರಗಳು ಈಗ ನೀಡುತ್ತಿರುವ ಡಬ್ಲ್ಯೂಪಿಐ ಆಧಾರಿತ ಬೆಲೆಗಳಿಗೂ, ನಾವು ಖರೀದಿಸುವ ಬೆಲೆಗಳಿಗೂ ಸಾಕಷ್ಟು ವ್ಯತ್ಯಾಸವಿದೆ. ವಾಸ್ತವವಾಗಿ ಸರ್ಕಾರ ನೀಡುವ ಅಂಕಿ ಅಂಶಗಳ ಪ್ರಕಾರ ವಸ್ತುವೊಂದರ ದರ ಹತ್ತು ರೂಪಾಯಿ ಇದ್ದರೆ ಗ್ರಾಹಕ ಖರೀದಿಸುವ ದರ ಅದಕ್ಕಿಂತಲೂ ಹೆಚ್ಚಾಗಿರುತ್ತದೆ.

ಭಾರತದಲ್ಲಿ 1993-94 ರ ಆಧಾರದಲ್ಲಿ ಹಣದುಬ್ಬರವನ್ನು ಲೆಕ್ಕ ಮಾಡಲಾಗುತ್ತದೆ. ಆಗ ಹಣದುಬ್ಬರ ಪ್ರಮಾಣ ಶೇ.4 ರ ಆಸುಪಾಸಿನಲ್ಲಿತ್ತು. 2008ರ ಜುಲೈನಲ್ಲಿ ಈ ಪ್ರಮಾಣ ಶೇ.12.01 ಕ್ಕೆ ತಲುಪಿದೆ. ಅಂದರೆ ದರಗಳು ಶೇ.12ರಷ್ಟು ಏರಿಕೆ ಕಂಡಿವೆ. ಹಣದುಬ್ಬರ ಯಾವ ಪ್ರಮಾಣದಲ್ಲಿ ಏರಿಕೆ ಕಾಣುತ್ತದೆಯೋ, ಹಣದ ಮೌಲ್ಯ ಅಷ್ಟೇ ಪ್ರಮಾಣದಲ್ಲಿ ಕುಸಿತ ಕಾಣುತ್ತದೆ.

ಭಾರತದಲ್ಲಿ ಡಬ್ಲ್ಯೂಪಿಐ ವ್ಯಾಪ್ತಿಗೆ 435 ಉತ್ಪನ್ನಗಳ ಮೌಲ್ಯ ಶೇ.22.0253, ಇಂಧನ, ವಿದ್ಯುತ್, ಬೆಳಕು ಮತ್ತು ಲ್ಯೂಬ್ರಿಕೆಂಟ್ಸ್ ಮೌಲ್ಯ ಶೇ.14.2262, ತಯಾರಿಕಾ ಸರಕುಗಳ ಮೌಲ್ಯ ಶೇ.63, 7485 ರಷ್ಟಿದೆ. 435 ಉತ್ಪನ್ನಗಳನ್ನು ಈ ಮೂರು ವಿಭಾಗಗಳಿಗೆ ವಿಂಗಡಿಸಲಾಗುವುದು. ಹಣ್ಣು, ತರಕಾರಿ, ಆಹಾರ ಧಾನ್ಯಗಳು, ಬೇಳೆ ಕಾಳುಗಳು, ಖಾದ್ಯ ತೈಲ ಸೇರಿದಂತೆ ಎಲ್ಲ ಅಗತ್ಯ ಉತ್ಪನ್ನಗಳು ದಿನಬಳಕೆ ಉತ್ಪನ್ನಗಳ ವ್ಯಾಪ್ತಿಗೆ ಬರುತ್ತವೆ.

ಪುಟ 13ಕ್ಕೆ

ಸುಂಕದವರ ಮುಂದೆ ಸುಖದುಃಖ ಹೇಳಿದಂತೆ

ಹಣದುಬ್ಬರ ಬೆಲೆ ಏರಿಕೆ ಬಡವರನ್ನು ದುಡಿಯುವ ಜನರನ್ನು ಕಿತ್ತು ತಿನ್ನುತ್ತಿದೆ. ಹಣದುಬ್ಬರದ ಪ್ರಮಾಣ ಶೇ.12 ಕ್ಕಿಂತ ಕಡಿಮೆ ಆಗಲೇ ಇಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಬ್ಯಾರಲ್‌ಗೆ 145 ಡಾಲರ್‌ಗೆ ಏರಿದದ್ದು ಇದೀಗ ಮತ್ತೆ 100 ಡಾಲರ್‌ಗಿಂತ ಕಡಿಮೆಯಾಗಿದ್ದರೂ ಭಾರತದಲ್ಲಿ ತೀವ್ರವಾಗಿ ಏರಿಸಲಾಗಿದ್ದ ಪೆಟ್ರೋಲ್, ಡಿಸೇಲ್ ಅಡಿಗೆ ಅನಿಲ ಬೆಲೆಗಳನ್ನು ಇಳಿಸಲು ಸರ್ಕಾರ ಮನಸ್ಸು ಮಾಡುತ್ತಲೇ ಇಲ್ಲ. ಈ ವರ್ಷ ಸರ್ಕಾರಿ ಸಂಸ್ಥೆಗಳು ರೈತರಿಂದ ಖರೀದಿಸುವ (ಲೆವಿ ಧಾನ್ಯ) ಆಹಾರ ಉತ್ಪನ್ನಗಳ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದು ಒಳ್ಳೆಯ ಬೆಳವಣಿಗೆ. ಆದರೆ ಇಷ್ಟಾದರೂ ರಾಜ್ಯ ಸರ್ಕಾರಗಳಿಗೆ ಆಹಾರಧಾನ್ಯ ಕೋಟಾ ಕಡಿತ ಮಾಡಿರುವ ಕೇಂದ್ರ ಸರ್ಕಾರದ ಕ್ರಮ ವಾಪಸ್ಸಾಗಲಿಲ್ಲ. ಅಂದರೆ ಪಡಿತರ ವ್ಯವಸ್ಥೆ ಬಲಪಡಿಸುವ ಕ್ರಮಕ್ಕೆ ಕೇಂದ್ರ ಸರ್ಕಾರದ ಬೆಂಬಲ ಇಲ್ಲ.

ಇದೆಲ್ಲಾ ಏನನ್ನು ತೋರಿಸುತ್ತದೆ. ಜನರ ಬದುಕು ಏನಾದರೂ ಆಗಲಿ ಅದು ಯುಪಿಎ ಸರ್ಕಾರದ ಕಾಳಜಿಯ ವಿಷಯ ಅಲ್ಲವೇ ಅಲ್ಲ. ಅದರ ಆದ್ಯತೆಯೇ ಬೇರೆ. ಪೆಟ್ರೋಲ್, ಡಿಸೇಲ್, ಅಡುಗೆ ಅನಿಲದ ಬೆಲೆ ಇಳಿಸಿ ಅಂತ ಜನ ಕೇಳಿದರೆ ಕೇಂದ್ರ ಸರ್ಕಾರ ಏನು ಮಾಡಿದೆ ಗೊತ್ತೆ. ವಿಮಾನಕ್ಕೆ ಬಳಸಲಾಗುವ ಬಿಳಿ ಪೆಟ್ರೋಲ್ (ಎಟಿಎಫ್) ಬೆಲೆಯನ್ನು ಇಳಿಸಲು ತೈಲ ಮಾರಾಟ ಸಂಸ್ಥೆಗಳಿಗೆ ಅವಕಾಶ ನೀಡಿದೆ.

ಇದು ಸಾಲದು ಅಂತ ವಿಶೇಷ ಆರ್ಥಿಕ ವಲಯಗಳಲ್ಲಿ ಕೇವಲ ರಿಲೆಯನ್ಸ್‌ನಂತಹ ಖಾಸಗಿ ತೈಲ ಕಂಪನಿಗೆ ಮಾತ್ರ ಅವಕಾಶ ನೀಡುತ್ತಾ, ರಿಲೆಯನ್ಸ್ ಇಲ್ಲಿ ಉತ್ಪಾದಿಸಿ ಹೊರ ದೇಶಗಳಿಗೆ ರಫ್ತು ಮಾಡುವ ಪೆಟ್ರೋಲಿಯಂ ಉತ್ಪನ್ನಗಳಿಗೆ ತೆರಿಗೆ ಸುಂಕ ವಿನಾಯಿತಿ ನೀಡುತ್ತಿದೆ. ದೇಶದ ಜನ ಏನಾದರಾಗಲಿ ರಿಲೆಯನ್ಸ್ ಕಂಪನಿಗೆ, ವಾಯುಯಾನ ಸಂಸ್ಥೆಗಳು, ವಿಮಾನ ಪ್ರಯಾಣಿಕರಿಗೆ ಸಂತಸವಾದರೆ ಸರಿ, ಬಡವರು, ರೈತ ಕಾರ್ಮಿಕರ ದುಃಖ ಕಟ್ಟಿಕೊಂಡು ಅವರಿಗೆ ಏನಾಗಬೇಕಿದೆ.

ಒಲಂಪಿಕ್ಸ್‌ನಲ್ಲಿ ಚಿನ್ನದ ಸೂರೆ

ಜನತಾ ಪ್ರಜಾಪ್ರಭುತ್ವ ಬುನಾದಿಯ ಮೇಲೆ ಕಟ್ಟಿದ ಕ್ರೀಡಾ ಪ್ರಜಾಪ್ರಭುತ್ವದ ಸಾಧನೆ

ಚೀನಾ ಕ್ರೀಡೆಯಲ್ಲಿ ಮಾಡಿದ ಅಪಾರ ಸಾಧನೆಯ ಆಧಾರ ಏನು ಎಂದು ಜಗತ್ತಿಗೆ ತಿಳಿಯಲು 'ಅವರು' ಬಿಟ್ಟೇ ಇಲ್ಲ.

ಜಿ.ಎನ್.ನಾಗರಾಜ್

ಬೆಳಗ್ಗೆ ನಸುಕಿನ ಕಾಲ, ತಂಗಾಳಿ ಬೀಸುತ್ತಿದೆ. ಪಾರ್ಕ್‌ಗಳಲ್ಲಿ ಉದ್ಯಾನವನ ಗಳಲ್ಲಿ ಆಟದ ಬಯಲುಗಳಲ್ಲಿ ಹಿರಿಯ, ಕಿರಿಯರೆನ್ನದೆ ಹೆಣ್ಣು ಗಂಡೆನ್ನದೆ ಜನ ಸೇರಿದ್ದಾರೆ. ಅಲ್ಲಲ್ಲಿ ಧ್ವನಿವರ್ಧಕಗಳು, ಕೆಲವರ ಕೈಯಲ್ಲಿ ಟ್ರಾನ್ಸಿಸ್ಟರ್‌ಗಳು, ಧ್ವನಿವರ್ಧಕಗಳಿಂದ, ರೇಡಿಯೋಗಳಿಂದ ಸಂಗೀತ ಹೊರ ಹೊಮ್ಮಿತ್ತು. ಅದಕ್ಕಾಗಿಯೇ ಕಾಯುತ್ತಿದ್ದಂತೆ ಗುಂಪುಗುಂಪಾಗಿ ನಿಂತ ಜನರೆಲ್ಲಾ ಸಂಗೀತದ ಲಯಕ್ಕೆ ಅನುಗುಣವಾಗಿ ನರ್ತನ ಮಾಡುತ್ತಿದ್ದಾರೆಯೋ ಎನ್ನುವಂತೆ ಕೈಕಾಲು ಆಡಿಸಲಾರಂಭಿಸಿದರು. ಬಯಲಿನ ತುಂಬಾ ಇದೇ ನರ್ತನ. ಅದು ನರ್ತನವೇ! ಹತ್ತಿರದಿಂದ ನೋಡಿದಾಗ ಗೊತ್ತಾಗುತ್ತದೆ ಅದು ವ್ಯಾಯಾಮ ಎಂದು.


ಇದು ಚೀನಾದ ಎಲ್ಲ ನಗರ ಪಟ್ಟಣಗಳಲ್ಲಿ ಗ್ರಾಮಗಳಲ್ಲಿ ಬೆಳಗ್ಗೆ ನಿಶ್ಚಿತ ಹೊತ್ತಿಗೆ ಕಾಣುವ ದೃಶ್ಯ. ಆಟದ ಮೈದಾನ, ಪಾರ್ಕ್‌ಗಳಲ್ಲಿ ಮಾತ್ರವೇ ಅಲ್ಲ-ಕೈಗಾರಿಕೆಗಳಲ್ಲಿ, ವಿಶ್ವವಿದ್ಯಾನಿಲಯ ಗಳಲ್ಲಿ ಶಾಲಾ- ಕಾಲೇಜುಗಳಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಕೂಡ ಅದೇ ಸಮಯಕ್ಕೆ ಅದೇ ದೃಶ್ಯ ಪಾರ್ಕ್, ಮೈದಾನಗಳಿಗೆ ಹೋಗದಿದ್ದವರೂ ಮನೆಗಳಲ್ಲಿಯೇ ಅದೇ ಸಮಯ ಅದೇ ವ್ಯಾಯಾಮ.

ವಿದೇಶಿ ಪ್ರವಾಸಿಗಳು ಇದೇನೆಂದು ಕುತೂಹಲಗೊಂಡು ನೋಡುತ್ತಿದ್ದಂತೆಯೇ ಈ ವ್ಯಾಯಾಮ ನರ್ತನ ಅಂತ್ಯ. ಕೇವಲ ಹತ್ತು ನಿಮಿಷದಲ್ಲಿ.

ಮತ್ತೆ ಅದೇ ದೃಶ್ಯ ಸಂಜೆಯಲ್ಲಿ, ಕೋಟಿ ಕೋಟಿ ಗಟ್ಟಲೇ ಜನತೆ ಬಾಲಕರು, ವೃದ್ದರು, ಯುವಜನರು, ವಯಸ್ಕರು, ವಿದ್ಯಾರ್ಥಿಗಳು ಕಾರ್ಮಿಕರು, ನೌಕರರು, ವ್ಯಾಪಾರಿಗಳು ಹೆಣ್ಣು ಗಂಡು ಬೇಧವಿಲ್ಲದೆ ಕೋಟಿಗಟ್ಟಲೆ ಜನತೆ ದಿನಕ್ಕೆ ಎರಡು ಬಾರಿ ಕೇವಲ ಹತ್ತು ನಿಮಿಷ ವ್ಯಾಯಾಮ, ಸಾಮೂಹಿಕ ವ್ಯಾಯಾಮ. ವೈದ್ಯರು, ದೈಹಿಕ ಶಿಕ್ಷಣ ತಜ್ಞರು ರೂಪಿಸಿದ ವ್ಯಾಯಾಮಗಳು. ಚೀನಾ ಕ್ರಾಂತಿಯ ನಂತರದ ಎರಡೇ ವರ್ಷಗಳಲ್ಲಿ (1951ರಲ್ಲಿ) ಇಡೀ ದೇಶದಲ್ಲಿ ಅನುಸರಿಸಲಾರಂಭಿಸಿದ ವ್ಯಾಯಾಮಗಳು ಮಕ್ಕಳಿಗೆ 5 ರೀತಿ, ವಯಸ್ಕರಿಗೆ ಆರು ರೀತಿ, ಸರಳವಾದ ವ್ಯಾಯಾಮಗಳು ಇಡೀ ದೇಶದಲ್ಲಿ ಎಲ್ಲಾ ಟಿ.ವಿ. ರೇಡಿಯೋಗಳಿಂದ ವ್ಯಾಯಾಮ ಸಂಗೀತದ ಪ್ರಸಾರ. ಎಲ್ಲರೂ ವ್ಯಾಯಾಮದಲ್ಲಿ ತಲ್ಲೀನ. ಉಕ್ಕಿನ ಕಾರ್ಖಾನೆ, ಕಲ್ಲಿದ್ದಲು ಗಣಿ, ಜವಳೀ ಕಾರ್ಮಿಕರಿಗೆ ವಿಶೇಷ ವ್ಯಾಯಾಮಗಳು. ಇದನ್ನು ನಮ್ಮ ದೇಶದ ಅಥವಾ ಯಾವುದೇ ಬಂಡವಾಳಶಾಹಿ ದೇಶದ ಪರಿಸ್ಥಿತಿಗೆ ಹೋಲಿಸಿ, ವ್ಯಾಯಾಮ ಮಾಡಲಿಚ್ಛಿಸುವವರೇ ಕಡಿಮೆ. ವ್ಯಾಯಾಮ ಮಾಡಬಯಸುವವರಿಗೆ ಇತರರ ಮುಂದೆ ವ್ಯಾಯಾಮ ಮಾಡಲು ಸಂಕೋಚ, ಮತ್ತು ಸರಿಯಾದ ಸಲಹೆ, ಮಾರ್ಗದರ್ಶಗಳಿಲ್ಲ, ಟಿ.ವಿ.ಗಳಲ್ಲಿ ಒಂದೊಂದು ರೀತಿಯ ವ್ಯಾಯಾಮಗಳ ಬಗ್ಗೆ, ತಮ್ಮ ವಿಶೇಷವನ್ನು ತೋರಿಸಿಕೊಳ್ಳಲು ಕಠಿಣವಾದ, ನವೀನವಾದ ವ್ಯಾಯಾಮಗಳು, ಎಲ್ಲರೂ ಸುಲಭವಾಗಿ ಕಲಿಯಲು, ಸರಳವಾಗಿ ದಿನನಿತ್ಯ ಅನುಸರಿಸಲು ಆಗದ ವ್ಯಾಯಾಮಗಳು. ಹೀಗಾಗಿ ಇತ್ತೀಚೆಗೆ ವ್ಯಾಯಾಮ ಮಾಡುವ ಪ್ರಜ್ಞೆ ಹೆಚ್ಚುತ್ತಿದೆ ಎಂದರೂ ಬಹಳ ಬಹಳ ಕಡಿಮೆ. ಶಾಲೆಗಳ ವ್ಯಾಯಾಮ ಹೊರತುಪಡಿಸಿದರೆ ಶೇ.1 ರಷ್ಟು ಕೂಡ ಇಲ್ಲ.

ಹೀಗೆ ದೇಶದ ಜನರಲ್ಲಿ ಶೇ.40-50 ರಷ್ಟು ಅಂದರೆ 50-60 ಕೋಟಿ ಜನರು ಸರಳವಾದ ವ್ಯಾಯಾಮದಲ್ಲಿ ತೊಡಗುವುದರ ಮೂಲಕ ಚೀನಾದ ಕ್ರೀಡಾ ಸಂಸ್ಕೃತಿ ಆರಂಭವಾಗುತ್ತದೆ.

ರಾಷ್ಟ್ರೀಯ ದೈಹಿಕ ಮಾನದಂಡಗಳು: ಹೀಗೆ ಕೋಟಿಗಟ್ಟಲೇ ಜನರು ಸರಳ ದೈಹಿಕ ವ್ಯಾಯಾಮಗಳಲ್ಲಿ ಪಾಲ್ಗೊಳ್ಳುವುದು ಮಾತ್ರವೇ ಅಲ್ಲದೆ ರಾಷ್ಟ್ರೀಯ ದೈಹಿಕ ಮಾನದಂಡಗಳ ನಿರೂಪಣೆ. ವಿವಿಧ ವಯಸ್ಸಿನವರಿಗೆ ನಿರ್ದಿಷ್ಟ ಮಾನದಂಡಗಳು 10-12 ವರ್ಷದ, 13-15 ವರ್ಷ, 16-17 ವರ್ಷ, 18-30 ವರ್ಷ ವಯಸ್ಸಿನವರಿಗೆ ಈ ರೀತಿ ಮಾನದಂಡಗಳಲ್ಲಿ ಪಾಸಾದವರಿಗೆ ಒಂದು ಪದಕ ಮತ್ತು ಸರ್ಟಿಫಿಕೇಟ್! ಹೀಗೆ ಇಡೀ ದೇಶದ ಎಲ್ಲರೂ ದೈಹಿಕ ದಾರ್ಢ್ಯತೆ ಪಡೆಯಲು ಉತ್ತೇಜನ ಮತ್ತು ಸಾಮಾಜಿಕ ಪರಿಸರದ ನಿರ್ಮಾಣ. ಈ ಮಾನದಂಡಗಳನ್ನು ಆಗಾಗ್ಗೆ ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಲಾಗುತ್ತಿದೆ. ಪುನರೂಪಿಸಲಾಗುತ್ತದೆ ಮತ್ತು ದಶಕದಿಂದ ದಶಕಕ್ಕೆ ಉತ್ತಮಪಡಿಸುತ್ತಾ ಹೋಗುವ ಮಾನದಂಡಗಳನ್ನು ಆಗಾಗ್ಗೆ ರೂಪಿಸಲಾಗುತ್ತದೆ. ಈ ಮಾನದಂಡಗಳಲ್ಲಿ ಪದಕ ಪಡೆದವರಿಗೆ ಮೇಲಿನ ಶಿಕ್ಷಣಕ್ಕೆ ಹೆಚ್ಚು ಅವಕಾಶ. ಪ್ರೌಢಶಾಲೆಯಿಂದ ಹೊರಬರುವ ಎಲ್ಲರೂ ಈ ಮಾನದಂಡಗಳನ್ನು ಪಾಸಾಗಿರಲು ಪ್ರೋತ್ಸಾಹ.



ಶಾಲೆಗಳಲ್ಲಿ ವ್ಯವಸ್ಥಿತ ಕ್ರೀಡಾ ತರಬೇತಿ



ಶಿಕ್ಷಣ ಎಂದರೆ ಬರಿ ಪುಸ್ತಕವಲ್ಲ, ಕ್ರೀಡೆ,ಉಲ್ಲಾಸಮಯ ಕಲಿಕೆ

ಶಿಶುಗಳಿಗೆ ವ್ಯಾಯಾಮ: ಶಾಲಾ ಪೂರ್ವದ ಮಕ್ಕಳಿಗೆ ಅವರ ಬಾಲವಾಡಿ ಗಳಲ್ಲಿ ವ್ಯಾಯಾಮಗಳು, ಮತ್ತು ಕ್ರೀಡೆಗಳು, ನಗರ, ಪಟ್ಟಣಗಳ ಪೌರಾಡಳಿತ ಸಂಸ್ಥೆಗಳಿಂದ ಶಿಶು ಕ್ರೀಡಾ ಉತ್ಸವಗಳು ಪ್ರದರ್ಶನಗಳು.

ಶಾಲಾ ಕಾಲೇಜುಗಳಲ್ಲಿ

ಭಾರತದ ಹಾಗೆಯೇ ನಿರ್ದಿಷ್ಟ ತರಗತಿಗಳಲ್ಲಿ ದೈಹಿಕ ಶಿಕ್ಷಣ ಕ್ರೀಡೆಗಳನ್ನು ಕಲಿಯುವಂತೆಯೇ, ಚೀನಾದ ಇಡೀ ಜನಸಮುದಾಯದ ಭಾಗವಾಗಿ ದಿನಕ್ಕೆರಡು ಬಾರಿ 10 ನಿಮಿಷಗಳ ಕಾಲ ಸಂಗೀತದ ಜೊತೆಗೆ ವ್ಯಾಯಾಮ ಮಾಡುತ್ತಾರೆ. ಜೊತೆಗೆ ಕಣ್ಣಿನ ವ್ಯಾಯಾಮವನ್ನು ಮಾಡುತ್ತಾರೆ. ಕೆಲವು ಹಂತಗಳಲ್ಲಿ ಕ್ರೀಡೆ ಮತ್ತು ದೈಹಿಕ ಶಿಕ್ಷಣದಲ್ಲಿ ಪಾಸು ಮಾಡುವುದು ಕೂಡ ಇತರ ವಿಷಯಗಳಂತೆ ಕಡ್ಡಾಯ. ಬರಿ ಪಾಸು ಮಾಡುವುದೇ ಅಲ್ಲ...... ಮೂರು ವಿಭಾಗಗಳಲ್ಲಿ 'ಉತ್ತಮ' ಎಂಬ ದರ್ಜೆಯನ್ನು ಪಡೆದವರಿಗೆ ಒಟ್ಟಾರೆ "ಉತ್ತಮ" ವಿದ್ಯಾರ್ಥಿಗಳು ಎಂದು ಪರಿಗಣಿಸುತ್ತಾರೆ. ಸೈದ್ಧಾಂತಿಕವಾಗಿರುತ್ತವೆ. ಪಠ್ಯ ಶಿಕ್ಷಣದಲ್ಲಿ ಉತ್ತಮ ಹಾಗೂ ದೈಹಿಕವಾಗಿ ಉತ್ತಮ ದರ್ಜೆಯನ್ನು ಪಡೆದಿರಬೇಕು. ನಮ್ಮಲ್ಲಿನಂತೆ ಕೇವಲ ಪಠ್ಯ ಶಿಕ್ಷಣದಲ್ಲಿ 'ಉತ್ತಮ' ಅಂಕಗಳನ್ನು ಪಡೆದರಷ್ಟೇ ಸಾಲದು. ಮುಂದಿನ ಉನ್ನತ ಹಂತಗಳ ಶಿಕ್ಷಣಕ್ಕಾಗಿ ಪ್ರವೇಶ ಪಡೆಯುವಾಗ ಇಬ್ಬರು ವಿದ್ಯಾರ್ಥಿಗಳು ಪಠ್ಯ ಕ್ರಮದ ಶಿಕ್ಷಣದಲ್ಲಿ ಒಂದೇ ಅಂಕ ಪಡೆದಿದ್ದರೆ ದೈಹಿಕ ಕ್ಷಣದಲ್ಲಿ ಹೆಚ್ಚು ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು: ಇನ್ನು ಪ್ರೌಢ ಶಾಲಾ ಹಂತದ ವಿದ್ಯಾರ್ಥಿಗಳಲ್ಲಿಯೂ ಕೂಡ ಆ ವಯಸ್ಸಿಗೆ ತಕ್ಕನಾದ ರಾಷ್ಟ್ರೀಯ ದೈಹಿಕ ಮಾನದಂಡಗಳ ಮಟ್ಟವನ್ನು ಮುಟ್ಟಿರಬೇಕೆಂಬ ಗುರಿಯನ್ನು ಸಾಧಿಸಲಾಗುತ್ತಿದೆ.

ಇವುಗಳ ಜೊತೆಗೆ ಚೀನಾದ ಮತ್ತೊಂದು ವಿಶೇಷವೆಂದರೆ ವಿವಿಧ ರಾಜ್ಯಗಳು ಕಾರ್ಪೊರೇಷನ್‌ಗಳು ಕೆಲವು ಶಾಲೆ-ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳನ್ನು ನಿರ್ದಿಷ್ಟವಾಗಿ ಕೆಲವು ಕ್ರೀಡೆಗಳಲ್ಲಿ ವಿಶೇಷ ತರಬೇತಿ ಪಡೆಯಲು ಆರಿಸಲಾಗುತ್ತದೆ. ಇಂತಹ ಶಾಲೆ-ಕಾಲೇಜುಗಳೂ ಆ ಕ್ರೀಡೆಗಳ ತೊಟ್ಟಿಲು ಎಂದು ಪರಿಗಣಿಸಿ ವಿಶೇಷ ಗಮನ ಹಾಗೂ ಹಣವನ್ನು ಆಯಾ ಕಾರ್ಪೊರೇಷನ್ ಹಾಗೂ ಪೌರಾಡಳಿತ ಸಂಸ್ಥೆಗಳು ಮಾಡುತ್ತವೆ.

ಶಾಂಘೈ ನಗರವೊಂದರಲ್ಲಿಯೇ 123 ಶಾಲೆಗಳಿಂದ 14,000 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಶಾಂಘೈ ಸುತ್ತಲಿನ ಹಳ್ಳಿಗಳ 301 ಶಾಲೆಗಳನ್ನು ಹೀಗೆ ಆಯ್ಕೆ ಮಾಡಲಾಗಿದೆ. ಡಾಲಿಯಾನ್ ಎಂಬ ನಗರದಲ್ಲಿರುವ 500ರಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 490 ಶಾಲೆಗಳಲ್ಲಿ ಪುಟ್‌ಬಾಲ್ ವಿಶೇಷ ಕ್ರೀಡೆ. ರಾಷ್ಟ್ರಮಟ್ಟದಲ್ಲಿರುವ 16ಎ ದರ್ಜೆಯ ತಂಡಗಳಲ್ಲಿರುವ ಆಟಗಾರರಲ್ಲಿ ಐದು ಜನರಲ್ಲಿ ಒಬ್ಬರು ಈ ನಗರದವರೇ ಆಗಿದ್ದಾರೆ. ಹಾಗೆಯೇ ಕೆಲವು ಪ್ರದೇಶಗಳ ಕೆಲವು ಶಾಲೆಗಳು 'ಓಟ' ಮೊದಲಾದ ಸ್ಪರ್ಧೆಗಳ ಬಗ್ಗೆ ವಿಶೇಷ ಗಮನ ನೀಡುತ್ತಾರೆ.

ಕಾರ್ಮಿಕರ, ರೈತರ ಕ್ರೀಡಾಕೂಟಗಳು

ಕಾರಖಾನೆಗಳಲ್ಲಿ ವಿಶೇಷ ವ್ಯಾಯಾಮಗಳ ಜೊತೆಗೆ ವಿವಿಧ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಅಖಿಲ ಚೀನಾ ಕಾರ್ಮಿಕ ಸಂಘಗಳ ಒಕ್ಕೂಟವು ವಿವಿಧ ಹಂತ ಹಾಗೂ ಮಟ್ಟಗಳಲ್ಲಿ ಕ್ರೀಡಾಕೂಟಗಳನ್ನು ಏರ್ಪಡಿಸುತ್ತದೆ. ಇಂತಹ ಕ್ರೀಡಾ ಕೂಟಗಳು ಕೇವಲ ಹವ್ಯಾಸ ರೂಪದವಾಗಿರದೆ ಅನೇಕ ರಾಷ್ಟ್ರೀಯ ದಾಖಲೆಗಳನ್ನು ಸ್ಥಾಪಿಸಿದೆ. ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಆಟಗಾರರನ್ನು ಬೆಳೆಸಿವೆ. ಹಾಗೆಯೇ ಹತ್ತಾರು ಸಾವಿರ ಹಳ್ಳಿಗಳಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಕೇಂದ್ರಗಳಿವೆ. ಇಲ್ಲಿ ಪಾರಂಪರಿಕ ಗ್ರಾಮೀಣ ಕ್ರೀಡೆಗಳ ಜೊತೆಗೆ ವಿವಿಧ ಆಟಗಳ ಸ್ಪರ್ಧೆ ನಡೆಯುತ್ತದೆ. ಚೀನಾದಲ್ಲಿ ವೃದ್ಧರಲ್ಲಿ ಕ್ರೀಡಾಸಕ್ತಿ, ವ್ಯಾಯಾಮದ ಕುರಿತು ಆಸಕ್ತಿ ಮೂಡಿಸುವ ಅವರನ್ನು ಈ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಕ್ರೀಡೋತ್ಸವಗಳನ್ನು ಸಂಘಟಿಸಲಾಗುತ್ತದೆ. ಈ ಕ್ರೀಡೋತ್ಸವ ಸಂಘಟಿಸುವ ವೃದ್ಧ ಕ್ರೀಡಾ ಒಕ್ಕೂಟಕ್ಕೆ ಲಕ್ಷಾಂತರ ಸದಸ್ಯರಿದ್ದಾರೆ. ದೊಡ್ಡ ದೊಡ್ಡ ನಗರಗಳಲ್ಲಿ ಲಕ್ಷಾಂತರ ವೃದ್ಧರು ಪಾರಂಪರಿಕ ಕ್ರೀಡೆಗಳು, ಆಧುನಿಕ ಕ್ರೀಡೆಗಳು ಹಾಗೂ ವ್ಯಾಯಾಮ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಪಾರ್ಕ್‌ಗಳವರೆಗೆ ನಿಧಾನವಾಗಿ ನಡೆದುಹೋಗಿ ಅಲ್ಲಿ ವಿಶ್ರಾಂತಿ ಪಡೆದು ನಿದ್ರೆ, ಹೊಡೆದು ಬರುವುದೇ

ಪುಟ 13ಕ್ಕೆ

...ಾರ್ಯಕ್ರಮವೆಂಬ ರೂಢಿಯಿಲ್ಲ.

...ಾರಂಪರಿಕ ಜಾನಪದ ಕ್ರೀಡೆಗಳು ದೂರ ...ಓಟಗಳು, ವೈದ್ಯಕೀಯ ವ್ಯಾಯಾಮಗಳು

ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದ ...್ರೀಡೆಗಳಲ್ಲದೆ ಚೀನಾದ್ದೇ ಆದ ಅನೇಕ ಪಾರಂಪರಿಕ ...ಜಾನಪದ ಕ್ರೀಡೆಗಳು, ಸಮರಾಭ್ಯಾಸಗಳಿವೆ. ವುಪಿ, ...ಾಚಿಕ್ವಾನ್, ಸಿಬಾಫಾ, ಕ್ರಿಗಾಂಗ್, ವೈಕಿ, ಕ್ಷಿಯಾಂಗ್ಚಿ ...ಮೊದಲಾದ ಕುಂಗ್‌ಫು, ಜುಡೊ ಜಾತಿಗೆ ಸೇರಿದ ...ಸಮರಾಭ್ಯಾಸಗಳು ಚೀನಾದ ಕ್ರಾಂತಿಯ ನಂತರ ಆಧುನಿಕ ...ಕ್ರೀಡೆಗಳ ಅಲೆಯಲ್ಲಿ ಕೊಚ್ಚಿಹೋಗದಂತೆ ಈ ...ಜಾನಪದ ಕ್ರೀಡೆ, ಸಮರಾಭ್ಯಾಸಗಳನ್ನು ...ಪುನರುಜ್ಜೀವನಗೊಳಿಸಲಾಗಿದೆ. ಅವುಗಳಿಗಾಗಿಯೇ ...ಸಂಶೋಧನಾ ಸಂಸ್ಥೆಗಳು ರೂಪುಗೊಂಡು ...ರಾಷ್ಟ್ರಾದ್ಯಂತ ಒಂದು ಕ್ರೀಡೆಯಲ್ಲಿ ಇದ್ದ ವಿವಿಧ ...ರೂಪಗಳ ಸಮೀಕ್ಷೆ ನಡೆಸಿವೆ. ರಾಷ್ಟ್ರಮಟ್ಟ ಹಾಗೂ ...ವಿವಿಧ ಮಟ್ಟಗಳಲ್ಲಿ ಈ ಕ್ರೀಡೆಗಳಲ್ಲಿಯೂ ಕ್ರೀಡಾ ...ಸಂಘಗಳು ರೂಪುಗೊಂಡಿವೆ. ರಾಷ್ಟ್ರೀಯ ವುಶು ...ಉತ್ಸವದಂತಹ ವಿವಿಧ ಉತ್ಸವಗಳನ್ನು ನಡೆಸಲಾಗುತ್ತದೆ. ಅಂತಹ ಒಂದು ಉತ್ಸವದಲ್ಲಿ 710 ವುಶು ವ್ಯಾಯಾಮಗಳನ್ನು ಕಂಡು ...ಹಿಡಿಯಲಾಯಿತು. ಇಡೀ ರಾಷ್ಟ್ರದಾದ್ಯಂತ ...ದಶಲಕ್ಷಗಟ್ಟಲೆ ಜನರು ಈ ಕ್ರೀಡೆಗಳಲ್ಲಿ ...ಭಾಗವಹಿಸುತ್ತಿದ್ದಾರೆ.

ಹುನಾನಾ ಪ್ರಾಂತದ ಒಂದು ...ತಾಲ್ಲೂಕಿನಲ್ಲಿಯೇ ಒಟ್ಟು ಜನತೆಯ ಶೇ.40ರಷ್ಟು ...ಜನರು ಒಟ್ಟು ಯುವ ಜನತೆಯ ಶೇ.70ರಷ್ಟು ...ಜನರು ಸಮರಾಭ್ಯಾಸದಲ್ಲಿ ಪಾಲ್ಗೊಂಡಿದ್ದಾರೆ.

ದೂರ ಓಟಗಳನ್ನು ಅನೇಕ ರಾಜ್ಯಗಳಲ್ಲಿ ...ಏರ್ಪಡಿಸಲಾಗುತ್ತದೆ. ಇದರಲ್ಲಿ ಹಲವು ...ದಶಲಕ್ಷಗಟ್ಟಲೆ ಜನರು ಭಾಗವಹಿಸಿದ್ದಾರೆ. ...ಆಸ್ಪತ್ರೆಗಳಲ್ಲಿ ಆರೋಗ್ಯಕಾರಕ ವ್ಯಾಯಾಮಗಳನ್ನು ...ಪ್ರತಿದಿನವೂ ಪ್ರತಿರೋಗಿಯೂ ಮಾಡುವ ಪದ್ಧತಿ ಅನೇಕ ಆಸ್ಪತ್ರೆಗಳಲ್ಲಿದೆ. ಅದರಿಂದ ಅನೇಕ ...ಹೃದ್ರೋಗಿಗಳು, ಕ್ಯಾನ್ಸರ್ ರೋಗಿಗಳು ಬೇಗ ...ಗುಣಮುಖರಾಗಲು ಸಹಾಯಕವಾಗಿದೆ.

...ಉನ್ನತ ಪ್ರಜಾಪ್ರಭುತ್ವದಿಂದ ಮಾತ್ರ ಸಾಧ್ಯ

ಕ್ರೀಡೇ, ವ್ಯಾಯಾಮಗಳಿಂದ ದೈಹಿಕ ಚುರುಕಿನ ಜೊತೆಗೆ ಮನಸ್ಸಿಗೆ ಉಲ್ಲಾಸವನ್ನು ಪಡೆದುಕೊಳ್ಳದೇ ಇದ್ದರೆ ಇಡೀ ರಾಷ್ಟ್ರಕ್ಕೆ ರಾಷ್ಟ್ರ ಸ್ವಂತ ಇಚ್ಛೆ ಹಾಗೂ ಸಾಮೂಹಿಕ ನಿರ್ಧಾರದಿಂದ ಪಾಲ್ಗೊಳ್ಳದೆ ಇದ್ದರೆ ಇಡೀ ರಾಷ್ಟ್ರಕ್ಕೆ ರಾಷ್ಟ್ರವೇ ಕ್ರೀಡೆಗಳಲ್ಲಿ ಭಾಗವಹಿಸುವ ಅಗಾಧ ಸಾಮುದಾಯಿಕ ಪ್ರಕ್ರಿಯೆ ಸಾಧ್ಯವಾಗುತ್ತದೇನು? ಈ ಭಾಗವಹಿಸುವಿಕೆಯೇ ಚೀನಾದಲ್ಲಿ ಪ್ರಜಾಪ್ರಭುತ್ವ ಆಳವಾಗಿ ಬೇರುಬಿಟ್ಟಿದೆ ಮತ್ತು ಪ್ರಜಾಪ್ರಭುತ್ವವೆಂದು ಕೊಚ್ಚಿಕೊಳ್ಳುವ ಇತರ ದೇಶಗಳಿಗಿಂತಲೂ ವ್ಯಾಪಕವಾದ, ಉನ್ನತವಾದ ಪ್ರಜಾಪ್ರಭುತ್ವವನ್ನು ಹೊಂದಿದೆ ಎಂಬುದನ್ನು ತೋರಿಸುತ್ತದೆ.

ಭಾರತ, ಅಮೇರಿಕ, ಯುರೋಪ್‌ಗಳ ಪ್ರಜಾಪ್ರಭುತ್ವವೆಂಬ ದೇಶಗಳಲ್ಲಿ ಕ್ರೀಡೆಗಳಲ್ಲಿ ಆಸಕ್ತಿ ಬೆಳೆಸಿಕೊಂಡವರು ವೈಯಕ್ತಿಕವಾಗಿ ಹೇಗೆ ಹೇಗೋ ಏಗಿಕೊಂಡು ಒದ್ದಾಡಿ ರಾಷ್ಟ್ರಮಟ್ಟಕ್ಕೆ ಬಂದು ತಲುಪಿದ ಮೇಲೆ ಅಥವಾ ಅಂತರರಾಷ್ಟ್ರೀಯ

ಜನರ ಸಾಮೂಹಿಕ ಕ್ರೀಡಾ ಚಟುವಟಿಕೆ



ಮಟ್ಟದಲ್ಲಿ ಪದಕ ವಿಜೇತರರಾದ ಮೇಲೆ ಅವರಿಗೆ ಹಣದ ಹೊಳೆಯೇ ಹರಿದುಬರುತ್ತದೆ. ದೊಡ್ಡ ಕಂಪನಿಗಳು ನೆರವು ನೀಡಲು, ಜಾಹೀರಾತು ಹಣ ನೀಡಲು ಮುಂದೆ ಬರುತ್ತಾರೆ. ಇನ್ನು ವ್ಯಾಯಾಮವೂ ಅಷ್ಟೇ. ನಿನಗೆ ಮನಸ್ಸಿದ್ದರೆ ಮಾಡಿಕೊ ಇಲ್ಲದಿದ್ದರೆ ಆರೋಗ್ಯಕ್ಕೆ ತೊಂದರೆಯಾಗಬಹುದು ಅನುಭವಿಸು, ವೈದ್ಯರಿಗೆ ಹಣ ತೆರು. ಇದು ಲಾಭದ ಮೇಲೆ ಆಸ್ತಿಗಳಿಕೆಯ ಮೇಲೆ ನಿಂತ ಸಮಾಜದ ವ್ಯವಸ್ಥೆ ಮತ್ತು ಅದಕ್ಕಾಗಿಯೇ ರೂಪುಗೊಂಡ ರಾಜಕೀಯ ಪಕ್ಷಗಳು ಸರ್ಕಾರಗಳಲ್ಲಿ ಕ್ರೀಡಾ ಅಭಿವೃದ್ಧಿ. ಕ್ರೀಡಾ ಅಭಿವೃದ್ಧಿ ಮಂಡಳಿಗಳ ಮೇಲೆ ಹೇರಿಕೊಂಡ ಕ್ರೀಡೆಯ ಬಗ್ಗೆ ಕಿಂಚಿತ್ ಜ್ಞಾನವೂ ಇಲ್ಲದ ರಾಜಕಾರಣಿಗಳು, ಅಧಿಕಾರಿಗಳು. ಕ್ರೀಡಾಳುಗಳ ಆಯ್ಕೆಯಲ್ಲಿಯೂ ಹೊಲಸು ರಾಜಕಾರಣ. ವೈಯಕ್ತಿಕ ಲಾಭಾಧಾರಿತ ಸಮಾಜಕ್ಕಿಂತ ಸಮಾಜದ ಹಿತವೇ ಪ್ರಧಾನವಾದ ವ್ಯವಸ್ಥೆಯಲ್ಲಿ ಹೇಗೆ ಇಂತಹ ಕ್ರೀಡಾ ಸಾಧನೆಯ ಉತ್ತುಂಗ ಸಾಧ್ಯವಾಗುತ್ತದೆ ಎಂಬುದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ಕ್ರೀಡಾ ನೆಲೆಗಳು

ಚೀನಾ ದೇಶದಲ್ಲಿ ಇಡೀ ದೇಶದಲ್ಲಿ ಕೋಟಿಗಟ್ಟಲೆ ಜನಸಮುದಾಯ ಕ್ರೀಡಾಭ್ಯಾಸ ಹಾಗೂ ವ್ಯಾಯಾಮಗಳಲ್ಲಿ ತೊಡಗಿರುವುದರ ಫಲವಾಗಿ ವಿವಿಧ ಪ್ರದೇಶಗಳು ಅಲ್ಲಿಯ ಜನರ ಅಭಿರುಚಿ, ಪರಂಪರೆ ಇವುಗಳಿಗನುಸಾರವಾಗಿ ವಿವಿಧ ಕ್ರೀಡೆಗಳಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದಾರೆ. ಹೀಗೆ ವಿವಿಧ ಪ್ರದೇಶಗಳು, ತಾಲ್ಲೂಕು, ಜಿಲ್ಲೆಗಳು ವಿವಿಧ ಕ್ರೀಡೆಗಳ ನೆಲೆಮನೆಗಳಾಗಿ ರೂಪುಗೊಂಡಿವೆ. ಕೆಲವು ಪ್ರದೇಶಗಳು ಈಜುಗಾರರ ನೆಲೆಗಳಾದರೆ ಮತ್ತೊಂದು ಓಟಗಾರರದ್ದು, ಇನ್ನೊಂದು ಭಾರ ಎತ್ತುವವರ ಹಾಗೆಯೇ ವಾಲಿಬಾಲ್, ಫುಟ್‌ಬಾಲ್, ಈ ರೀತಿಯ ಕ್ರೀಡೆಗಳ ನೆಲೆಮನೆಗಳು ರೂಪುಗೊಂಡಿವೆ. ಉದಾಹರಣೆಗೆ ಡೊಂಗುವಾನ್ ಎಂಬ ತಾಲ್ಲೂಕೊಂದರಲ್ಲಿ ಶೇ.50 ಭಾಗ ಜನತೆ ಈಜುಗಾರರು. 25,000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಆ ತಾಲ್ಲೂಕಿನ ಶಾಲೆಗಳಲ್ಲಿ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಅದರಲ್ಲಿ 1000 ವಿದ್ಯಾರ್ಥಿಗಳು ಬಿಡುವಿನ ವೇಳೆಯ ಕ್ರೀಡಾ ಶಾಲೆಗಳಲ್ಲಿ ವಿಶೇಷ ತರಬೇತಿ ಪಡೆಯುತ್ತಾರೆ. ಟೈಶ್ ತಾಲ್ಲೂಕಿನಲ್ಲಿ 2100 ವಾಲಿಬಾಲ್ ಮೈದಾನಗಳು 5300 ವಾಲಿಬಾಲ್ ತಂಡಗಳು ಇವೆ. ವೈಕ್ಸಿಯಾನ್ ತಾಲ್ಲೂಕಿನ ಎಲ್ಲ ಹಳ್ಳಿಗಳು, ಎಲ್ಲ ಪ್ರಾಥಮಿಕ, ಪ್ರೌಢಶಾಲೆಗಳು ಫುಟ್‌ಬಾಲ್ ತಂಡಗಳನ್ನು ಹೊಂದಿವೆ. ಬಾಲವಾಡಿ, ಅಂಗನವಾಡಿಗಳಲ್ಲಿ ಕೂಡ ಶಿಶು ಫುಟ್‌ಬಾಲ್ ತಂಡಗಳಿವೆ. ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಚೀನಾ ಹೇಗೆ ಚಿನ್ನದ ಪದಕಗಳ ಬೆಳೆಯನ್ನು ತೆಗೆಯಿತೆಂಬ ಬಗ್ಗೆ ಈ ಮೇಲಿನ ಮಾಹಿತಿ ಪಡೆದ ಮೇಲೆ ಯಾರಿಗಾದರೂ ಇನ್ನು ಆಶ್ಚರ್ಯ ಉಳಿದಿದೆಯೇ! ಹೇಳಿ ಜಗತ್ತಿನಲ್ಲಿ ಯಾವ ದೇಶಗಳಲ್ಲಿ ಇಂತಹ ಕ್ರೀಡಾ ಪ್ರಜಾಪ್ರಭುತ್ವವಿದೆ? ಜಗತ್ತಿನಲ್ಲಿ ಬಂಡವಾಳಶಾಹಿಗಳು ಅಸೂಯೆಯಿಂದ ಗಾಂಧಾರಿಯಂತೆ ಹೊಟ್ಟೆ ಬಗೆದುಕೊಂಡರೂ ಇನ್ನಿಲ್ಲದ ಅಪಪ್ರಚಾರ ಗಳನ್ನು ಮಾಡಿದರು ಇಂತಹದೊಂದು ಜನತಾ ಕ್ರೀಡಾ ಪ್ರಜಾಪ್ರಭುತ್ವವನ್ನು ರೂಪುಗೊಳಿಸಬಲ್ಲರೇ? ಭಾರತ ಇಂತಹ ಕ್ರೀಡಾ ಭಾಗವಹಿಸುವಿಕೆ ಮತ್ತು ಅಭಿವೃದ್ಧಿಯ ಉತ್ತುಂಗವನ್ನು ಯಾಕೆ ಮುಟ್ಟಲಾಗಿಲ್ಲ ಮತ್ತು ಹೇಗೆ, ಯಾವಾಗ ಸಾಧ್ಯವಾಗಬಹುದು.

ಚೀನಾ ಸಾಧಿಸಿದ ಈ ಉತಷ್ಟ ಸಾಧನೆಯ ಅಡಿಪಾಯ ಸರ್ವಾಧಿಕಾರಿ ವ್ಯವಸ್ಥೆ, ಮಿಲಿಟರಿ ರೀತಿಯ ಕ್ರೀಡಾ ತರಬೇತಿ, ಎಳೆವಯಸ್ಸಿನಲ್ಲಿಯೇ ಅವರಿಗೆ ಬಾಲ್ಯದ ಸಂತೋಷವನ್ನು ವಂಚಿಸಿ ಕ್ರೀಡಾಭ್ಯಾಸದಲ್ಲಿ ಅತಿಯಾಗಿ ದುಡಿಸಿ ಶೋಷಣೆ ಮಾಡಿದ್ದು ಎಂದು ಜಗತ್ತಿನಾದ್ಯಂತ ಬಾಯಿ ಬಡಿದುಕೊಳ್ಳುತ್ತಿರುವವರ ಉದ್ದೇಶವೇನು?

...ಕಿತ್ತು ತಿನ್ನುತ್ತಿರುವ ಹಣದುಬ್ಬರ

ಪುಟ 11ರಿಂದ

ಉದಾಹರಣೆಗೆ, ಹಣದುಬ್ಬರ ಪ್ರಮಾಣ 6.72 ಎಂದಿಟ್ಟುಕೊಂಡರೆ, ತಯಾರಿಕಾ ಸರಕುಗಳ ಕೊಡುಗೆ ಶೇ.4.29, ದಿನಬಳಕೆ ಉತ್ಪನ್ನಗಳ ಕೊಡುಗೆ ಶೇಕಡ 1.49 ಮತ್ತು ಇಂಧನ, ವಿದ್ಯುತ್ ಮತ್ತಿತರ ಉತ್ಪನ್ನಗಳ ಕೊಡುಗೆ ಶೇ.0.75 ರಷ್ಟು ಎಂದಾಗುತ್ತದೆ.

ತಪ್ಪು ಚಿಕಿತ್ಸೆ

ನಗದು ಚಲಾವಣೆ ಪ್ರಮಾಣ ಹೆಚ್ಚಾಗಿರುವುದರಿಂದ ಹಣದುಬ್ಬರ ಏರಿಕೆ ಕಾಣುತ್ತಿದೆ ಎಂದು ಭಾರತೀಯ ರಿಸರ್ವ್‌ಬ್ಯಾಂಕ್ ಸಿಆರ್‌ಆರ್ ರೆಪೋ ದರಗಳನ್ನು ನಿರಂತರವಾಗಿ ಹೆಚ್ಚಿಸುತ್ತಾ ಬಂದಿದೆ. ವ್ಯವಸ್ಥೆಯಲ್ಲಿನ ಹೆಚ್ಚಿನ ಹಣವನ್ನು ತಾನೇ ಹಿಡಿದಿಟ್ಟುಕೊಂಡಾಗ ಜನತೆಯ ಬಳಿ ಹಣ ಕಡಿಮೆಯಾಗುತ್ತದೆ. ಆಗ ಜನ ಖರೀದಿಗೆ ಮುಂದಾಗುವುದಿಲ್ಲ, ಆಗ ಬೇಡಿಕೆ ಕಡಿಮೆಯಾಗಿ ಬೆಲೆಗಳು ಕಡಿಮೆಯಾಗುತ್ತವೆ ಎಂಬುದು ಇದರ ಹಿಂದಿನ ತರ್ಕವಾಗಿದೆ.

ಇನ್ನೊಂದೆಡೆ, ಉದಾಹರಣೆಗೆ ಕೋಲಾರದಲ್ಲಿ ರೈತರು ಟೊಮಾಟೋವನ್ನು ಬೀದಿಗೆ ಸುರಿಯುತ್ತಿದ್ದರೆ ಬೆಂಗಳೂರಿನಲ್ಲಿ ಕೆ.ಜಿ.ಟೊಮೋಟೋ ದರ 6-10 ರೂ.ಗಳಷ್ಟಿತ್ತು. ಉತ್ಪಾದನೆಯಾಗುವ ದಿನಬಳಕೆ ವಸ್ತುಗಳನ್ನು ಸಮರ್ಪಕವಾಗಿ ಸರಬರಾಜು ಮಾಡದಿದ್ದಾಗಲೂ ಬೆಲೆ ಏರಿಕೆ ಕಾಣುತ್ತದೆ. ಭಾರತದಲ್ಲಿ ಈಗಲೂ ಸರಿಯಾದ ಸಂಸ್ಕರಣೆ ಮತ್ತು ಸರಬರಾಜು ವ್ಯವಸ್ಥೆ ಇಲ್ಲದೆ ಅಪಾರ ಪ್ರಮಾಣದ ಕೃಷಿ ಉತ್ಪನ್ನಗಳು ಕೊಳೆತು ನಾಶವಾಗುತ್ತಿವೆ. ಒಂದು ಪ್ರದೇಶದಲ್ಲಿ ಬೀದಿಗೆ ಸುರಿದರೆ ಮತ್ತೊಂದೆಡೆ ಬೆಲೆ ಏರಿಕೆಯಿಂದ ಜನ ತತ್ತರಿಸುತ್ತಾರೆ. ಅಲ್ಲಿ ರೈತರೂ ಸಾಯುತ್ತಾರೆ ಇಲ್ಲಿ ಸಾಮಾನ್ಯ ಜನರೂ ಸಾಯುತ್ತಾರೆ.

ತಯಾರಿಕಾ ವಲಯಕ್ಕೆ ಸಂಬಂಧಿಸಿ ಹೇಳುವುದಾದರೆ ಭಾರತದಲ್ಲಿ ಯಾವುದೇ ಕಾರ್ಖಾನೆ ತನ್ನ ಸಂಪೂರ್ಣ ಸಾಮರ್ಥ್ಯಕ್ಕೆ ತಕ್ಕಂತೆ ತಯಾರಿಕೆ ಮಾಡುತ್ತಿಲ್ಲ. ಇದರಿಂದ ವಸ್ತುಗಳ ಲಭ್ಯತೆ ಕಡಿಮೆಯಾಗಿ ಬೇಡಿಕೆ ಹೆಚ್ಚಾಗುತ್ತದೆ. ಆಗ ಬೆಲೆಗಳು ತನ್ನಿಂತಾನೆ ಗಗನಕ್ಕೇರುತ್ತವೆ. ಇದು ತಯಾರಿಕೆ ಕ್ಷೇತ್ರದ ನೋವಿನ ಕಥೆಯಾಗಿದೆ.

ಮತ್ತೊಂದೆಡೆ ವಾಯಿದಾ ಅಥವಾ ಮುಂಗಡ (ಫ್ಯೂಚರ್) ಒಪ್ಪಂದಗಳಿಂದಾಗಿ ಬೇಡಿಕೆ ಹೆಚ್ಚಾಗಿ ಬೆಲೆಗಳು ಏರಿಕೆ ಕಾಣುತ್ತವೆ. ಅಕ್ಕಿ, ಗೋಧಿ, ಬೇಳೆ ಮತ್ತಿತರ ಉತ್ಪನ್ನಗಳು ಫ್ಯೂಚರ್ ಒಪ್ಪಂದದಲ್ಲಿ ವಹಿವಾಟು ಕಂಡರೆ ಬೇರೆಡೆ ಈ ಉತ್ಪನ್ನಗಳು ಲಭ್ಯವಾಗುವುದಿಲ್ಲ. ಆಗ ಗ್ರಾಹಕರು ವಿಧಿಯಿಲ್ಲದೆ ಹೆಚ್ಚಿನ ಬೆಲೆಗೆ ಖರೀದಿಸುವಂತಾಗುತ್ತದೆ. ಹಾಗಾಗಿಯೇ ಅಗತ್ಯ ವಸ್ತುಗಳು, ಆಹಾರ ಧಾನ್ಯಗಳ ಫ್ಯೂಚರ್ ಟ್ರೇಡಿಂಗ್ ನಿಷೇಧಿಸಬೇಕೆಂದು ಎಡಪಕ್ಷಗಳು ಭಾರಿ ಒತ್ತಾಯ ಹೇರಿದ್ದವು. ಬೆಲೆ ಏರಿಕೆ ಮತ್ತು ಫ್ಯೂಚರ್ ಒಪ್ಪಂದಕ್ಕೆ ಯಾವುದೇ ಸಂಬಂಧ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಹೇಳುತ್ತಾ ಬಂದಿದ್ದರು. ಆದರೆ ಎಡಪಕ್ಷಗಳು ನಿಷೇಧ ಹೇರುವ ತನಕ ಬಿಡಲೇ ಇಲ್ಲ. ಈಗ ಬೆಲೆ ಏರಿಕೆ ನಿಯಂತ್ರಣಕ್ಕೆ ಬರುವ ಸೂಚನೆಗಳು ಕಾಣದಿರುವುದರಿಂದ, ಫ್ಯೂಚರ್ ಒಪ್ಪಂದ ನಿಷೇಧದ ವ್ಯಾಪ್ತಿಗೆ ಇನ್ನಷ್ಟು ಉತ್ಪನ್ನಗಳನ್ನು ಸೇರಿಸುವುದಾಗಿ ಕಾಂಗ್ರೆಸ್ ವಕ್ತಾರ ಸಭೆಯಲ್ಲಿ ಚಿದಂಬರಂ ಅವರೇ ಹೇಳಿದರು.

ಇಂಧನ ಕ್ಷೇತ್ರದಲ್ಲಿ ಬೆಲೆ ಏರಿಕೆ ಮತ್ತು ಮುಂಗಡ ವ್ಯಾಪಾರ (ಫ್ಯೂಚರ್ ಒಪ್ಪಂದಗಳು) ಅಂತರರಾಷ್ಟ್ರೀಯ ಮಾರುಕಟ್ಟೆ ಜಗತ್ತಿನ ಎಲ್ಲಾ ಸಟ್ಟಾ ಬಂಡವಾಳ ತೈಲ ಫ್ಯೂಚರ್‌ಮುಂಗಡ ವ್ಯಾಪಾರದಲ್ಲಿ ತೊಡಗಿಸಲಾಗಿದೆ. ಇದರಿಂದಾಗಿ 5 ವರ್ಷಗಳ ಹಿಂದೆ ಒಂದು ಬ್ಯಾರಲ್ ಕಚ್ಚಾ ತೈಲ 35 ಡಾಲರ್ ಇದ್ದದ್ದು, ಇತ್ತೀಚೆಗೆ 145 ಡಾಲರ್‌ವರೆಗೂ ತಲುಪಿತ್ತು. (ಈ ಕುರಿತು ಜನಶಕ್ತಿ ಲೇಖನವನ್ನು ಪ್ರಕಟಿಸಿದೆ).


ಹಣದುಬ್ಬರ ಸಂಕೀರ್ಣ ಹಣಕಾಸು ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಈ ಕುರಿತು ಬಂಡವಾಳಶಾಹಿ ಸರ್ಕಾರಗಳಿಗೆ ಗೊತ್ತಿದ್ದರೂ ನಿಯಂತ್ರಿಸಲು ಮುಂದಾಗುವುದಿಲ್ಲ. ಇಂತಹ ಬಿಕ್ಕಟ್ಟಿನಲ್ಲೂ ಲಾಭ ಮಾಡುವುದು ಹೇಗೆ ಎಂದು ಉದ್ಯಮಿಗಳು ಚಿಂತಿಸುತ್ತಾರೆ.

ಜಗದಗಲ

ಶರತ್‌ಚಂದ್ರ

ಕ್ಯಾಸ್ಟ್ರೋಗೆ 'ಮಾನವತಾವಾದಿ' ಪ್ರಶಸ್ತಿ

ಜಗತ್ತಿನಲ್ಲಿ ಎಷ್ಟೋ ಬಗೆಯ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಗತಿ ನಡೆಯುತ್ತಿದೆ. ನೂರಾರು, ಸಾವಿರಾರು ಮನುಷ್ಯರು ಮಾಡುವ ಕೆಲಸವನ್ನು ಒಂದೋ ಎರಡು ಯಂತ್ರಗಳು ಮಾಡುವ ತಾಂತ್ರಿಕ ಆವಿಷ್ಕಾರಗಳು ನಡೆದಿವೆ. ಕಾರ್ಮಿಕರು ದಿನಗಟ್ಟಲೆ ತಿಂಗಳುಗಟ್ಟಲೆ ಮಾಡುವ ಕೆಲಸವನ್ನು ಕೆಲವೇ ನಿಮಿಷ, ದಿನಗಳಲ್ಲಿ ಮಾಡಿ ಮುಗಿಸಬಹುದಾದ ತಾಂತ್ರಿಕ ಪ್ರಗತಿ ಸಾಧ್ಯವಾಗುತ್ತಿದೆ.



ಬಂಡವಾಳಶಾಹಿ ಸಮಾಜದಲ್ಲಿ ಇಂತಹ ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಆಗುವುದೇನು? ಎಷ್ಟೆಷ್ಟೋ ಜನ ಕಾರ್ಮಿಕರು ಕೆಲಸ ಕಳೆದುಕೊಂಡು ಮನೆಗೆ ಹೋಗಬೇಕಾಗುತ್ತದೆ. ತಂತ್ರಜ್ಞಾನ, ವಿಜ್ಞಾನ, ಸಂಶೋಧನೆ, ಸಂತೋಷ ಆನಂದ ತರುವ ಬದಲಿಗೆ ಅಸಮಾನತೆ, ಹಸಿವು, ದುಃಖವನ್ನು ತರುತ್ತದೆ. ಆದರೆ ಉನ್ನತ ತಂತ್ರಜ್ಞಾನ ವಿಜ್ಞಾನಗಳ ಅಳವಡಿಕೆಯಿಂದ ಯಾರೂ ಉದ್ಯೋಗ ಕಳೆದುಕೊಳ್ಳಬೇಕಿಲ್ಲ, ಕಳೆದುಕೊಳ್ಳಬಾರದು. ಅದಕ್ಕೆ ಬದಲಿಗೆ ಕಾರ್ಮಿಕರ ದುಡಿಮೆಯ ಅವಧಿಯನ್ನು ಕಡಿತ ಮಾಡುವ ಮೂಲಕ ಅದನ್ನು ಸಮಾಜಕ್ಕೆ, ಮನುಕುಲಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದು.

ಎಲ್ಲಾ ಕಾರ್ಮಿಕರು ದಿನಕ್ಕೆ 8-10 ಗಂಟೆ ದುಡಿಯುವ ಬದಲಿಗೆ 4-5 ಗಂಟೆಗಳ ಕಾಲ ದುಡಿದು ಉಳಿದ ಸಮಯದಲ್ಲಿ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಶೈಕ್ಷಣಿಕ ಉದ್ದೇಶಕ್ಕಾಗಿ ಇನ್ನಷ್ಟು ಹೆಚ್ಚು ಸಮಯವನ್ನು ಮೀಸಲಿಡುವಂತೆ ಮಾಡಿದರೆ ಮನುಕುಲಕ್ಕೆ ವಿಜ್ಞಾನ, ತಂತ್ರಜ್ಞಾನಗಳಲ್ಲಿನ ಪ್ರಗತಿ ಎಂತಹ ಸಂತೋಷವನ್ನು ಅನುಕೂಲವನ್ನು ತರಬಹುದು!

ಹೀಗೆಂದು ಚಿಂತಿಸಿದವರು ಫಿಡೆಲ್ ಕ್ಯಾಸ್ಟ್ರೋ. ಫಿಡೆಲ್ ಅವರ ಜೀವಪರ, ಮಾನವೀಯ ಚಿಂತನೆಗೆ ಇದು ಒಂದು ಉದಾಹರಣೆ.

ಫಿಡೆಲ್ ಕ್ಯಾಸ್ಟ್ರೋ ಮಾತನಾಡಿದರೆ ಗುಡುಗು ಗುಡುಗಿದಂತೆ. ಅತ್ಯಂತ ಪ್ರಖರವಾದ ವಿಚಾರಧಾರೆ ಚಿಂತನೆ ಅವರದು. ಅವರ ಜೀವನ, ಹೋರಾಟಗಳು ಬಹುತೇಕ ಜಗತ್ತಿಗೆ ಪರಿಚಿತವಾದದ್ದೇ. ಕ್ಯೂಬಾ ದೇಶದ ಯಶಸ್ವಿ ಕ್ರಾಂತಿಗೆ ನಾಯಕತ್ವ ನೀಡಿ ಕ್ಯೂಬಾವನ್ನು ಅಮೆರಿಕದ ದುಷ್ಟ ಹಿಡಿತದಿಂದ ಮುಕ್ತಗೊಳಿಸಿದವರು.

ಫಿಡೆಲ್ ನಾಯಕತ್ವದಲ್ಲಿ ಕ್ಯೂಬಾ ಶಿಕ್ಷಣ, ಆರೋಗ್ಯ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಸಾಧಿಸಿದ ನೈಜ ಪ್ರಗತಿಯು ಜಗದ್ವಿಖ್ಯಾತ. ದುಡಿಯುವ ಜನರ ಸಿದ್ಧಾಂತವಾದ ಸಮಾಜವಾದವನ್ನು ಅಪ್ಪಿಕೊಂಡದ್ದಕ್ಕಾಗಿ ಕ್ಯೂಬಾದ ವಿರುದ್ಧ, ಫಿಡೆಲ್ ವಿರುದ್ಧ ಅಮೆರಿಕಾ ಮಾಡದ ಪಿತೂರಿ ಇಲ್ಲ. ನಡೆಸದ ಮಸಲತ್ತೇ ಇಲ್ಲ. ಇಂತಹ ಅಮೆರಿಕವನ್ನು ಅನುಗಾಲವೂ ಎದುರಿಸುತ್ತಲೇ, ಸೆಣಸುತ್ತಲೇ ಮುನ್ನಡೆ ಸಾಧಿಸುತ್ತಿರುವವರು ಕ್ಯೂಬಾದ ಜನತೆ. ಈ ಮಹಾನ್ ಹೋರಾಟದ ಕಪ್ತಾನ ಫಿಡೆಲ್.

ಫಿಡೆಲ್ ಕೇವಲ ಕ್ಯೂಬಾ ಅಧ್ಯಕ್ಷರಾಗಿ ಉಳಿಯಲಿಲ್ಲ. ಇಡೀ ಜಗತ್ತಿನ ದುಡಿಯುವ ವರ್ಗದ ದನಿಯಾಗಿ ಮಾತನಾಡಿದರು. ಬಡ ದೇಶಗಳ ಸಂಕಟಗಳು, ಬಡತನ, ಬಡದೇಶಗಳನ್ನು ಸುಲಿಯುವ, ಅವರ ಸಂಕಟಗಳನ್ನು ಹೆಚ್ಚಿಸುವ ಬಂಡವಾಳಶಾಹಿ ದೇಶಗಳ ನಿರ್ದಯ ಶೋಷಣೆ ಇವುಗಳನ್ನು ಕುರಿತು ದನಿಯೇರಿಸಿದವರು. ಅನ್ಯಾಯ, ಅನೀತಿ, ದಬ್ಬಾಳಿಕೆ, ಅಮಾನವೀಯತೆ ಕಂಡಾಗ ಸಿಡಿಗುಂಡಿನಂತೆ ಸಿಡಿದವರು. ಅಮೆರಿಕ ನೇತೃತ್ವದ ಜಾಗತಿಕ ಸಾಮ್ರಾಜ್ಯಶಾಹಿಯ ಘೋರ ಮುಖದ ಕುರಿತು ಎಳೆಎಳೆಯಾಗಿ ಜಗತ್ತಿನ ಮುಂದೆ ಬಿಡಿಸಿಟ್ಟವರು.

ಕ್ಯೂಬಾ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾದ ಮೇಲೆ ಸಹ ಮನುಕುಲದ ಕುರಿತ ಅವರ ಚಿಂತನ-ಮಂಥನ ನಡೆದೇ ಇದೆ. ಅದರ ಅತಃಸತ್ವ ಎಂದರೆ ಮನುಕುಲದ ಕುರಿತ ಆಳವಾದ ಪ್ರೀತಿ, ಕಾಳಜಿ.


ಇಂತಹ ಕ್ಯಾಸ್ಟ್ರೋಗೆ ಇದೀಗ ಒಂದು ಪ್ರಶಸ್ತಿ. ದಕ್ಷಿಣ ಆಫ್ರಿಕಾದ ಸರಕಾರ 2008 ರ 'ಮಾನವತಾವಾದಿ' ಪ್ರಶಸ್ತಿಯನ್ನು ಫಿಡೆಲ್ ಕ್ಯಾಸ್ಟ್ರೋ ಅವರಿಗೆ ಅರ್ಪಿಸಿದೆ. ದೇಶಗಳ ಗಡಿಗಳನ್ನು ಮೀರಿ ಮನುಕುಲಕ್ಕಾಗಿ ನೀಡಿದ ಕೊಡುಗೆಗಳಿಗಾಗಿ ಈ ಪ್ರಶಸ್ತಿ ಅಂತ ದಕ್ಷಿಣ ಆಫ್ರಿಕಾದ ಸರ್ಕಾರ ಹೇಳಿದೆ. ದಕ್ಷಿಣ ಆಫ್ರಿಕಾದವರಲ್ಲದವರಿಗೆ ಈ ಪ್ರಶಸ್ತಿ ನೀಡುತ್ತಿರುವುದು ಇದೇ ಮೊದಲು. ಸೆಪ್ಟೆಂಬರ್ 24 ರಂದು ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ಪರಂಪರೆಯ ದಿನ ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದಂತೆ.

ಈಗ ಪ್ರಶಸ್ತಿಗೊಂದು ವಿಶೇಷ ಗೌರವ ಬಂದಂತಾಗಿದೆ. ಅಲ್ಲವೇ?

ಖಲಿದಾ ಜಿಯಾ ಜೈಲಿನಿಂದಾಚೆಗೆ

ಜನವರಿ 2007 ರಲ್ಲಿ ಬಾಂಗ್ಲಾದೇಶದಲ್ಲಿ ಜಾರಿಯಾದ ತುರ್ತು ಪರಿಸ್ಥಿತಿಯಲ್ಲಿ ಸೆಪ್ಟೆಂಬರ್ 3, 2007 ರಂದು ಸೇನಾಡಳಿತ ಮಧ್ಯಂತರ ಸರ್ಕಾರದಿಂದ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾಗಿ ಜೈಲುಪಾಲಾಗಿದ್ದ ಖಲೀದಾ ಜಿಯಾ ಅವರನ್ನು ಬಾಂಗ್ಲಾದೇಶದ ಸರ್ಕಾರ ಬಿಡುಗಡೆ ಮಾಡಿದೆ. ಖಲೀದಾ ಜಿಯಾ ಅವರು ಬಾಂಗ್ಲಾದೇಶದ ಪ್ರಧಾನ ಮಂತ್ರಿಯಾಗಿದ್ದವರು. ಮತ್ತು ಬಾಂಗ್ಲಾದೇಶದ ನ್ಯಾಷನಲಿಸ್ಟ್ ಪಕ್ಷದ ಮುಖಂಡರಾಗಿದ್ದಾರೆ.

ಇದೇ ಬಿಎನ್‌ಪಿ ಪಕ್ಷದ ಹಿರಿಯ ಪ್ರಧಾನ ಕಾರ್ಯದರ್ಶಿ ಹಾಗೂ ಖಲೀದಾ ಜಿಯಾ ಅವರ ದೊಡ್ಡ ಮಗ ತಾರಿಖ್ ರೆಹಮಾನನ್ನು ಸರ್ಕಾರ ಕಳೆದ ವಾರವಷ್ಟೇ ಬಿಡುಗಡೆ ಮಾಡಿತ್ತು. ಖಲಿದಾ ಜಿಯಾ ಅವರು ಸರಕಾರದೊಂದಿಗೆ ಮುಂದಿನ ಚುನಾವಣೆಗಳ ಕುರಿತು ಮಾತುಕತೆ ನಡೆಸುವುದಾಗಿ ತಿಳಿಸಿದ್ದಾರೆ. ಬಾಂಗ್ಲಾದೇಶದ ಮಾಜಿ ಮುಖ್ಯಸ್ಥರು, ಅವಾಮಿ ಲೀಗ್ ಪಕ್ಷದ ಮುಖಂಡರೂ ಆದ ಶೇಖ್ ಹಸಿನಾ ಅವರು,



ಎರಡು ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಜನವರಿ 2007 ರಿಂದ ಮುಚ್ಚಲಾಗಿದ್ದ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ ಕಚೇರಿಯನ್ನು ಇದೀಗ ತೆರೆಯಲಾಗಿದೆ. ಭಾರತದ ನೆರೆಯ ದೇಶವಾದ ಬಾಂಗ್ಲಾದಲ್ಲಿನ ಮುಂದಿನ ಬೆಳವಣಿಗೆಗಳೇನು. ಅದು ಪ್ರಜಾಪ್ರಭುತ್ವದ ಬೆಳವಣಿಗೆಗೆ ಪೂರಕವಾಗಿರುವುದೇ ಕಾದು ನೋಡಬೇಕಾಗಿದೆ.

ಜರ್ದಾರಿ ಪಾಕಿಸ್ತಾನದ ಅಧ್ಯಕ್ಷರು

ಪರ್ವೆಜ್ ಮುಷರಫ್ ನಿರ್ಗಮನದ ನಂತರ ಖಾಲಿಯಾಗಿದ್ದ ಪಾಕಿಸ್ತಾನದ ಅಧ್ಯಕ್ಷ ಸ್ಥಾನಕ್ಕೆ ಪಾಕಿಸ್ತಾನ ಪೀಪಲ್ಸ್ ಪಾರ್ಟಿ(ಪಿಪಿಪಿ)ಯ ಅಭ್ಯರ್ಥಿ ಆಸಿಫ್ ಅಲಿ ಜರ್ದಾರಿ ಚುನಾಯಿತರಾಗಿದ್ದಾರೆ. ಬೆನಜಿಲ್ ಭುಟ್ಟೋ ಅವರು ಉಗ್ರಾಮಿಗಳ ದಾಳಿಗೆ ಸಿಕ್ಕಿ ಹತರಾದಾಗ ನಂತರ ಬೆನಜಿರ್ ಅವರ ಪತಿ ಜರ್ದಾರಿ ಪಿಪಿಪಿ ಪಕ್ಷದ ನಾಯಕತ್ವ ವಹಿಸಿದ್ದರು. ಇದೀಗ ಅವರು ಪಾಕಿಸ್ತಾನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪಾಕಿಸ್ತಾನ ಸಂಸತ್ತಿನ ಎರಡು ಸದನಗಳು ಹಾಗೂ ನಾಲ್ಕು ಪ್ರಾಂತಿಯ ಶಾಸನ ಸಭೆಗಳ ಒಟ್ಟು 702 ಪೈಕಿ 481 ಮತಗಳನ್ನು ಪಡೆದ ಜರ್ದಾರಿ ಗೆದ್ದಿದ್ದಾರೆ.

ಪ್ರಜಾಸತ್ತಾತ್ಮಕವಾದ ಚುನಾವಣೆಗಳಿಗೆ ಅಡೆತಡೆಗಳು ಮತ್ತು ಅನಂತರ ದಿನಗಳಲ್ಲಿ ಚುನಾಯಿತರಲ್ಲದ ಅಧ್ಯಕ್ಷ ಮುಷರಫ್‌ರಿಂದ ಖುರ್ಚಿ ತೆರವು ಮಾಡುವ ವಿಚಾರದಲ್ಲಿ ಪ್ರತಿರೋಧ ಇಂತಹದ್ದನ್ನೆಲ್ಲ ಕಂಡ ಪಾಕಿಸ್ತಾನದಲ್ಲಿ ಆರಂಭವಾಗಿರುವ ಬದಲಾವಣೆಗಳು ನೂತನ ಅಧ್ಯಕ್ಷರ ಆಯ್ಕೆಯೊಂದಿಗೆ ಒಂದು ಪ್ರಮುಖ ಘಟ್ಟವನ್ನು ಮುಟ್ಟಿದಂತಾಗಿದೆ.

ಪಾಕಿಸ್ತಾನದ ನೂತನ ಅಧ್ಯಕ್ಷರು ಹಾಗೂ ಪ್ರಧಾನಿ ನೂತನ ಸರ್ಕಾರದ ಮುಂದೆ ಇರುವ ಸವಾಲು ಕಡಿಮೆಯದೇನಲ್ಲ. ಭಯೋತ್ಪಾದಕ ಉಗ್ರಗಾಮಿಗಳ ಹಾವಳಿ, ಗಂಭೀರವಾಗಿರುವ ಆರ್ಥಿಕ ಬಿಕ್ಕಟ್ಟು, ಸೀಮಿತ ಪ್ರಜಾಪ್ರಭುತ್ವವನ್ನು ಕಬಳಿಸಲು ಕಾದು ಕುಳಿತ ಸೇನೆ, ಧಾರ್ಮಿಕ ಮೂಲಭೂತವಾದ ಇವುಗಳೆಲ್ಲದರ ಮರೆಯಲ್ಲಿ ನಿಂತಿರುವ ಅಮೆರಿಕ...

ಪಾಕಿಸ್ತಾನದ ಪರಿಸ್ಥಿತಿ ಬಹಳ ಸಂಕೀರ್ಣವಾಗಿದೆ. ಹಲವು ಗೋಜಲುಗಳಿವೆ. ಹೊಸ ನಾಯಕತ್ವ ಇವನ್ನೆಲ್ಲಾ ಹೇಗೆ ಎದುರಿಸುವುದೋ ಕಾದು ನೋಡಬೇಕಿದೆ.

ಹೊಸ ಅಧ್ಯಕ್ಷರು ಭಾರತದೊಂದಿಗೆ ಸಂಬಂಧ ಸುಧಾರಣೆ ಕುರಿತು ಮಾತನಾಡಿದ್ದಾರೆ. ಭಾರತದೊಂದಿಗೆ ಆರ್ಥಿಕ, ವಾಣಿಜ್ಯ ಸಂಬಂಧ ಸುಧಾರಣೆಗೆ ಒತ್ತು ನೀಡುವುದಾಗಿ ಜರ್ದಾರಿ ಹೇಳುತ್ತಾ ಬಂದಿದ್ದಾರೆ. 'ಎಲ್ಲಕ್ಕೂ ಮೊದಲು ಕಾಶ್ಮೀರ' ಎನ್ನುವ ಪಾಕಿಸ್ತಾನದ 'ಸಾಂಪ್ರದಾಯಿಕ' ಧೋರಣೆಯನ್ನು ಮುಂದೆ ಒಡ್ಡದೇ ಸಂಬಂಧ ಸುಧಾರಣೆಗೆ ಭಾರತ - ಪಾಕಿಸ್ತಾನಗಳ ಬಾಂಧವ್ಯದ ಬೆಳವಣಿಗೆಗೆ ಒತ್ತು ನೀಡುವವು ಎನ್ನುವ ಧೋರಣೆ ಸಕಾರಾತ್ಮಕವಾದದ್ದೇ. ಅಧ್ಯಕ್ಷರಾಗಿ ಜರ್ದಾರಿಯವರ ಆಯ್ಕೆಯನ್ನು ಪಾಕಿಸ್ತಾನದ ಪ್ರಮುಖ ವಿರೋಧ ಪಕ್ಷವಾಗಿರುವ ಪಾಕಿಸ್ತಾನ್ ಮುಸ್ಲಿಂ ಲೀಗ್‌ನ ಮುಖಂಡರೂ,ಮಾಜಿ ಪ್ರಧಾನಿಯೂ ಆದ ನವಾಜ್ ಶರೀಫ್ ಸ್ವಾಗತಿಸಿದ್ದಾರೆ.

ಬೆನಜಿರ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ನಡೆದಿದೆಯೆನ್ನಲಾದ ಹಲವು ಭ್ರಷ್ಟಾಚಾರದ ಹಗರಣಗಳು ಬೆನಜಿಲ್ ಪತಿ ಜರ್ದಾರಿಯವರ ಕಡೆಗೆ ಕೈ ತೋರಿದ್ದವು. ಈ ಹಗರಣಗಳ ಕರಿ ನೆರಳು ಮುಂದಿನ ದಾರಿಗೆ ಅಡ್ಡಿಯಾಗಿ ಕಾಡುವವೇ? ಇತರ ಹಲವು ಪಕ್ಷಗಳಿಗೆ ಹೋಲಿಸಿದರೆ ಸ್ವಲ್ಪ ಉದಾರವಾದಿ ಎನ್ನಬಹುದಾದ ಪಿಪಿಪಿ ಪಕ್ಷ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸ್ವಲ್ಪವಾದರೂ ಕಾಣಿಕೆ ನೀಡಬಹುದೇ ಎಂಬ ಪ್ರಶ್ನೆಗಳಿಗೆ ಕಾಲವೇ ಉತ್ತರ ಹೇಳಬೇಕು.

ಚುಚ್ಚುಮದ್ದು

ಮೂರು ಮತ್ತೊಂದು ಕಾಲು

‘ಒರಿಸ್ಸಾದಲ್ಲಿ ಲಕ್ಷ್ಮಣಾನಂದ ಸರಸ್ವತಿ ಸ್ವಾಮೀಜಿ ಹತ್ಯೆ ಬಳಿಕ ನಡೆದ ವಿದ್ಯಮಾನಗಳನ್ನು ಪ್ರತಿಭಟಿಸಲು ಕ್ರೈಸ್ತ ಶಿಕ್ಷಣ ಸಂಸ್ಥೆಗಳನ್ನು ಮಾಧ್ಯಮಗಳಾಗಿ ಬಳಸಲು ಅವಕಾಶವಿಲ್ಲ’

– ವಿಶ್ವೇಶ್ವರ ಹೆಗಡೆ ಕಾಗೇರಿ

→ ಮಂಚಕ್ಕೆಷ್ಟು ಕಾಲು ಅಂದರೆ ಮೂರು ಮತ್ತೊಂದು ಅಂದರಂತೆ, ‘ಬಳಿಕ ನಡೆದ ವಿದ್ಯಮಾನ’ ಅನ್ನೋದರ ಬದಲಿಗೆ ನೇರವಾಗಿ ಕ್ರಿಶ್ಚಿಯನ್ನರ ಮೇಲಿನ ದಾಳಿ, ಚರ್ಚ್ ಧ್ವಂಸ ಅಂದರೆ ಆಗದೇ?

ಅಪಾಯಕಾರಿ?

‘ಕ್ರಿಶ್ಚಿಯನ್ ಪಾದ್ರಿಗಳು ಬಡವರನ್ನು ಶ್ರೀಮಂತರನ್ನು ಸಹ ಹಣದ ಆಮಿಷವೊಡ್ಡಿ ತಮ್ಮ ಧರ್ಮಕ್ಕೆ ಸೆಳೆಯುತ್ತಿದ್ದಾರೆ. ಕ್ರೈಸ್ತ ಮಿಷನರಿಗಳು ಉಗ್ರಗಾಮಿಗಳಿಗಿಂತ ಅಪಾಯಕಾರಿ ಇವರು ಹಿಂದೂ ಧರ್ಮದ ಸಂಸ್ಕೃತಿಯನ್ನೇ ನಾಶಪಡಿಸಲು ಪ್ರಯತ್ನಿಸುತ್ತಿದ್ದಾರೆ’

→ ನಿಮಗಿಂತಲೂ ಅಪಾಯಕಾರಿಯೇ?

ಇದ್ದದ್ದು ಇದ್ದಾಂಗ...

ಅಕ್ರಮ ಗಣಿಗಾರಿಕೆ

“ಸಚಿವ ಜನಾರ್ಧನರೆಡ್ಡಿ ತಮ್ಮ ರಾಜಕೀಯ ಬಲ ಉಪಯೋಗಿಸಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ. ನಮ್ಮ ಕುಟುಂಬದವರು 4 ದಶಕಗಳಿಂದ ಗಣಿಗಾರಿಕೆಯಲ್ಲಿ ತೊಡಗಿದ್ದು, ಇತ್ತೀಚೆಗೆ ಈ ಉದ್ಯಮಕ್ಕೆ ಬಂದಿರುವ ರೆಡ್ಡಿ ಅವರು ಗಣಿಗಾರಿಕೆ ಪ್ರದೇಶಗಳ ನಕ್ಷೆಯನ್ನೇ ಬದಲಿಸಿದ್ದಾರೆ. ಆಂಧ್ರದಲ್ಲಿರುವ ತಮ್ಮ ಗಣಿ ವ್ಯಾಪ್ತಿಯನ್ನು ದಾಟಿ ಕರ್ನಾಟಕದ ಪ್ರದೇಶವನ್ನು ಅತಿಕ್ರಮಣ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸಚಿವರ ನಿರ್ದೇಶನದಂತೆ ಕುಣಿಯುತ್ತಿದ್ದು, ನಮ್ಮ ನೆರವಿಗೆ ಯಾರೂ ಬರುತ್ತಿಲ್ಲ. ನಮ್ಮ ಪ್ರದೇಶಕ್ಕೆ ನುಗ್ಗಿ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಲಾಗಿದೆ. ನಾವು ಗುತ್ತಿಗೆ ಪಡೆದಿರುವ 93 ಎಕರೆ ಗಣಿಗಾರಿಕಾ ಪ್ರದೇಶವನ್ನು ಬಿಟ್ಟು ಹೋಗುವಂತೆ ಒತ್ತಡ ಹೇರಲಾಗುತ್ತಿದೆ’

–ಟಪಾಲ್ ಗಣೇಶ್, ಟಿ.ಎನ್.ಆರ್. ಮೈನ್ಸ್‌ನ ಮಾಲೀಕರು

★

ಜೆಮ್‌ಶೆಡ್‌ಪುರ ಆಗಲಿದೆ

ಸಿಂಗೂರ್‌ನಲ್ಲಿ ನ್ಯಾನೋ ಕಾರು ಉದ್ಯಮ ಪ್ರಾರಂಭ ಎಂದರೆ ಅಲ್ಲಿ ಹೊಸ ಯುಗದ ಆರಂಭ ಎಂದೇ ಅರ್ಥ. ನಾನು ಆ ರಾಜ್ಯದವನು. ಈ ಉದ್ಯಮದಿಂದ ಸಿಂಗೂರ್ ಜೆಮ್‌ಶೆಡ್‌ಪುರ ಆಗಲಿದೆ’

–ಸೌರವ್‌ಗಂಗೂಲಿ, ಖ್ಯಾತ ಕ್ರಿಕೆಟ್ ಪಟು

★

ಹಣ ದುರುಪಯೋಗ

ಭಯೋತ್ಪಾದನೆಯ ವಿರುದ್ಧ ಸಮರಕ್ಕೆ ಅಮೆರಿಕಾ ಪಾಕಿಸ್ತಾನಕ್ಕೆ ನೀಡಿದ ನೆರವನ್ನು ಅದು ದುರುಪಯೋಗಪಡಿಸಿಕೊಳ್ಳುತ್ತಿದೆ. ಈ ಹಣ ಭಾರತದ ವಿರುದ್ಧ ಯುದ್ಧ ನಡೆಸಲು ಸಿದ್ಧತೆಗಾಗಿ ಬಳಸುತ್ತಿದೆ. ನಾನು ಅಧಿಕಾರಕ್ಕೆ ಬಂದರೆ ಪಾಕ್ ಅಫಘಾನಿಸ್ತಾನ ಗಡಿ ಬಳಿಯಲ್ಲಿರುವ ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಲು ಒತ್ತಡವನ್ನು ಹೇರುತ್ತೇನೆ.

– ಬರಾಕ್ ಒಬಾಮ, ಅಮೇರಿಕಾದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

★

ಅನಿವಾರ್ಯ

‘ತೃತೀಯ ರಂಗವನ್ನು ಅಸ್ತಿತ್ವಕ್ಕೆ ತರುವುದು ರಾಜಕೀಯ ಅನಿವಾರ್ಯವೇ ಮುಂದಿನ ಲೋಕಸಭಾ ಚುನಾವಣೆಯ ಮುನ್ನವೇ ತೃತೀಯ ರಂಗ ಅಸ್ತಿತ್ವಕ್ಕೆ ಬರಲಿದೆ. ಯುಪಿಎ ಸರ್ಕಾರ ಜನವಿರೋಧಿ ಮತ್ತು ಅಮೇರಿಕಾದ ಪರ ನೀತಿಯನ್ನು ಅನುಸರಿಸುತ್ತಿದೆ...

– ಹೆಚ್.ಡಿ.ದೇವೇಗೌಡ, ಜೆಡಿ(ಎಸ್) ರಾಷ್ಟ್ರಾಧ್ಯಕ್ಷರು

★

ಯುರೇನಿಯಂ ಕೊಡೆವು

“ಭಾರತವು ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ (ಎನ್‌ಪಿಟಿ)ಕ್ಕೆ ಸಹಿ ಹಾಕದ ಹೊರತು ಆ ದೇಶಕ್ಕೆ ಯುರೇನಿಯಂ ರಫ್ತು ಅಸಾಧ್ಯ”

– ಆಸ್ಟ್ರೇಲಿಯಾ ದೇಶ ಭಾರತವು ಎನ್‌ಎಸ್‌ಜಿ ದೇಶಗಳ ನಿರ್ಬಂಧದಿಂದ ವಿನಾಯ್ತಿ ಪಡೆದಿದೆ ಎಂದು ಘೋಷಣೆಯಾದ ನಂತರ

★


ಸಹಕರಿಸಬೇಕು

‘ಭಾರತ ಅಮೇರಿಕಾ ಅಣು ಒಪ್ಪಂದಕ್ಕೆ ಈಗಿನ ಕಾಂಗ್ರೆಸ್‌ನಿಂದ ಒಪ್ಪಿಗೆ ಸಿಗದಿದ್ದರೆ ಅಮೆರಿಕನ್ ಕಂಪನಿಗಳಿಗೆ ಅನಾನುಕೂಲ ಮಾಡದಂತೆ ಭಾರತ ಸಹಕರಿಸಬೇಕು’

– ಕಾಂಡೋಲೀಸಾರೈಸ್, ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ

★

ಭೂ ಸುಧಾರಣಾ ಚಳುವಳಿಗಾರ
ಪಿ.ಎಸ್.ಭಟ್ ಇನ್ನಿಲ್ಲ



ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಯ ಮುಂಚೂಣಿ ನಾಯಕರಾಗಿದ್ದ ಸಂಗಾತಿ ಪಿ.ಸೀತಾರಾಂಭಟ್, ತನ್ನ ಕೊನೆಯ ಕ್ಷಣದವರೆಗೂ ತಾನು ನಂಬಿದ್ದ ಸಿದ್ಧಾಂತಕ್ಕೆ ತಿಲಾಂಜಲಿ ನೀಡದೆ ಉಳಿದವರು. ಸುಮಾರು 80 ವರ್ಷ ಪ್ರಾಯದ ಭಟ್‌ರವರು ಹೃದಯಾಘಾತದಿಂದ ಆಗಸ್ಟ್ 18 ರಂದು ಮಚ್ಚಿನ ಗ್ರಾಮದ ಬಂಗಳಾಯಿ ಎಂಬಲ್ಲಿ ನಿಧನರಾದರು.

ಅವರು ತಾಲ್ಲೂಕಿನ ರೈತರ ಮೇಲೆ ಭೂಮಾಲೀಕರಿಂದ ದೌರ್ಜನ್ಯ ನಡೆಯುತ್ತಿದ್ದಾಗ ರೈತರನ್ನು ಸಂಘಟಿಸುತ್ತಾ ತಾಲ್ಲೂಕಿನಲ್ಲಿ ರೈತ ಚಳುವಳಿಗೆ ವಿಶೇಷ ಕೊಡುಗೆ ನೀಡಿದ್ದರು. 1968 ರಲ್ಲಿ ಸಿಪಿಐ(ಎಂ) ಸೇರ್ಪಡೆಗೊಂಡ ಪಿ.ಎಸ್.ಭಟ್‌ರವರು 1972 ರಲ್ಲಿ ಪಕ್ಷದ ತಾಲ್ಲೂಕು ಕಾರ್ಯದರ್ಶಿಯಾಗಿ ಆಯ್ಕೆಗೊಂಡು 1980ರವರೆಗೆ ಪಕ್ಷವನ್ನು ಮುನ್ನಡೆಸಿದರು. ರೈತರು ನೀಡಬೇಕಾಗಿದ್ದ ಗೇಣಿಗೆ ರಶೀದಿ ನೀಡದೆ ಒಕ್ಕಲೆಬ್ಬಿಸುತ್ತಿದ್ದ ಭೂ ಮಾಲೀಕರ ವಿರುದ್ಧ ರೈತರನ್ನು ಸಂಘಟಿಸಿ ನಡೆದ ಹೋರಾಟಗಳು ತಾಲ್ಲೂಕಿನಲ್ಲಿ ರೈತ ಚಳುವಳಿಯನ್ನು ಬಲಿಷ್ಠಗೊಳಿಸಿತು. ಎಐಕೆಎಸ್‌ನ ತಾಲ್ಲೂಕು ಉಪಾಧ್ಯಕ್ಷರಾಗಿದ್ದ ಅವರು ಭೂ ಸುಧಾರಣಾ ಕಾಯಿದೆ ಜಾರಿಗಾಗಿ, ನ್ಯಾಯಗೇಣಿ ಜಾರಿಗಾಗಿ ದ.ಕ.ಜಿಲ್ಲೆಯಲ್ಲಿ ನಡೆದ ಚಳುವಳಿಯ ಮುಂಚೂಣಿ ನಾಯಕರಾಗಿದ್ದರು. ಭೂ ಮಾಲೀಕರಿಗೆ ಸಿಂಹಸ್ವಪ್ನರಾಗಿದ್ದರು. ಆ ದಿನಗಳಲ್ಲಿ ನಡೆಯುತ್ತಿದ್ದ ಎಲ್ಲಾ ಹೋರಾಟಗಳು ಪೋಲೀಸ್ ಇಲಾಖೆ ಹಾಗೂ ಭೂ ಮಾಲೀಕರಲ್ಲಿ ನಡುಕ ಹುಟ್ಟಿಸುತ್ತಿತ್ತು. 1973ರಲ್ಲಿ ಭೂ ಸುಧಾರಣೆ ಕಾಯ್ದೆ ಜಾರಿಗೊಳಿಸಲು ಒತ್ತಾಯಿಸಿ ಮಂಗಳೂರಿನಿಂದ ಬೆಂಗಳೂರಿಗೆ ಮಡಿಕೇರಿ ಮೂಲಕ ಹೋದ ಕಾಲ್ನಡಿಗೆ ಜಾಥಾದ ನಾಯಕತ್ವ ಕೂಡ ವಹಿಸಿದ್ದ ಅವರು ರೈತರ ಪ್ರಶ್ನೆಯಲ್ಲಿ ರಾಜಿರಹಿತ ಹೋರಾಟಗಳಿಗೆ ನೇತೃತ್ವ ನೀಡಿದ್ದರು. ಸಂಗಾತಿ ಸೀತಾರಾಂಭಟ್‌ರೊಂದಿಗೆ ಕಾಂ: ಕೆ.ವಿ.ರಾವ್ (ಯಳಚಿತ್ತಾಯ) ಕಾಂ: ಧೂಮಭಂಡಾರಿ, ಕಾಂ:ರುಕ್ಮಯ್ಯ ಭಂಡಾರಿ, ಕಾಂ: ರಾಂ ನಾಯಕ್ ಮೊದಲಾದವರು ಪಕ್ಷದ ಬೆಳವಣಿಗೆ ಹಗಲಿರುಳು ದುಡಿದಿದ್ದರು.

70ರ ದಶಕದಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಗೊಳಿಸದೆ ರಾಜ್ಯದ ಯಾವುದೇ ಸಚಿವರನ್ನು ಜಿಲ್ಲೆಗೆ ಕಾಲಿಡಲು ಬಿಡುವುದಿಲ್ಲ. ಎಂದು ತೀರ್ಮಾನಿಸಲಾಗಿತ್ತು. ಪಕ್ಷದ ತೀರ್ಮಾನಗಳಿಗೆ ಕಟ್ಟುಬದ್ಧರಾಗಿದ್ದ ಸಂಗಾತಿ ಭಟ್‌ರವರು ಆ ಸಂದರ್ಭ ಜಿಲ್ಲೆ ಗಾಗಮಿಸಿದ ಕಂದಾಯ ಸಚಿವರನ್ನು ಬೆಳಿಗ್ಗೆಯಿಂದ ಸಂಜೆ ತನಕ ತಡೆದು ನಿಲ್ಲಿಸಿದ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 70ರ ಕಾಲಘಟ್ಟದಲ್ಲಿ 2 ಬಾರಿ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದಿಂದ ಸ್ಪರ್ಧಿಸಿ ಕೆಲವೇ ಮತಗಳ ಅಂತರದಿಂದ ಸೋತಿದ್ದರೂ ಕೂಡಾ ಆ ಸಮಯದಲ್ಲಿ ಪಕ್ಷದ ಅಸ್ತಿತ್ವವನ್ನು ತೋರ್ಪಡಿಸಿದ್ದರು.

ರೈತರ ಚಳುವಳಿಯ ಅಗ್ರಗಣ್ಯ ನಾಯಕರೊಬ್ಬರು ನಮ್ಮಿಂದ ದೂರವಾದರೂ, ಅವರ ಹೋರಾಟಗಳು ಇಂದಿಗೂ ಪ್ರಸ್ತುತವಾಗಿವೆ. ನಿರಂತರ ಚಳುವಳಿಯ ಮೂಲಕ ಭೂ ಸುಧಾರಣಾ ಕಾಯ್ದೆ ಮೂಲಕ ಭೂಮಿ ದೊರೆತರೂ ಕೂಡ ಅದೇ ಭೂಮಿಯಲ್ಲಿ ಬೆಳೆದ ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆಯಿಲ್ಲ. ನ್ಯಾಯ ಕೇಳಿ ಹೋರಾಟಗೈದವರಿಗೆ ಗುಂಡಿಕ್ಕಿ ರೈತರನ್ನು ಕೊಲ್ಲುವ ಸರ್ಕಾರ, ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಕೃಷಿ ಭೂಮಿಯಿಂದ ರೈತರ ಬಲತ್ಕಾರದ ಒಕ್ಕಲೆಬ್ಬಿಸುವಿಕೆ ನಡೆಯುತ್ತಿರುವ ಇಂದಿನ ದಿನಗಳಲ್ಲಿ ಅಂದಿನ ಹೋರಾಟಗಳು ಇಂದಿಗೂ ಪ್ರಸ್ತುತವೆನಿಸುವುದು ಸುಳ್ಳಲ್ಲ.

ಶೇ.ನಿ.ಲ್ಯಾಲ

ಕಾನೂನು ಕೈಗೆತ್ತಿಕೊಳ್ಳುತ್ತೇವೆ

‘ಭಾರತದಲ್ಲಿ ನಡೆಯುತ್ತಿರುವ ಮತಾಂತರವು ಅಂತರರಾಷ್ಟ್ರೀಯ ಪಿತೂರಿಯಾಗಿದ್ದು, ದೇಶದ ಹಲವೆಡೆ ಪಾಶ್ಚಾತ್ಯ ರಾಷ್ಟ್ರಗಳ ಪಾದ್ರಿಗಳ ನೆಲೆ ನಿಂತು ಇಲ್ಲಿನ ಜನರ ಬಡತನ, ಮೂಢನಂಬಿಕೆ, ಅಜ್ಞಾನ, ಆಸೆಗಳನ್ನು ಬಂಡವಾಳವಾಗಿ ಮಾಡಿಕೊಂಡು ಸಾಮೂಹಿಕ ಮತಾಂತರ ಕಾರ್ಯದಲ್ಲಿ ತೊಡಗಿದ್ದಾರೆ.ದಾವಣಗೆರೆಯ ಬಾಡಾ ಗ್ರಾಮದಲ್ಲಿ ಚರ್ಚ್ ಧ್ವಂಸ ಪ್ರಕರಣವು ಹಿಂದೂ ಜಾಗರಣಾ ವೇದಿಕೆಯ ಆಶಯಕ್ಕೆ ಅನುಗುಣವಾಗಿಯೇ ನಡೆದಿದೆ. ಅಮೇರಿಕಾದ ಕ್ರೈಸ್ತ ಮಿಷನರಿ ಪ್ರೇರಿತ ಮತಾಂತರ ಷಡ್ಯಂತ್ರಕ್ಕೆ ಹಿಂದೂ ಸಮಾಜದ ಸರಿಯಾದ ಉತ್ತರ ನೀಡಿದ್ದಾರೆ. ನಾವು ಧರ್ಮದ ಉಳಿವಿಗಾಗಿ ಕಾನೂನು ಕೈಗೆತ್ತಿಕೊಳ್ಳಲು ಹಿಂಜರಿಯುವುದಿಲ್ಲ.’

ಜಗದೀಶ್ ಕಾರಂತ್, ರಾಜ್ಯ ಸಂಚಾಲಕರು, ಹಿಂದೂ ಜಾಗರಣ ವೇದಿಕೆ

★

ಬಂಡವಾಳಶಾಹಿ ಸಮಾಜದಲ್ಲಿ...

‘ನಾವು ಬದುಕುವುದು ಕ್ಯಾಪಿಟಲಿಸ್ಟ್ ಸಮಾಜದಲ್ಲಿ ಇಲ್ಲಿ ನಾವು ಏನನ್ನಾದರೂ ಪಡೆಯಬೇಕೆಂದರೆ ಅದಕ್ಕೆ ಬೆಲೆ ತೆರಬೇಕು. ನಾನು ನನ್ನ ಕನ್ಯತ್ವದ ಮಾರಾಟಕ್ಕೆ ಅವಕಾಶ ಪಡೆಯುವುದರಲ್ಲಿ ಏನಿದೆ ತಪ್ಪು”

ಬ್ರುನೆಟ್, ಉನ್ನತ ಶಿಕ್ಷಣದ ಶುಲ್ಕಗಳನ್ನು ಕಟ್ಟುವುದಕ್ಕಾಗಿ ತನ್ನ ದೇಹವನ್ನೇ ಹರಾಜಿಗಿಟ್ಟು ಕೊಂಡಿರುವ ಅಮೇರಿಕಾದ ವಿದ್ಯಾರ್ಥಿನಿ



ಧಿಮಾಕು - ಕಥೆಯಿಲ್ಲದ ವ್ಯರ್ಥ ಕಸರತ್ತು

ಹಿರಿಯ ನಟ ಶ್ರೀನಿವಾಸಮೂರ್ತಿ ಮತ್ತೊಮ್ಮೆ ತಮ್ಮ ಮಗ ನವೀನ್‌ಕೃಷ್ಣರನ್ನು ಪಣಕ್ಕೊಡ್ಡಿದ್ದಾರೆ. ಗಾಂಧಿನಗರದಲ್ಲಿ ಮಗ ಸ್ಟಾರ್ ಆಗಿ ನೆಲೆ ನಿಲ್ಲಬೇಕೆಂಬುದು ಅವರ ದೊಡ್ಡ ಆಸೆ. ಅದಕ್ಕಾಗಿ ತಾವೇ ನಿರ್ಮಿಸಿದ 'ಧಿಮಾಕು' ಈ ವಾರ ತೆರೆಕಂಡಿದೆ. ಗೆಲ್ಲಲೇಬೇಕೆಂಬ ಹಠಕ್ಕೆ ಬಿದ್ದವರಂತೆ ಎಲ್ಲಾ ಮನರಂಜನಾ ಸರಕುಗಳನ್ನು ಹೇರಳವಾಗೇ ತುಂಬಲಾಗಿದೆ. ಸಭ್ಯ ನಟನೆಂದೇ ಹೆಸರಾಗಿರುವ ಶ್ರೀನಿವಾಸ ಮೂರ್ತಿಯವರ ಪ್ರತಿಷ್ಠೆಗೆ ಭಂಗ ತರದಂತೆ, ಯಾರಿಗೂ ಮುಜುಗರವಾಗದಂತೆ ಕಥೆ ನಿರೂಪಿಸುವಲ್ಲಿ ನಿರ್ದೇಶಕ ಮಾಗೇಶ್‌ಕುಮಾರ್ ಕೂಡಾ ಎಚ್ಚರವಹಿಸಿದ್ದಾರೆ.

ನವೀನ್ ಕೃಷ್ಣ ಇಡೀ ಚಿತ್ರವನ್ನು ಆವರಿಸಿಕೊಂಡಿದ್ದಾರೆ. ನಟನಾ ಕೌಶಲ್ಯವನ್ನು ಅಪ್ಪನಿಂದ ಬಳುವಳಿ ಪಡೆದಿರುವಂತೆ ಈಗಾಗಲೇ ಉತ್ತಮ ನಟನೆಂದು ಗುರುತಿಸಿಕೊಂಡಿರುವ ನವೀನ್ ಸಹಜವಾಗೇ ಉತ್ತಮ ನಟನೆಯಿಂದ ಗಮನ ಸೆಳೆಯುತ್ತಾರೆ. ಆದರೆ ಅವರ ವೇಷಭೂಷಣ ಹೆಂಗೆಳೆಯರನ್ನು ಗಾಬರಿಬೀಳಿಸುವುದು ನಿಜವಾದರೂ ಚಿತ್ರದ ಕಥೆಗೆ ಅವರ ಈ 'ಗೆಟಪ್' ಪೂರಕವಾಗಿಯೇ ಇದೆ.

ಚಿತ್ರದ ಕಥೆಯಲ್ಲಿ ವಿಶೇಷವಾದುದ್ದೇನೂ ಇಲ್ಲ. ಇದೊಂದು ಸಾಧಾರಣ ಪ್ರೇಮ ಕಥೆಯೇ. ಬಾಲಮುರುಳಿ ಕೃಷ್ಣ (ನವೀನ್) ಒಬ್ಬ ಉಡಾಳ ಯುವಕ. ಓದಿನಲ್ಲಿ ಮುಂದಿರದಿದ್ದರೂ ಸ್ನೇಹಿತರೊಂದಿಗೆ ಅಂಡಲೆಯುವುದರಲ್ಲಿ ಮುಂದು, ಜೊತೆಗೆ ಅಪ್ಪನ ಮುದ್ದು. ಕೆಟ್ಟವನಲ್ಲದಿದ್ದರೂ ಒಂಥರಾ ಧೀಮಾಕಿನ ಹುಡುಗನೇ ಅವನು. ಒಂದು ಹುಡುಗಿ(ಫ್ಲೋರಾ ಸೈನಿ)ಯನ್ನು ಇಷ್ಟಪಡುತ್ತಾನೆ. ಅವಳನ್ನು ಒಲಿಸಿಕೊಳ್ಳುವ ಸಲುವಾಗಿ ಅವಳ ಸ್ನೇಹಿತೆಗೆ 'ಐ ಲವ್ ಯೂ' ಎಂದು ಗಂಟುಬೀಳುತ್ತಾನೆ. ಅವಳು ಒಪ್ಪದಿದ್ದಾಗ ಇವಳಿಗೆ ದಂಬಾಲು ಬೀಳುತ್ತಾನೆ, ನಿನ್ನ ಸ್ನೇಹಿತೆಯನ್ನು ಒಪ್ಪಿಸು ಎಂದು. ಸರಿ, ಇವನ ಗುಣಾವಗುಣಗಳನ್ನು ಅವಳು ಅಳೆಯುತ್ತಾಳೆ. ಆತ ಸಭ್ಯನೆಂದು ಮನದಟ್ಟಾದಾಗ ಅವಳಿಗೇ ಅವನ ಮೇಲೆ ಒಲವು ಶುರು. ಆದರೂ ಸ್ನೇಹಿತೆಗೆ ಈತನನ್ನು ಒಪ್ಪಿಕೊಳ್ಳಲು ಒತ್ತಾಯಿಸಿದಾಗ ಅವಳು ತಿರಸ್ಕರಿಸುವುದಲ್ಲದೇ ಬೇಕಿದ್ದರೆ ನೀನೇ ಕಟ್ಟಿಕೊ ಎಂದಾಗ ಆಕೆಯೇ ಅವನನ್ನು ಪ್ರೇಮಿಸುತ್ತಾಳೆ. ನಾಯಕನ ಉದ್ದೇಶವೂ ಅದೇ ಆಗಿರುತ್ತದೆ.

ಆದರೆ ನಾಯಕಿಯ ತಾಯಿ ಸಾಮಾನ್ಯಳಲ್ಲ. ಹಲವು ವ್ಯವಹಾರಗಳುಳ್ಳ ಕೋಟ್ಯಾಧೀಶೆ. ಇವನ ಪುಂಡಾಡಿಕೆಗಳನ್ನು ಹಲವು ಬಾರಿ ನೋಡಿದವಳು ಆಕೆ. ಇಂತಹ ಬೀದಿ ಅಲೆಯುವವ ತನ್ನ ಅಳಿಯನಾಗುವುದನ್ನು ಸಹಿಸದೆ ನಾಯಕ-ನಾಯಕಿಯರ ಪ್ರೇಮ ಸೌಧಕ್ಕೆ ಅಡ್ಡಗೋಡೆಯಾಗುತ್ತಾಳೆ. ಚಿತ್ರದ ಹೂರಣ ಇದೇ,



ಭಾವಿ ಅತ್ತೆ - ಅಳಿಯನ ಸವಾಲ್ - ಜವಾಬ್. ಅತ್ತೆಯನ್ನು ತನ್ನ ಧಿಮಾಕ್ (ಬುದ್ಧಿ)ಯಿಂದ ಹೇಗೆ ಅಣಿಯುತ್ತಾನೆ ಎಂಬುದೇ ಚಿತ್ರದ ಸಾರಾಂಶ. ಅತ್ತೆ ಚಿತ್ರದಲ್ಲಿ ಎಷ್ಟು ಆವರಿಸಿಕೊಳ್ಳುತ್ತಾಳೆಂದರೆ ಇಲ್ಲಿ ನಾಯಕಿಯೂ ಗೌಣವಾಗಿಬಿಡುತ್ತಾಳೆ. ನಾಯಕಿಗಿಂತ ಈಕೆಯೇ ಚಿತ್ರದ ಹೈಲೆಟ್.

ಜನರನ್ನು ಸೆಳೆಯಲು ಸಾಕಷ್ಟು ಗಿಮಿಕ್‌ಗಳನ್ನು ಮಾಡಲಾಗಿದೆ. ಹಾಡೊಂದರಲ್ಲಿ ರಾಜ್ ಗುಣಗಾನವಾದರೆ, ಕೆಲವು ಸನ್ನಿವೇಶಗಳಲ್ಲಿ ಹಿಂಬದಿಯಲ್ಲಿ ಶಂಕರ್‌ನಾಗ್ ಕ್ಯಾಲೆಂಡರ್ ರಾರಾಜಿಸುತ್ತಿರುತ್ತದೆ. ಇದೆಲ್ಲದರ ಜೊತೆಗೆ ಜಗ್ಗೇಶ್, ಕೋಮಲ್, ಶರಣ್ ಓಂಪ್ರಕಾಶ್ ರಾವ್ ಒಂದೊಂದು ಸನ್ನಿವೇಶದಲ್ಲಿ ಹಾದುಹೋಗುತ್ತಾರೆ. ಹಾಸ್ಯ ಮಿಶ್ರಿತ ವೇಗದ ನಿರೂಪಣೆಯೊಂದಿಗೆ ನಿರ್ದೇಶಕ ಮಾಗೇಶ್ ಕುಮಾರ್ ಭರವಸೆ ಮೂಡಿಸಿದರೆ, ಪಂಚಿಂಗ್ ಡೈಲಾಗ್ ಪ್ರೇಕ್ಷಕರಿಗೆ ಖುಷಿ ಕೊಡುತ್ತವೆ.

ಕಥೆಯ ವ್ಯಾಪ್ತಿಯೇ ಸೀಮಿತವಾಗಿರುವುದರಿಂದ ಎಲ್ಲಾ ಆಕರ್ಷಣೆಗಳಿದ್ದಾಗ್ಯೂ ಯಾವುದೋ ಕೊರತೆ ಕಾಡಿದಂತಾಗುತ್ತದೆ. ಕೆಲವು ಹಾಡುಗಳು ಗಮನ ಸೆಳೆಯುತ್ತವೆ ಆದರೆ ಕೆಟ್ಟ ಛಾಯಾಗ್ರಹಣ ಕಿರಿಕಿರಿಯಾಗುತ್ತದೆ.

ನಟನೆಯಲ್ಲಿ ಸಣ್ಣಪುಟ್ಟ ಪಾತ್ರಧಾರಿಗಳೆಲ್ಲರೂ ಅಚ್ಚುಕಟ್ಟಾಗಿ ನಟಿಸಿ ಚಿತ್ರಕ್ಕೆ ಪೂರಕವಾಗಿದ್ದಾರೆ. ಆದರೆ ನಟ ನವೀನ್ ಮತ್ತು ಅತ್ತೆ ಪಾತ್ರಧಾರಿ ವಿಶೇಷವಾಗಿ ಗಮನ ಸೆಳೆಯುತ್ತಾರೆ.



ಜಗತ್ತಿನ ಗಮನಸೆಳೆದ ವಿಜ್ಞಾನಿಗಳ 'ಮಹಾಸ್ಫೋಟ' ಪರೀಕ್ಷೆ

ಇಲ್ಲಿಯೂ ನಡೆದಿದೆ ದೈವವಾದಿ ಹಾಗೂ ಭೌತವಾದಿಗಳ ನಡುವೆ ಸಂಘರ್ಷ


ಕಳೆದ ವಾರ ಜಿನ್‌ಈವಾದ್‌ಲ್ಲಿ ವಿಜ್ಞಾನಿಗಳು ಆರಂಭಿಸಿದ ದೈತ್ಯ ಡಿಕ್ಕಿಕಾರಕ (ಲೈಟ್ ಹ್ಯಾಡ್ರನ್ ಕೊಲೈಡರ್) ಪ್ರಯೋಗದ ಕುರಿತು ವರದಿ ಮಾಡದೇ ಇರುವ




ಪತ್ರಿಕೆಗಳು ಬಹುಶ: ಯಾವೊಂದೂ ಇರಲಿಲ್ಲವೇನೋ. ಕೆಲವು ಆಸ್ತಿಕ ಶಿರೋಮಣಿಗಳು ಮತ್ತು ಪತ್ರಿಕೆಗಳಂತೂ ವಿಜ್ಞಾನಿಗಳ ಪ್ರಯೋಗದಿಂದ ಪ್ರಳಯವೋ, ತ್ಸುನಾಮಿ-ತರಹದ ಕಂಪನದಂಥಹ ಕೇಡು ಜರುಗಲಿದೆಯೆಂದು ಅನಗತ್ಯ ಭಯ ವ್ಯಕ್ತಪಡಿಸಿದ್ದರು.

ಭೂಗರ್ಭ ಪ್ರಯೋಗಾಲಯದಲ್ಲಿ ಪರಮಾಣು ಕಣಗಳ ಡಿಕ್ಕಿ:

ಆದರೆ, ಭೂಮಿಯಿಂದ ಸುಮಾರು 330 ಅಡಿ ಆಳದಲ್ಲಿ ನಿರ್ಮಿಸಿರುವ 27 ಮೈಲು ಉದ್ದದ ಸುರಂಗ ಮಾರ್ಗದಲ್ಲಿ ಮೊದಲ ಪ್ರೋಟಾನ್ (ಯಾವುದೇ ವಸ್ತುವನ್ನು ವಿಭಜಿಸಿದಾಗ ಮೂಡಿಬರುವ ಅತ್ಯಂತ ಸಣ್ಣ ಕಣಗಳು) ಕಣಗಳ ರಾಶಿಯನ್ನು ಉಡಾಯಿಸುವುದರೊಂದಿಗೆ ವಿಶ್ವದ ಅತಿ ದುಬಾರಿ ವೆಚ್ಚದ ಮತ್ತು ಮಹತ್ವಾಕಾಂಕ್ಷಿ ಪರೀಕ್ಷೆಯು ಶುಭಾರಂಭಗೊಂಡಿತು. ಪ್ರೋಟಾನ್ ಪುಂಜವನ್ನು ಪ್ರದಕ್ಷಿಣಾಕಾರದಲ್ಲಿ ಮತ್ತು ಪರಸ್ಪರ ವಿರುದ್ದ ದಿಕ್ಕಿನಲ್ಲಿ ಹರಿಯಬಿಟ್ಟಾಗ ಈ ಪುಂಜವು ಬಹುತೇಕ ಬೆಳಕಿನ ವೇಗಕ್ಕೆ ಸರಿಸಮನಾದ ವೇಗದಲ್ಲಿ ಚಲಿಸುವಂತೆ ಮಹಾ ಡಿಕ್ಕಿಕಾರಕವನ್ನು ಸುರಂಗ ಮಾರ್ಗೋಪಾದಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಇದರಿಂದಾಗಿ ಪ್ರೋಟಾನ್ ಪುಂಜದಲ್ಲಿನ ಕಣಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಸೂರ್ಯನ ತಾಪಮಾನಕ್ಕಿಂತ ಒಂದು ಲಕ್ಷ ಪಟ್ಟು ಹೆಚ್ಚಿನ ಉಷ್ಣಾಂಶ ಹೊರಹೊಮ್ಮುತ್ತದೆ. ಇಂಥಹ ವಾತಾವರಣದಲ್ಲಿ ಪ್ರೋಟಾನ್ ಕಣಗಳು ಮತ್ತು ಅದರಿಂದ ವಿಭಜನೆಗೊಂಡ ಕಣಗಳ ಸ್ವಭಾವವನ್ನು ಅಧ್ಯಯನ ಮಾಡಲಾಗುತ್ತದೆ. ವಿಶ್ವವು 'ಮಹಾ ಸ್ಫೋಟ' ದಿಂದ ರೂಪುಗೊಂಡ



ಬಗೆಯ ವಾತಾವರಣವನ್ನು ಈ ಪ್ರಯೋಗಶಾಲೆಯು ಹೋಲುವುದರಿಂದ, ವಿಶ್ವ ರೂಪುಗೊಂಡ ಕುರಿತಂತೆ ನಾವಿನ್ನೂ ಅರಿಯಬೇಕಿರುವ ಹಲವು ಮಹತ್ತರ ವಿಷಯಗಳು ಬೆಳಕಿಗೆ ಬರುತ್ತವೆಂಬುದು ವಿಜ್ಞಾನಿಗಳ ಮಹದಾಸೆ. ಈ ಮಹಾ ಪರೀಕ್ಷೆಯಲ್ಲಿ ಭಾರತದ ವಿಜ್ಞಾನಿಗಳೂ ಸೇರಿದಂತೆ ಜಗತ್ತಿನ ಆಯ್ದ ಅತ್ಯುತ್ತಮ 5,000 ವಿಜ್ಞಾನಿಗಳು ಕಾರ್ಯನಿರತರಾಗಿದ್ದು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪ್ರಯೋಗಶಾಲೆಯ ನಿರ್ಮಾಣಕ್ಕಾಗಿ ಯೂರೋಪಿಯನ್ ಪರಮಾಣು ಸಂಶೋಧನಾ ಸಂಸ್ಥೆ (ಸಿಇಆರ್‌ಎನ್)



ಪುಟ 6 ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH